

# ಭಕ್ತಿಯಲ್ಲಿ ನೀವು
# ಸಂಸಾರಿಗಳಾ – ವ್ಯಭಿಚಾರಿಗಳಾ


<u>ಗ್ರಂಥಕರ್ತ</u> : **ತ್ರಿಮತ ಏಕೈಕ ಗುರುವು**


**ಆಧ್ಯಾತ್ಮಿಕ ಸಾಮ್ರಾಜ್ಯ ಚಕ್ರವರ್ತಿ, ಶತಾಧಿಕ ಗ್ರಂಥಕರ್ತ**

**ಇಂದೂ ಜ್ಞಾನ ಧರ್ಮಪ್ರದಾತ, ಸಂಚಲನಾತ್ಮಕ ರಚಯಿತ, ತ್ರೈತ ಸಿದ್ಧಾಂತ ಆದಿಕರ್ತ**

**ಶ್ರೀಶ್ರೀಶ್ರೀ ಆಚಾರ್ಯ ಪ್ರಬೋಧಾನಂದ ಯೋಗೀಶ್ವರರು**

ತೆಲುಗುನಿಂದ ಕನ್ನಡಕ್ಕೆ ಅನುವಾದ

**ಇಂದೂಶ್ರೀ ಕವಿತ, ಇಂದೂಶ್ರೀ ಶ್ರೀದೇವಿ**



<u>ಗ್ರಂಥ ಮುದ್ರಣ</u>

**ಇಂದೂ ಜ್ಞಾನವೇದಿಕೆ**

(Estd. in 1978 - Regd.No.: 168/2004)

ತ್ರೈತ ಶಕ : 41 ಪ್ರಥಮ ಮುದ್ರಣ : ಜೂನ್–2019

ಪ್ರತಿಗಳು : 1000 **ಬೆಲೆ. /–**

## ಇಂದೂ ಜ್ಞಾನವೇದಿಕೆ ಪ್ರಕಟಣೆಗಳು

01. ತ್ರೈತ ಸಿದ್ಧಾಂತ ಭಗವದ್ಗೀತೆ.
02. ಆಧ್ಯಾತ್ಮಿಕ ಪ್ರಶ್ನೆಗಳು–ಉತ್ತರಗಳು.
03. ಧರ್ಮ–ಅಧರ್ಮ.
04. ಇಂದೂತ್ವವನ್ನು ಕಾಪಾಡೋಣ.
05. ಯಜ್ಞಗಳು (ಸತ್ಯವಾ–ಅಸತ್ಯವಾ?)
06. ದೆವ್ವಗಳಹಾಗೂ–ಭೂತಗಳ ಯಥಾರ್ಥಸಂಘಟನೆಗಳು.
07. ಸತ್ಯಾನ್ವೇಷಿ ಕಥೆ.
08. ಮಂತ್ರ–ಮಹಿಮೆ (ಸತ್ಯವಾ–ಅಸತ್ಯವಾ)
09. ಶ್ರೀ ಕೃಷ್ಣನು ದೇವರಾ, ಭಗವಂತನಾ.
10. ಗೀತಾ ಪರಿಚಯ.
11. ಕಲಿಯುಗ (ಎಂದಿಗೂ ಯುಗಾಂತವಲ್ಲ).
12. ಜನನ ಮರಣ ಸಿದ್ಧಾಂತ.
13. ಮರಣ ರಹಸ್ಯ.
14. ಪುನರ್ಜನ್ಮ ರಹಸ್ಯ.
15. ತ್ರೈತಾಕಾರ ರಹಸ್ಯ (ತ್ರೈತಾಕಾರ ಬೆರ್ಮುಡಾ).
16. ಕಥೆಗಳ ಜ್ಞಾನ.
17. ಗಾದೆಗಳ ಜ್ಞಾನ.
18. ಒಗಟುಗಳಲ್ಲಿ ಜ್ಞಾನ.
19. ತತ್ತ್ವಗಳ ಜ್ಞಾನ.
20. ಬೈಗುಳಲ್ಲಿ ಜ್ಞಾನ–ಆಶೀರ್ವಾದಗಳಲ್ಲಿ ಅಜ್ಞಾನ.
21. ಗೀತಂ–ಗೀತ (ಹಾಡುಗಳ ಜ್ಞಾನ).
22. ತತ್ತ್ವಾರ್ಥ ಗೊಂಬೆಗಳ ಜ್ಞಾನ.
23. ದೇವಾಲಯ ರಹಸ್ಯಗಳು.
24. ಇಂದೂ ಸಂಪ್ರದಾಯಗಳು.
25. ನಮ್ಮ ಹಬ್ಬಗಳು. (ಹೇಗೆ ಮಾಡಬೇಕೋ ತಿಳಿದಿದೆಯಾ?)
26. ಜ್ಯೋತಿಷ್ಯಶಾಸ್ತ್ರ (ಶಾಸ್ತ್ರವಾ–ಅಶಾಸ್ತ್ರವಾ?)
27. ತಾಯಿ ತಂದೆ.
28. ಗುರುಪ್ರಾರ್ಥನಾ ಮಂಜರಿ.
29. ತ್ರೈತಾರಾಧನೆ.
30. ಸಮಾಧಿ.
31. ಪ್ರಬೋಧ.
32. ಸುಬೋಧ.
33. ಪ್ರಸಿದ್ಧಿ ಬೋಧನೆ.
34. ಸುಪ್ರಸಿದ್ಧಿಬೋಧನೆ.
35. ಶಿಲುಬೆ ದೇವರಾ?
36. ಮತಾತೀತ ದೇವರ ಮಾರ್ಗ.
37. ದೇವರ ಗುರುತು–963.
38. ಮತ–ಪಥ.
39. ಪ್ರಬೋಧಾನಂದ ನಾಟಕಗಳು.
40. ಇಂದೂ ಕ್ರೈಸ್ತವನಾ?
41. ನಿಗೂಢ ತತ್ತ್ವಾರ್ಥ ಬೋಧಿನಿ.
42. ಆತ್ಮ ಲಿಂಗಾರ್ಥ.
43. ನಾಸ್ತಿಕರು–ಆಸ್ತಿಕರು.
44. ಹೇತುವಾದ–ಪ್ರತಿವಾದ.
45. ಗುತ್ತಾ.
46. ಪ್ರಬೋಧ ತರಂಗಗಳು.
47. ತ್ರೈತ ಸಿದ್ಧಾಂತ.
48. ರೂಪ ಬದಲಾದ ಗೀತೆ.
49. ಉಪನಿಷತ್‌ಗಳಲ್ಲಿ ಲೋಪಗಳು.
50. ಪ್ರಥಮ ದೈವಗ್ರಂಥ ಭಗವದ್ಗೀತೆ.
51. ದ್ರಾವಿಡ ಬ್ರಾಹ್ಮಣ.
52. ತೀರ್ಪು.
53. ಕರ್ಮಪತ್ರ.
54. ಪ್ರವಕ್ತರು ಯಾರು?
55. ಧರ್ಮಶಾಸ್ತ್ರ ಯಾವುದು?
56. ಮತಾಂತರ ದೈವದ್ರೋಹ.
57. ತ್ರೈತಶಕ ಪಂಚಾಂಗ.
58. ತ್ರೈತ ಸಿದ್ಧಾಂತ ಆಧ್ಯಾತ್ಮಿಕ ಘಂಟು.
59. ಜೀಹಾದ್ ಎಂದರೇ ಯುದ್ಧವಾ?
60. ಮೂರು ಗ್ರಂಥಗಳು, ಇಬ್ಬರು ಗುರುಗಳು.
61. ದೇವರ ಜ್ಞಾನ ಕಬ್ಜಾ ಆಗಿದೆ.
62. ಅಜ್ಞಾನದಲ್ಲಿ ಉಗ್ರವಾದ ಬೀಜಗಳು.

## ಇಂದೂ ಜ್ಞಾನವೇದಿಕೆ ಪ್ರಕಟಣೆಗಳು

63. ವಾರ್ತಕನು-ವರ್ತಕನು.
64. ದೇವರ ಚಿಹ್ನೆ.
65. ನನ್ನದು ಲೋಚನೆ-ನಿನ್ನದು ಆಲೋಚನೆ
66. ಯಾವುದು ನಿಜವಾದ ಜ್ಞಾನ?
67. ಪ್ರತಿಮೆ X ವಿಗ್ರಹ - ದೈವ X ದೆವ್ವ.
68. ಮರಣದ ನಂತರ ಜೀವನ.
69. ಯಾವ ಮತದಲ್ಲಿ ಎಷ್ಟು ಮತದ್ವೇಷ.
70. ಸ್ವರ್ಗ ಇಂದ್ರಲೋಕವಾ! ನರಕ ಯಮರಾಜ್ಯವಾ!!
71. ದ್ವಿತೀಯ ದೈವಗ್ರಂಥದಲ್ಲಿ ರತ್ನವಾಕ್ಯಗಳು
72. ಅಂತಿಮ ದೈವಗ್ರಂಥದಲ್ಲಿ ಜ್ಞಾನವಾಕ್ಯಗಳು.
73. ಅಂತಿಮ ದೈವಗ್ರಂಥದಲ್ಲಿ ವಜ್ರವಾಕ್ಯಗಳು
74. ಹಿಂದೂ ಮತದಲ್ಲಿ ಸಿದ್ಧಾಂತಕರ್ತರು.
75. ಒಂದು ಮಾತು ಮೂರು ಗ್ರಂಥಗಳು.
76. ಲು ಎಂದರೇ ಏನು? (ತೆಲುಗು)
77. ಆದಿತ್ಯ, 78. ಗಿಡ ಮೊದಲಾ! ಬೀಜ ಮೊದಲಾ?
79. ಒಬ್ಬನೇ ಇಬ್ಬರು, 80. ಸಾಯಿಬಾಬಾ ದೇವರಾ! ಅಲ್ಲವಾ!
81. ಯೇಸು ಮರಣಿಸಿದ್ದಾನಾ? ಹತವಾಗಿದ್ದಾನಾ?
82. ದೇವರ ಆಗಮನಕ್ಕೆ ಇದು ಸಮಯವಲ್ಲವೇ!
83. ವಿಶ್ವ ವಿದ್ಯಾಲಯ.
84. ಕೃಷ್ಣ ಮೂಸ (ಶ್ರೀ ಕೃಷ್ಣ ಮರಣದ ನಂತರ ಜೀವನ)
85. ಒರೆಗಲ್ಲು (ಗೀಟುರಾಯಿ)
86. ಮೂರು ದೈವ ಗ್ರಂಥಗಳು-ಮೂರು ಪ್ರಥಮ ವಾಕ್ಯಗಳು
87. ಹೇತುವಾದ ಪ್ರಶ್ನೆಗಳು-ಸತ್ಯವಾದ ಉತ್ತರಗಳು
88. ದೈವಗ್ರಂಥಗಳಲ್ಲಿ ಸತ್ಯಾಸತ್ಯ ವಿಚಕ್ಷಣೆ
89. ನಿನಗೆ ನನ್ನ ಲೇಖ
90. ಹಿಂದೂ ಮತದಲ್ಲಿಯೇ ಕುಲವಿವಕ್ಷ
91. ದೇವರ ಮುದ್ರೆ
92. ಬ್ರಹ್ಮ-ರಾವಣಬ್ರಹ್ಮ-ಭಗವಾನ್ ರಾವಣಬ್ರಹ್ಮ
93. ಧರ್ಮಚಕ್ರ, 94. ಪ್ರಾಥಮಿಕ ಜ್ಞಾನ
95. ಒಬ್ಬ ವ್ಯಕ್ತಿಯಲ್ಲಿ ಎರಡು ಕೋನಗಳು
96. ದ್ಯಾನ - ಪ್ರಾರ್ಥನೆ - ನಮಾಜ್
97. ಹಿಂದೂ ಧರ್ಮಕ್ಕೆ ರಕ್ಷಣೆ ಅಗತ್ಯವಾ?
98. ವೇದಗಳು ಮನುಷ್ಯನಿಗೆ ಅಗತ್ಯವಾ?
99. ಸಿದ್ಧಿ ಬೋಧನೆ.
100. ಸತ್ಯಾರ್ಥ ಪ್ರಕಾಶಣೆಯಲ್ಲಿ ಸತ್ಯವೆಷ್ಟು.
101. ಸೊನ್ನೆ, 102. ೧೦೦-ಶತಂ-100.

**ಸೂಚನೆ** : ತೆಲುಗಿನಿಂದ ಕನ್ನಡಕ್ಕೆ ಅನುವಾದಿಸಲಾಗದ ಪದಗಳು ಹಾಗೆಯೇ ಮುದ್ರಿಸಲಾಗಿದೆ.

## 04 ಯೋಗೀಶ್ವರರ ಸಂಚಲನಾತ್ಮಕ ತ್ರಿಮತ ಆಧ್ಯಾತ್ಮಿಕ ತೆಲುಗು ಪ್ರಸಂಗಗಳು

**DVD's**

01. ಸಂತಕಮು, 02. ಸಾಂಪ್ರದಾಯಮು.
03. ತ್ರೈತಶಕಮು.
04. ಕೋಡಿಪುಂಜು–ಪಾದರಸಮು.
05. ಯುಗಮು–ಯೋಗಮು.
06. ನೈಜಂ–ಸಹಜಂ.
07. ಆತ್ಮಕು ವೆಂಟ್ರುಕ ಗುರ್ತು.
08. ಪೈತ್ಯಂ–ಸೈತ್ಯಂ.
09. ಶೈವಮು–ವೈಷ್ಣವಮು.
10. ಇಂದೂಮಹಾಸಮುದ್ರಂ.
11. ಸೃಷ್ಟಿ–ಸೃಷ್ಟಿಕರ್ತ.
12. ಕಾಯ–ಪಂಡು–ಕಾಯ.
13. ಜ್ಞಾನಮು–ವಿಜ್ಞಾನಮು.
14. ವಾರ–ಮಾಸ–ವತ್ಸರ.
15. ಸೇಕೂವಲಿ–ಕೂಲಿಸೇವಾ.
16. ಧರ್ಮಮು–ಅಧರ್ಮಮು.
17. ಏಕ್‌ನಿರಂಜನ್–ಅಲಕ್‌ನಿರಂಜನ್.
18. ಗುರುವುಲೇನಿವಿದ್ಯ–ಗ್ರುಡ್ಡಿವಿದ್ಯ.
19. ಬಟ್ಟತಲ, 20. ಭಗವಂತುಡು.
21. ದ್ರಾವಿಡುಲು – ಆರ್ಯುಲು.
22. ಪ್ರಭುವು – ಪ್ರಭುತ್ವಂ.
23. ಭೂತಂ – ಮಹಾಭೂತಂ.
24. ಪ್ರಭು – ಪ್ರಜ, 25. ಯಾದವ್.
26. ಪುಸ್ತಕಮು–ಗ್ರಂಥಮು.
27. ವೆಲುಗುಬಂಟು, 28. ಪ್ರಕೃತಿ–ವಿಕೃತಿ.
29. ಮಾಟ–ಮಂದು, 30. ಏಕತ–ಏಕಾಗ್ರತ.
31. ಹರಿಕಾಲು–ಹರಿಚೇಯಿ.
32. ಪುಟ್ಟಗೋಸಿ–ಮೊಲತ್ರಾಡು.
33. 1 2 3 ಗುರುಪೌರ್ಣಮಿ.
34. ಚಮತ್ಕಾರ–ಆತ್ಮ.
35. ಕ್ಷಮಿಂಚರಾನಿ ಪಾಪಮು.
36. ಮಾಯಕುಡು– ಅಮಾಯಕುಡು.
37. ಮರಣಮು–ಶರೀರಮು.
38. ದ್ವಿತೀಯುಡು–ಅದ್ವಿತೀಯುಡು.
39. ಎದಮೀದಮುದ್ರ– ತಲ್ಲಿ ತಂಡ್ರಿ ಗುರ್ತು.
40. ಸೇವಾಶಾತಮು.
41. ಬಯಟಿ ಸಮಾಜಂ– ಲೋಪಲಿ ಸಮಾಜಂ.
42. ಶ್ರೀಕೃಷ್ಣಾಷ್ಟಮಿ.
43. ಪ್ರಪಂಚ ಶ್ರದ್ಧ–ಪರಮಾತ್ಮ ಶ್ರದ್ಧ.
44. ತಲ್ಲಿ ತಂಡ್ರಿ
45. ದೇವುನಿ ಜ್ಞಾನಮು– ಮಾಯ ಮಹತ್ಯಮು.
46. ಸಮಾಧಿ.
47. ತಲ್ಲಿ ತಂಡ್ರಿ–ಗುರುವು ದೈವಮು.
48. ಕಲಿಯುಗಮು.
49. ಮತಮು–ಪಥಮು.
50. ದಿವ್ಯಖುರಾನ್–ಹದೀಸು.
51. ತಲ್ಲಿ, 52. ಪುಟ್ಟುಟ–ಗಿಟ್ಟುಟ.
53. ಗೋರು – ಗುರು.
54. ಆತ್ಮ,
55. ಕರ್ಮ ಮರ್ಮಮು.
56. ತಾತ, 57. ಗುರುಪೌರ್ಣಮಿ.
58. ಯೋಗೀಶ್ವರುಲ ಜನ್ಮದಿನ ಸಂದೇಶಮು.
59. ಶ್ರೀಕೃಷ್ಣಜನ್ಮ ಮಧುರ.
60. ಇಂದುವು – ಹಿಂದುವು.
61. ಸ್ತ್ರೀ–ಪು/ಲಿಂಗಮು.
62. ಆತ್ಮಪನಿ.
63. ತ್ರೈತ ಸಿದ್ಧಾಂತಮು.
64. ದೇಶಂ ಮೋಸಂ – ದೇಹಂ ಮೋಹಂ.
65. ಜೀರ್ಣ+ಆಶಯಮು.
66. ಮೇಘಂ ಒಕಭೂತಂ– ರೋಗಂ ಒಕಭೂತಂ.
67. ದೇವುನಿಕಿ ಮತಮುನ್ನದಾ?
68. ಸಹಜ ಮರಣಂ–ತಾತ್ಕಾಲಿಕ ಮರಣಂ.
69. ಅಧರ್ಮ ಆರಾಧನಲು.
70. ಏದಿ ಧರ್ಮಮು.
71. ನಿದರ್ಶ – ನಿರೂಪ.
72. ಪುಟ್ಟಿನರೋಜು ಎವ್ವರಿಕೀ ರಾದು.
73. ನಟಿಂಚೇ ಆತ್ಮ.
74. ಮೂಡು ಪುಟ್ಟುಕಲು– ರೆಂಡು ಜಾಗಾಲು.

## ಯೋಗೀಶ್ವರರ ಸಂಚಲನಾತ್ಮಕ ತ್ರಿಮತ ಆಧ್ಯಾತ್ಮಿಕ ತೆಲುಗು ಪ್ರಸಂಗಗಳು 05

**DVD's**

75. ಶ್ರೀ ಕೃಷ್ಣುಡು ಎವರು?
76. ಸಂಚಿತ ಕರ್ಮ.
77. ಗುರುವು ಎವರು?
78. ಕರ್ಮಲೇನಿ ಕೃಷ್ಣುಡು–
ಕರ್ಮಉನ್ನ ಕೃಷ್ಣುಡು.
79. ಭಯಂ.
80. ಸುಖಮು–ಆನಂದಮು.
81. ದಶ–ದಿಶಲು, 82. ಆಡಿಂಚೇ ಆತ್ಮ.
83. ಇಚ್ಛಾಧೀನ ಕಾರ್ಯಮುಲು–
ಅನಿಚ್ಛಾಧೀನ ಕಾರ್ಯಮುಲು.
84. ಟಕ್ಕುಟಮಾರಾ, ಇಂದ್ರಜಾಲ
ಮಹೇಂದ್ರಜಾಲ,
ಗಜಕರ್ಣ ಗೋಕರ್ಣ.
85. ಸ್ವಾರ್ಥ ರಾಜಕೀಯಂ.
(ಸ್ವ+ಅರ್ಥ ರಾಜಕೀಯಂ).
86. ಮೂಡು ನಿರ್ಮಾಣಾಲು–ಒಕ ಪರಿಶುಭ್ರತ.
87. ಏದಿ ಶಾಸ್ತ್ರಮು?
88. ತೆಲುಗುಲೋ ಮೂಡು–
ಆರು–ತೊಮ್ಮಿದಿ.
89. 6–3=6.
90. ಗುರ್ತಿಂಪಬಡನಿವಾಡು ಗುರುವು.
91. ಜ್ಞಾನಮು ದಗ್ಗರ ಜಾಗ್ರತ್ತ!
92. ಚಂದ್ರಾಕಾರಮು (ಬಟ್ಟತಲ).
93. ಮತಮುಲಲೋ ಪವಿತ್ರ ಯುದ್ಧಮು.
94. ಮೂಡು ಗ್ರಂಥಮುಲು.
95. ಏಡು ಆಕಾಶಮುಲು.
96. ದೈವಗ್ರಂಥಮು.
97. ಜ್ಞಾನಮು ಕಬ್ಜಾ ಅಯ್ಯಿಂದಿ.
98. ಭಕ್ತಿ–ಭಯಮು, 99. ಜ್ಞಾನಶಕ್ತಿ.
100. ಕಾಲಜ್ಞಾನ ವಾಕ್ಯಮುಲು.
101. ಅರ್ಥಮು–ಅಪಾರ್ಥಮು.
102. ತೋಲೇವಾಡು, 103. ಗುರು ಚಿಹ್ನಂ.
104. ಭಕ್ತಿ–ಶ್ರದ್ಧಲು.
105. ದೇವುಡು ಇದ್ದರಾ! ಒಕ್ಕರಾ!!
106. ಪುರುಷೋತ್ತಮ.
107. ಮತದ್ವೇಷಮು.
108. ನೀ ವೆನುಕವಾಡು.
109. ಗ್ರಂಥಮು – ಬೋಧ.
110. ಆಟ – ದೋಬೂಚುಲಾಟ.
111. ಪ್ರಜಲು – ಮಾನವುಲು.
112. ಆಸ್ತಿ – ದೋಸ್ತಿ
113. ದಂತಮು–ಅಂತಮು.
114. ಮಾಯ ಮರ್ಮಮು–ಆತ್ಮ ಧರ್ಮಮು.
115. ಶ್ರೀಕೃಷ್ಣುಡು
ಚನಿಪೋಯಾಡಾ? ಚಂಪಬಡ್ಡಾಡಾ?
116. ಅಂತಿಮ ದೈವಗ್ರಂಥಮುಲೋ
ಪ್ರಥಮವಾಕ್ಯಮುಲು.
117. ಅದುರು–ಬೆದುರು
118. ಶವಮು – ಶಿವಮು.
119. ಧರ್ಮಚಕ್ರಮು, 120. ಗ್ರಾಹಿತ ಶಕ್ತಿ
121. ಭೌತಿಕಮು – ಅಭೌತಿಕಮು.
122. ದೇವುನಿ ಆಜ್ಞ ಮರಣಂ.
123. ಮತ ಸಾಮರಸ್ಯಂ.
124. ಮೋಕ್ಷಮು – ಮೋಸಮು.
125. ಅಕ್ಷರ ಜ್ಞಾನಮು, 126. ಲಲಾಜಲಮು.
127. ದೈವ ಧರ್ಮಗಳು–
ಮತಸಾಂಪ್ರದಾಯಗಳು.
128. ಆಹಾರಮು ನೀಕಾ! ನೀ ಆತ್ಮಕಾ!!
129. ಮಾತ್ರ–ಮಂದು, 130. ಕಾಲಚಕ್ರಂ.
131. ಬ್ರಹ್ಮವಿದ್ಯ, 132. ಶಕ್ತಿ.
133. ಆಧ್ಯಾತ್ಮಿಕ ಪ್ರಶ್ನಲು–ಜವಾಬುಲು.
134. ಪೌರ್ಣಮಿ–ಅಮಾವಾಸ್ಯ.
135. ಈಶ್ವರ–ಪರಮೇಶ್ವರ.
136. ಪುರುಷೋತ್ತಮ–ಶ್ರೀರಾಮ.
137. ದೇವುನಿಕಿ ಒಕ್ಕಡೇ ಕುಮಾರುಡು–
ದೇವುನಿಕಿ ಅನೇಕಮಂದಿ ಕುಮಾರುಲು.
138. ಜಲಂ, 139. ಅಧಿಪತಿ.
140. ಗ್ರಹಾಂತರವಾಸುಲು.
141. ದೇವುಡು ದ್ವಿತೀಯುಡಾ?
ಅದ್ವಿತೀಯುಡಾ?
142. ಮನಿಷಿ ಚೇತಿಲೋ ಭಗವಂತುಡು–
ದೇವುನಿ ಚೇತಿಲೋ ಮನಿಷಿ.
143. ಶರೀರಮುಲೋ ರಕ್ತಮು–
ಗ್ರಂಥಮುಲೋ ಜ್ಞಾನಮು.
144. ಗ್ರಂಥಮುಲೋ ಜ್ಞಾನಮು–
ಮನಿಷಿಲೋ ರಕ್ತಮು.
145. ತ್ರೈತ ಸಿದ್ಧಾಂತ ಚರಿತ್ರ.
146. ಕುಶಾಲ್ ಕುಶಾಲ್ ಲಂಜಮ್ಮ
ನಾ ನೆತ್ತಿ ಮೀದ ರೆಂಡು ತನ್ನಮ್ಮ.
147. ರಾಜಾಧಿ ರಾಜಾ–ದೇವಾಧಿ ದೇವಾ.

# ಇಂದೂ ಜ್ಞಾನವೇದಿಕೆ ಪುಸ್ತಕಗಳು ದೊರೆಯುವ ವಿಳಾಸ

**ಪ್ರಬೋಧಾಶ್ರಮ (ಶ್ರೀ ಕೃಷ್ಣಮಂದಿರ)**

ಚಿನ್ನಪೊಡಮಲ (ಗ್ರಾ), ತಾಡಿಪತ್ರಿ (ಮಂ), ಅನಂತಪುರಂ (ಜಿಲ್ಲೆ). A.P

Cell : **ಲಕ್ಷ್ಮಿನಾರಾಯಣಾಚಾರಿ**–09440556968. **ವೆಂಕಟೇಶ್**–08096816963.

## ಇಂದೂ ಜ್ಞಾನ ವೇದಿಕೆ ಸದಸ್ಯರು

**ಶ್ರೀದೇವಿ**
ಹೊಸಪೇಟೆ, ಬಳ್ಳಾರಿ (ಜಿಲ್ಲೆ). K. A
ಸೆಲ್:9611133635,8050309963.

**ಜಿ. ರಾಧಾಕೃಷ್ಣಾ ರೆಡ್ಡಿ**
ಮರಲೂರು, ತುಮಕೂರು (ಜಿ),
ಕರ್ನಾಟಕ, ಸೆಲ್:9448177812.

**ಶಿವರಾಜ**
ಕುಕನೂರು, ರಾಯಚೂರು (ಜಿ),
ಕರ್ನಾಟಕ, ಸೆಲ್:9844369516.

**G. ಮನೋಹರ್**
ಮಲ್ಲಸಂದ್ರ, ಬೆಂಗಳೂರು, ಕರ್ನಾಟಕ.
ಸೆಲ್:7411459912,9448452963.

**B. ವಾತ್ಸಲ್ಯ**
ದಾವಣಗೆರೆ, ಕರ್ನಾಟಕ.
ಸೆಲ್:9901534677,8880666529.

**B. ಯೋಗೇಶ್**
ವೈಟ್‌ಫೀಲ್ಡ್, ಬೆಂಗಳೂರು, ಕರ್ನಾಟಕ.
ಸೆಲ್:9620193341,9739228639.

**R. ಚಂದ್ರಶೇಖರ್**
ಕೀಲುಕೋಟೆ, ಕೋಲಾರ, ಕರ್ನಾಟಕ.
ಸೆಲ್:9741827901,9590652406.

**ಕೆ. ಭರತ್ ಕುಮಾರ್**
ಮೇಲಾಗಣಿ, ಕೋಲಾರ, ಕರ್ನಾಟಕ.
ಸೆಲ್ : 8095009014.

**ಬಸವರಾಜ ಅಂಗಡಿ**
ಪೋತ್ನಾಳ, ರಾಯಚೂರು (ಜಿ).
ಕರ್ನಾಟಕ, ಸೆಲ್:9632418716.

**ಸೂರ್ಯ ಪ್ರಕಾಶ**
ಶಕ್ತಿನಗರ (ತಾ), ರಾಯಚೂರು (ಜಿ).
ಸೆಲ್:9611183107, 9164886981.

**ಲೀಲಾವತಿ**
ಜನತಾನಗರ, ಮೈಸೂರ್, ಕರ್ನಾಟಕ.
ಸೆಲ್:9141109799, 9986369118.

**T.V. ರಮಣ**
ರೂಪೇನಾ ಅಗ್ರಹಾರ, ಬೆಂಗಳೂರು
ಸೆಲ್:8970772028,7406039453.

**M. ನಾರಾಯಣರೆಡ್ಡಿ**
ರಾಮಗುಂಡನಲ್ಲಿ ಪೋಸ್ಟ್,
ಬೆಂಗಳೂರು, ಕರ್ನಾಟಕ.
ಸೆಲ್ : 9482516023.

**ಪ್ರಕಾಶ್ ರೆಡ್ಡಿ**
ತೊಬರಹಳ್ಳಿ, ಬೆಂಗಳೂರು (ಉತ್ತರ)
ಸೆಲ್:9845656774,9482516023.

**ಯೋಗೇಶ್**
ಸೂಲನಾಯಕನಹಳ್ಳಿ (ಗ್ರಾಮ),
ತುಮಕೂರು (ಜಿಲ್ಲೆ), ಕರ್ನಾಟಕ.
ಸೆಲ್:8762523963,9740744424.

**R.S. ವೀರಾಚಾರಿ** (ಸೆಲ್:9036892829)
ಕತ್ತರಗುಪ್ಪೆ, ಬೆಂಗಳೂರು, ಕರ್ನಾಟಕ.

## ಯೋಗೀಶ್ವರರ ಸಂಚಲನಾತ್ಮಕ ರಚನೆಗಳ ಸಾರಾಂಶ

1. ತ್ರೈತ ಸಿದ್ಧಾಂತ ಗ್ರಂಥಗಳಲ್ಲಿ ಅಕ್ಷರ ಸಮುದಾಯವೇ, ಆತ್ಮ ಸಮಾಚಾರವಾಗಿದೆ. ತ್ರೈತ ಸಿದ್ಧಾಂತ ಗ್ರಂಥಗಳಲ್ಲಿ ಕ್ಷಯ ಅಕ್ಷಯ ಸಮಾಚಾರ, ಪರಮಾತ್ಮನ ಸಮಾಚಾರ ಇದೆ.
2. ತ್ರೈತ ಸಿದ್ಧಾಂತ ಸಂಬಂಧ ಗ್ರಂಥಗಳನ್ನು ಭೌತಿಕವಾಗಿ ಬರೆದಿರುವುದು ಯೋಗೀಶ್ವರರು. ತ್ರೈತಸಿದ್ಧಾಂತ ಅನುಬಂಧ ಗ್ರಂಥಗಳಲ್ಲಿ ಅಭೌತಿಕವಾಗಿ ಯೋಗಶಕ್ತಿ ಇದೆ.
3. ತ್ರೈತ ಸಿದ್ಧಾಂತ ಇಂದೂ (ಹಿಂದೂ) ಧರ್ಮಗಳಲ್ಲಿ ವಿಪ್ಲವಾತ್ಮಕವಾದುದು. ತ್ರೈತ ಸಿದ್ಧಾಂತ ಗ್ರಂಥದಲ್ಲಿನ ಜ್ಞಾನ ಸಂಚಲನಾತ್ಮಕವಾದುದು, ಓದಿ ನೋಡಿರಿ.
4. ತ್ರೈತ ಸಿದ್ಧಾಂತ ಲೋಕದಲ್ಲಿ ಎಲ್ಲದಕ್ಕಿಂತ ದೊಡ್ಡದು. ತ್ರೈತ ಸಿದ್ಧಾಂತ ಗ್ರಂಥಗಳು ಎಲ್ಲಾ ಗ್ರಂಥಗಳನ್ನು ಮೀರಿರುವವು. ಅದರ ರಚನಗಾರ ಯೋಗಿಗಳಿಗೆ ಈಶ್ವರನಾದ ಯೋಗೀಶ್ವರನು.
5. ತ್ರೈತ ಸಿದ್ಧಾಂತ ಗ್ರಂಥಗಳು ಕಾಣಿಸಿದರೆ ದುಷ್ಟಶಕ್ತಿಗಳು ಭಯದಿಂದ ನಡುಗುತ್ತವೆ. ತ್ರೈತ ಸಿದ್ಧಾಂತ ಗ್ರಂಥಗಳನ್ನು ಹತ್ತಿರ ಇಟ್ಟುಕೊಂಡರೆ ಯೋಗಶಕ್ತಿಗೆ ತಾಳಲಾರದೆ ಭಯಪಟ್ಟು ಹೋಗುತ್ತವೆ.
6. ತ್ರೈತ ಸಿದ್ಧಾಂತ ಜ್ಞಾನ ಭಗವದ್ಗೀತೆ ನಂತರ ಹೇಳಲಾದ ಅತ್ಯುತ್ತಮ ಜ್ಞಾನ. ತ್ರೈತ ಸಿದ್ಧಾಂತ ಗ್ರಂಥದಲ್ಲಿ ಕೃಷ್ಣನು ಮೊದಲು ಹೇಳದ ಜ್ಞಾನವನ್ನೂ ಸಹ ಯೋಗೀಶ್ವರರು ಹೇಳಿದ್ದಾರೆ.
7. ತ್ರೈತ ಸಿದ್ಧಾಂತ ಜ್ಞಾನ ಮಾನವ ಜೀವನಕ್ಕೆ ದೊಡ್ಡ ಪ್ರಕಾಶವು. ತ್ರೈತ ಸಿದ್ಧಾಂತದ ಬೆಳಕಿನೊಳಗೆ ಹೋದವನಿಗೆ ಅದು ದೈವಶಕ್ತಿ ಎಂದು ತಿಳಿಯುತ್ತದೆ.
8. ತ್ರೈತ ಸಿದ್ಧಾಂತ ಭಗವದ್ಗೀತೆಯನ್ನು ಬರೆದಿರುವುದು ಯೋಗೀಶ್ವರರು. ಆದ್ದರಿಂದ ತ್ರೈತ ಸಿದ್ಧಾಂತ ಎಂದರೆ ಏನೋ, ಅದು ಎಷ್ಟು ದೊಡ್ಡದೋ ತಿಳಿದಿದೆ.
9. ತ್ರೈತ ಸಿದ್ಧಾಂತವನ್ನು ಕುರಿತು ತಿಳಿದರೆ, ಯೋಗೀಶ್ವರರ ಗ್ರಂಥಗಳನ್ನು ಓದಿದರೆ, ಯಾವ ಮತಸ್ಥನಾದರೂ ಒಪ್ಪಿಕೊಳ್ಳುತ್ತಾನೆ, ಅದನ್ನು ಆಚರಿಸುತ್ತಾನೆ.
10. ತ್ರೈತ ಸಿದ್ಧಾಂತವನ್ನು ಪ್ರತ್ಯಕ್ಷವಾಗಿ ಭಗವಂತನು ಹೇಳಿರುವುದು. ಆದ್ದರಿಂದ ಎಲ್ಲಾ ಮತಗಳ ಸಾರಾಂಶವು ತ್ರೈತ ಸಿದ್ಧಾಂತ ಗ್ರಂಥಗಳಲ್ಲಿ ಇದೆ.
11. ತ್ರೈತ ಸಿದ್ಧಾಂತ ಗ್ರಂಥಗಳು ವ್ಯಕ್ತಿ ಬರೆದಿರುವವು ಅಲ್ಲ, ವ್ಯಕ್ತಿಯಲ್ಲಿನ ಶಕ್ತಿ ಬರೆದಿರುವವು. ಆದ್ದರಿಂದ ಎಲ್ಲ ರಹಸ್ಯಗಳೇ ಓದಿ ತಿಳಿದುಕೊಳ್ಳಿ.
12. ತ್ರೈತ ಸಿದ್ಧಾಂತ ಭಗವದ್ಗೀತೆ, ಬೈಬಲ್, ಖುರಾನ್ ಗ್ರಂಥಗಳಲ್ಲಿ ಇದೆ. ಆದರೂ ಹಿಂದೂಗಳಿಗಾಗಲಿ, ಕ್ರೈಸ್ತವರಿಗಾಗಲಿ, ಮುಸ್ಲೀಮ್‌ರಿಗಾಗಲಿ ಆ ವಿಷಯ ತಿಳಿದಿಲ್ಲ.

ತಪ್ಪದೆ ಓದಿರಿ! ಓದಿಸಿರಿ!!

ಪ್ರಥಮ ದೈವ ಗ್ರಂಥ

# ತ್ರೈತ ಸಿದ್ಧಾಂತ ಭಗವದ್ಗೀತೆ

**(578 ಶ್ಲೋಕಗಳ ವಚನ ಗ್ರಂಥ)**

ಇದು ಆಧ್ಯಾತ್ಮಿಕ ವಿದ್ಯೆಯಲ್ಲಿ ವಿಪ್ಲವಾತ್ಮಕ ತಿರುವು ತಿರುಗಿದ ಭಗವದ್ಗೀತೆ. 55 ಶ್ಲೋಕಗಳಿಗೆ ಪೂರ್ತಿ ಭಾವ ಬದಲಾವಣೆಯೊಂದಿಗೆ ತಯಾರಾಗಿದೆ. ಮೂರು ಆತ್ಮಗಳನ್ನು ಕುರಿತು ಶಾಸ್ತ್ರಾಧಾರದಿಂದ ವಿವರಿಸಿ ಬೋಧಿಸಿದ ಮೊಟ್ಟ ಮೊದಲ ಭಗವದ್ಗೀತೆ. ಮೊದಲು ಎಷ್ಟೋ ಜನರು ಬರೆದ ಭಗವದ್ಗೀತೆಗಳಿಗೆ ನೂರಕ್ಕೆ 90ರಷ್ಟು ವಿಭಿನ್ನ ಭಾವಗಳಿಂದ ಕೂಡಿಕೊಂಡಿದೆ. ಎಷ್ಟೋ ಪ್ರತ್ಯೇಕ ಅರ್ಥಗಳೊಂದಿಗೆ ದೇವರು ಹೇಳಿದ ನಿಜ ಭಾವಗಳನ್ನು ಹೇತುಬದ್ಧವಾಗಿ ವಿವರಿಸಿರುವುದು ಮತ್ತು ಹೇತುವಾದಿಗಳು ಸಹ ಖಂಡಿಸಲಾರದ ಭಗವದ್ಗೀತೆ ಇದು ಒಂದೇ. ಗರ್ಭಸ್ಥ ಶಿಶುವಿಗೆ ಪ್ರಾಣ ಇಲ್ಲ ಎನ್ನುವುದು, ಹತ್ಯೆಯನ್ನು ವಿವರಿಸಿ ಆತ್ಮಹತ್ಯೆಯಾಗಿ ಹಾಗೆಯೇ ಆತ್ಮಹತ್ಯೆಯನ್ನು ಹತ್ಯೆಯಾಗಿ ಹೇಳುವುದು, ಇಂತಹವು ಬಹಳ ಜನರಿಗೆ ಸಹಿಸಿಕೊಳ್ಳಲಾರದಂತಹ ವಿಪ್ಲವಾತ್ಮಕ ಹಾಗೂ ಸಂಚಲನ ವಿಷಯಗಳೆಷ್ಟೋ ಈ ಗ್ರಂಥದಲ್ಲಿ ಇವೆ. ಶ್ರೀಕೃಷ್ಣನ ಯಥಾರ್ಥ ಭಾವವನ್ನು ತಿಳಿಸಿ, ವಾಸ್ತವ ಜ್ಞಾನ ಪಥದಲ್ಲಿ ನಡೆಸಿ, ಮೋಕ್ಷಗಮ್ಯವನ್ನು ಸೇರಿಸುವುದು ಈ ಗ್ರಂಥ ರಾಜ.

**ರಚಿತ : ತ್ರಿಮತ ಏಕೈಕ ಗುರುವು, ತ್ರೈತ ಸಿದ್ಧಾಂತ ಆದಿಕರ್ತ ಶ್ರೀಶ್ರೀಶ್ರೀ ಆಚಾರ್ಯ ಪ್ರಬೋಧಾನಂದ ಯೋಗೀಶ್ವರರು**

# ಭಕ್ತಿಯಲ್ಲಿ ನೀವು ಸಂಸಾರಿಗಳಾ – ವ್ಯಭಿಚಾರಿಗಳಾ 

ಈ ಗ್ರಂಥಕ್ಕೆ ಇರುವ ಹೆಸರಿನಲ್ಲಿ ಮುಖ್ಯವಾಗಿ ಮೂರು ಪದಗಳು ಬಂದಿವೆ. ಅದರಲ್ಲಿ ಒಂದು ಭಕ್ತಿ, ಎರಡು ಸಂಸಾರಿ, ಮೂರು ವ್ಯಭಿಚಾರಿ. ಹೊರಗಿನ ಪ್ರಪಂಚದಲ್ಲಿ ಈ ಮೂರು ಪದಗಳು ಕೇಳದವರಿರುವುದಿಲ್ಲ, ಹಾಗೇ ತಿಳಿಯದವರಿರುವುದಿಲ್ಲ. ಪ್ರಪಂಚ ಸಂಬಂಧವಾಗಿ ಈ ಮೂರು ಪದಗಳಿರುವುದು ವಾಸ್ತವವೇ ಆದರೂ ಅವುಗಳ ಅರ್ಥಗಳು, ಭಾವನೆಗಳು ತಿಳಿಯದವರಿರುವುದಿಲ್ಲ. ಪ್ರಪಂಚ ಪ್ರಕೃತಿಗೆ ಸಂಬಂಧಿಸಿರುವುದು, ಆಧ್ಯಾತ್ಮಿಕ ಆತ್ಮಕ್ಕೆ ಸಂಬಂಧಿಸಿರುವುದು. ಪ್ರಪಂಚವನ್ನು ಲೌಕಿಕ ಎನ್ನುತ್ತಾರೆ. ಹಾಗೇ ದೈವಿಕವನ್ನು ಆಧ್ಯಾತ್ಮಿಕ ಎನ್ನುವುದು ಸಹಜವೇ. ಆದರೇ ಈ ಮೂರು ಪದಗಳಿಗೆ ಲೌಕಿಕದಲ್ಲಿ ಅರ್ಥ ಬೇರೆ, ಆಧ್ಯಾತ್ಮಿಕದಲ್ಲಿ ಅರ್ಥ ಬೇರೆ. ಲೌಕಿಕ ಧರ್ಮ ಬೇರೆ, ಆಧ್ಯಾತ್ಮಿಕ ಧರ್ಮ ಬೇರೆ. **ಲೌಕಿಕ ಧರ್ಮದಲ್ಲಿ ಅಂದರೇ ಪ್ರಪಂಚ ಧರ್ಮದಲ್ಲಿ ಬೈಯ್ಯುವುದು, ದೂಷಣೆ ಆಗುತ್ತದೆ. ಆಧ್ಯಾತ್ಮಿಕ ಧರ್ಮದಲ್ಲಿ ಅಂದರೇ ಆತ್ಮ ಧರ್ಮದಲ್ಲಿ ಬೈಯ್ಯುವುದು, ಆಶೀರ್ವಾದ ಆಗುತ್ತದೆ.**

ಲೌಕಿಕ ಧರ್ಮದಲ್ಲಿ ಒಂದು ಭಾವಾರ್ಥ ಇರುವಾಗ, ಆಧ್ಯಾತ್ಮಿಕ ಧರ್ಮದಲ್ಲಿ ಪೂರ್ತಿಯಾಗಿ ಬೇರೆ ಭಾವಾರ್ಥವಾಗಿ ಹೋಗುತ್ತದೆ. ಒಂದೇ ಪದ ಎರಡು ಧರ್ಮಗಳಲ್ಲಿ ಬೇರೆಬೇರೆ ಭಾವನೆಗಳು ಹೊಂದಿರುತ್ತವೆಂದು ಮನುಷ್ಯ ತಪ್ಪದೆ ಗ್ರಹಿಸಬೇಕು. ಹಾಗೆ ಭಾವ ಭೇದವನ್ನು ಗ್ರಹಿಸದವರನ್ನು, ತಿಳಿಯದವರನ್ನು ಮೂರ್ಖರನ್ನಾಗಿ ಹೇಳಬಹುದು. ಆಧ್ಯಾತ್ಮಿಕ, ಲೌಕಿಕ ಬೇರೆಬೇರೆ ಎಂದು ತಿಳಿಯುವ ಹಾಗೆ ವೇಮನ ಯೋಗಿಯವರು ಸಹ ಒಂದು ಪದ್ಯವನ್ನು ಹೇಳಿದ್ದಾರೆ. ಆ ಪದ್ಯದಲ್ಲಿ ಲೌಕಿಕ ಧರ್ಮದಲ್ಲಿ **'ಲಂಜ'** ಎನ್ನುವ ಪದವನ್ನು ಉಪಯೋಗಿಸಿ ಹೇಳಿದ್ದಾನೆ. ಲಂಜ (ಸೂಳೆ) ಎಂದರೆ ವ್ಯಭಿಚಾರಿ ಎಂದು ಅರ್ಥವಿದೆ. ಆದರೇ ಲೌಕಿಕ ಧರ್ಮದಲ್ಲಿ ಅರ್ಥದ ಪ್ರಕಾರ ವ್ಯಭಿಚಾರಿಗಳು ಬಹಳ ಅಪರೂಪವಾಗಿ ಇರುತ್ತಾರೆ. ಹೆಚ್ಚಿನ ಶಾತ ಸಂಸಾರಿಗಳಾಗಿಯೇ ಇರುತ್ತಾರೆ. ಒಂದು ನೂರು ಮಂದಿ ಜನಸಂಖ್ಯೆಯಲ್ಲಿ ಒಬ್ಬರು ಅಥವಾ ಇಬ್ಬರು ವ್ಯಭಿಚಾರಿಗಳು ಇರಬಹುದಾಗಲೀ, ಉಳಿದವರೆಲ್ಲರೂ ಸಂಸಾರಿಗಳಾಗಿಯೇ ಇರುತ್ತಾರೆ. ಅದೇ ಆಧ್ಯಾತ್ಮಿಕ ರಂಗದೊಳಗೆ ಬಂದರೆ ಅಪರೂಪವಾಗಿ ನೂರಕ್ಕೆ

ಒಬ್ಬರು ಅಥವಾ ಇಬ್ಬರು ಸಂಸಾರಿಗಳಾಗಿ ಇರುತ್ತಾರೆ. ಉಳಿದವರೆಲ್ಲರೂ ವೇಶ್ಯರಾಗಿಯೇ ಇರುತ್ತಾರೆ. ಆದ್ದರಿಂದ ವೇಮನಯೋಗಿಯವರು ತನ್ನ ಪದ್ಯದಲ್ಲಿ **"ಲಂಜ ಆಗದಿರುವವರು ಯಾರು ರಾಜ್ಯದಲ್ಲಿ"** ಎಂದು ಅಂದಿದ್ದಾರೆ. ರಾಜ್ಯವೆಂದರೆ ಆಧ್ಯಾತ್ಮಿಕ ರಾಜ್ಯದಲ್ಲಿ ಎಂದು ಅರ್ಥ ಮಾಡಿಕೊಳ್ಳಬೇಕು. ಆಧ್ಯಾತ್ಮಿಕ ರಂಗದಲ್ಲಿ ಹೆಚ್ಚಿನ ಶೇಕಡ ವ್ಯಭಿಚಾರಿಗಳಾಗಿಯೇ ಇದ್ದಾರೆಂದು ಆತನು ತನ್ನ ಉದ್ದೇಶವನ್ನು ಪದ್ಯದಲ್ಲಿ ವ್ಯಕ್ತಪಡಿಸಿದ್ದಾನೆ.

ವೇಮನ ಯೋಗಿ ಹೇಳಿದ ಆಧ್ಯಾತ್ಮಿಕ ರಹಸ್ಯಗಳನ್ನು ಬಿಚ್ಚಿ ಹೇಳುವುದು ಒಬ್ಬ ಗುರುವಾಗಿ ನನ್ನ ಕರ್ತವ್ಯ. ಆದ್ದರಿಂದ ವೇಮನ ಯೋಗಿಯವರು ಹೇಳಿದ ಆಧ್ಯಾತ್ಮಿಕ ಪದ್ಯಗಳಿಗೆ ಅರ್ಥ ಹೇಳಬೇಕೆನ್ನುವ ಉದ್ದೇಶದಿಂದ ಬಹಳ ಕಷ್ಟವಾದ ಪದ್ಯವನ್ನು, ಇತರರು ಅರ್ಥವನ್ನು ಹೇಳಲಾರದಷ್ಟು ಕಷ್ಟವಾಗಿರುವ ಪದ್ಯಗಳನ್ನು, ಅರ್ಥ ತಿಳಿಯದೆ ಬಿಟ್ಟು ಹಾಕಿದ ಪದ್ಯಗಳನ್ನು ಆರಿಸಿಕೊಂಡು ಅವುಗಳಿಗೆ ಭಾವಾರ್ಥಗಳನ್ನು ವಿವರವಾಗಿ ನಾವು ಹೇಳಿರುವುದಾಗಿದೆ. ಅಂತಹವುಗಳಲ್ಲಿ ಈ ಮಧ್ಯೆ ಕಾಲದಲ್ಲಿ **"ಜಲಂ"** ಎನ್ನುವ ಪ್ರವಚನವನ್ನು ಹೇಳುತ್ತಾ ವೇಮನ ಪದ್ಯವನ್ನು ವಿವರಿಸುವುದು ನಡೆದಿದೆ.

| | |
|---|---|
| **ಲಂಜ ಲಂಜಯಂಡ್ರು ಲೌಕಿಕ ಧರ್ಮಾನ** | **ಸೂಳೆ ಸೂಳೆ ಎನ್ನುವರು ಲೌಕಿಕ ಧರ್ಮದಲ್ಲಿ** |
| **ಲಂಜ ಗಾನಿದೆವರು ರಾಜ್ಯಮಂದು** | **ಸೂಳೆ ಆಗದಿರುವರ್ಯಾರು ರಾಜ್ಯದಲ್ಲಿ** |
| **ಲಂಜ ಕೊಡುಕು ಬ್ರಹ್ಮರಾತೆಟ್ಲ ರಾಸೆರಾ** | **ಸೂಳೆ ಮಗ ಬ್ರಹ್ಮ ಬರಹವನ್ನು ಹೇಗೆ ಬರೆದನೊ** |
| **ವಿಶ್ವದಾಭಿರಾಮ ವಿನುರ ವೇಮಾ.** | **ವಿಶ್ವದಾಭಿರಾಮ ಕೇಳು ವೇಮಾ.** |

ಎನ್ನುವ ಪದ್ಯಕ್ಕೆ ಪ್ರಪಂಚ ಧರ್ಮದಲ್ಲಿಯೂ, ಆಧ್ಯಾತ್ಮಿಕ ಧರ್ಮ ದಲ್ಲಿಯೂ ಇರುವ ವ್ಯತ್ಯಾಸವನ್ನು ವಿವರಿಸುತ್ತಾ ಈ ಪದ್ಯವನ್ನು ಆಧ್ಯಾತ್ಮಿಕ ಧರ್ಮದಲ್ಲಿ ವೇಮನ ಅವರು ಹೇಳಿದ್ದಾರೆಂದು, ಆಧ್ಯಾತ್ಮಿಕ ಧರ್ಮದಲ್ಲಿ ಈ ವಿಧವಾದ ಭಾವಾರ್ಥ ಇದೆಯೆಂದು ಹೇಳಿದ್ದೇವೆ. ನಾವು ಹೇಳಿದ ವಿಧಾನ ಯಾವ ಅಕ್ಷರ ಜ್ಞಾನ ತಿಳಿಯದ ಪಾಮರರಿಗೂ ಸಹ ಚೆನ್ನಾಗಿ ಅರ್ಥವಾಗುತ್ತದೆ. ಆದರೇ ಕೆಲವರು ಆಧ್ಯಾತ್ಮಿಕ ತಜ್ಞರೆಂದು ಹೆಸರಿಟ್ಟುಕೊಂಡವರು ಪ್ರಬೋಧಾ ನಂದರವರು ದೇವತೆಗಳನ್ನು ದೂಷಿಸಿದ್ದಾರೆ ಎಂದು ಹೇಳಿದ್ದಾರೆ. ದೇವತೆಗಳನ್ನು

ದೂಷಿಸಬೇಕಾದ ಅಗತ್ಯ ಅಲ್ಲಿ ಇಲ್ಲ. ಆದರೂ ದೂಷಿಸುವ ಅಗತ್ಯ ನನಗೆ ಏಕೆ ಬರುತ್ತದೆ? ಹೇಳಿದ ವಿಧಾನವನ್ನು ಅರ್ಥ ಮಾಡಿಕೊಳ್ಳದ ಕೆಲವರು ನಾನು ಬ್ರಹ್ಮನನ್ನು ಸೂಳೆ ಮಗನೆಂದು ದೂಷಿಸಿದ್ದೇನೆಂದು ಹೇಳಿದ್ದಾರೆ. ಅದು ಪದ್ಯದಲ್ಲಿ ಇರುವ ವಾಕ್ಯ. ಅಲ್ಲಿ ಹೇಳಿರುವುದು ವೇಮನಯೋಗಿ. ಆತನು ಆಧ್ಯಾತ್ಮಿಕ ಜ್ಞಾನವನ್ನು ಹೇಳಿದ್ದಾನೆ ಹೊರತು ಆತನಿಗೂ ಸಹ ಬ್ರಹ್ಮನನ್ನು ದೂಷಿಸುವ ಅಗತ್ಯವಿಲ್ಲ.

ಒಬ್ಬ ಯೋಗಿ ಹೇಳಿದ ಪದ್ಯ ವಿವರವನ್ನು ಗ್ರಹಿಸಿಕೊಳ್ಳದ ಬುದ್ಧಿ ಇರುವವರು ಆಧ್ಯಾತ್ಮಿಕತಜ್ಞರೆಂದು ಹೇಳಿಕೊಳ್ಳುವುದು ನಾಚಿಕೆ ಗೇಡು. ಕೆಲವರು ನಮ್ಮನ್ನು ವಿಮರ್ಶಿಸಿದ ನಂತರ ಅದರಲ್ಲಿ ಯಾವ ವಿವರ ಇದೆಯೋ ಎಂದು ವೆಬ್‌ಸೈಟ್‌ನಲ್ಲಿರುವ "ಜಲಂ" ಎನ್ನುವ ನಮ್ಮ ಉಪನ್ಯಾಸವನ್ನು ನೋಡಿದ್ದಾರೆ. ಗಂಟೆ ಅವಧಿಯಲ್ಲಿ ಹೇಳಿದ ವಿವರದಲ್ಲಿ ಎಷ್ಟೋ ಜ್ಞಾನವಿದೆಯೆಂದು ಅದರಲ್ಲಿ ಯಾವ ದೂಷಣೆ ಇಲ್ಲವೆಂದು ನೋಡಿದವರೆಲ್ಲರೂ ಹೇಳಿದ್ದಾರೆ. ಸಾಮಾನ್ಯ ಪ್ರಜೆಗಳಿಗೆ ಅರ್ಥವಾದ ವಿವರ ಟಿ.ವಿ ಚರ್ಚಾವೇದಿಕೆಗಳಲ್ಲಿ ಕುಳಿತುಕೊಂಡು, ನಾವು ಆಧ್ಯಾತ್ಮಿಕ ತಜ್ಞರೆಂದು ಹೇಳಿಕೊಳ್ಳುವವರಿಗೆ ಏಕೆ ಅರ್ಥವಾಗಲಿಲ್ಲವೋ, ಕೆಲವರಿಗೆ ಅರ್ಥವಾದರೂ ಬೇಕೆಂದು ನಮ್ಮ ಮೇಲೆ ಕೆಸರು ಚೆಲ್ಲುವ ನಿಮಿತ್ತ ಹಾಗೆ ಮಾತನಾಡಿದ್ದಾರೆಂದು ತಿಳಿಯುತ್ತಿದೆ.

ಒಂದು ಪದ್ಯದಲ್ಲಾಗಲೀ, ಗದ್ಯದಲ್ಲಾಗಲೀ ಬರೆಯಲ್ಪಟ್ಟಿರುವ ಸಮಾಚಾರವನ್ನು ಯಾವುದೋ ಒಂದು ರಂಗದಲ್ಲಿ ಅರ್ಥಮಾಡಿಕೊಳ್ಳಬೇಕು. ಆಧ್ಯಾತ್ಮಿಕದಲ್ಲಿ ಹೇಳಿರುವುದನ್ನು ಲೌಕಿಕದಲ್ಲಿ ಹೇಳಿಕೊಂಡರೇ ಅದು ತಪ್ಪಾಗಿ ಅರ್ಥವಾಗುತ್ತದೆ. ಹಾಗೇ ಲೌಕಿಕದಲ್ಲಿ ಹೇಳಿರುವುದು ಆಧ್ಯಾತ್ಮಿಕದಲ್ಲಿ ಸಹ ಅರ್ಥಮಾಡಿಕೊಳ್ಳಬಾರದು. ಹಾಗೇ ಯಾವ ಭಾಷೆಯಲ್ಲಿ, ಯಾವ ಸಂದರ್ಭದಲ್ಲಿ ಹೇಳಿದ್ದಾರೆಂದು ಪೂರ್ತಿಯಾಗಿ ನೋಡಿದಾಗಲೇ ಅಲ್ಲಿ ಬರೆಯಲ್ಪಟ್ಟಿರುವ ಭಾವ ಮನುಷ್ಯನಿಗೆ ಅರ್ಥವಾಗಬಲ್ಲದು. ಈಗ ಉದಾಹರಣೆಯಾಗಿ ಒಂದು ಪದವನ್ನು ತೆಗೆದುಕೊಂಡು ನೋಡೋಣ. ಪ್ರಥಮ ದೈವ ಗ್ರಂಥವಾದ ತೌರಾತ್ ಅಥವಾ ಭಗವದ್ಗೀತೆಯಲ್ಲಿ (ತೌರಾತ್ ಎನ್ನುವ ಹೆಸರು ದೇವರು ಇಟ್ಟಿರುವ

ಹೆಸರು. ಭಗವದ್ಗೀತೆ ಎನ್ನುವುದು ಮನುಷ್ಯರು ಇಟ್ಟಿರುವ ಹೆಸರು) ಅಕ್ಷರ ಪರಬ್ರಹ್ಮಯೋಗವೆನ್ನುವ ಅಧ್ಯಾಯದಲ್ಲಿ 23 ನೇ ಶ್ಲೋಕದಲ್ಲಿ **"ಯತ್ರ ಕಾಲೇ"** ಎಂದು ಇದೆ. ಭಗವದ್ಗೀತೆಯಲ್ಲಿ ಹೇಳಿರುವುದು ಸಂಸ್ಕೃತ ಭಾಷೆ. ಸಂಸ್ಕೃತಕ್ಕೆ ಹತ್ತಿರವಾಗಿರುವ ಭಾಷೆ ಹಿಂದೀ ಭಾಷೆ. ಕಾಲೇ ಎನ್ನುವ ಪದ ಹಿಂದೀಯಲ್ಲಿ ಸಹ ಇದೆ. ಯಾರಾದರೂ ಕಪ್ಪಾಗಿರುವ ಮನುಷ್ಯನನ್ನು ದೂಷಣೆ ದೋರಣಿಯಲ್ಲಿ "ಕ್ಯಾ ಕಾಲೇ" ಎಂದು ಕರೆಯುವುದು ಸಹ ನಡೆಯುತ್ತಿದೆ. ಅದರ ಅರ್ಥ "ಏನೊ ಕರಿಯಾ" ಎಂದು. ಕಾಲೇ ಎನ್ನುವ ಪದಕ್ಕೆ ಸಂಸ್ಕೃತದಲ್ಲಿ ಕಾಲ ಎನ್ನುವ ಅರ್ಥವಿದೆ. ಹಿಂದೀ ಯಲ್ಲಿ ಕಪ್ಪಗಿರುವವನೆಂದು ಅರ್ಥ.

ಈಗ ಭಗವದ್ಗೀತೆಯಲ್ಲಿನ ಅರ್ಥದ ಪ್ರಕಾರ ಯಾವ ಕಾಲದಲ್ಲಿ ಎಂದು ಹೇಳಿಕೊಳ್ಳಬಹುದು. ಕಾಲೇ ಎನ್ನುವ ಪದವನ್ನು ಸಂದರ್ಭಾನುಸಾರವಾಗಿ ಹೇಳಿಕೊಳ್ಳಬೇಕಾಗಿರುತ್ತದೆ. ಆಗಲೇ ಅದು ಜ್ಞಾನವಾಗುತ್ತದೆ. ಆಧ್ಯಾತ್ಮಿಕ ಜ್ಞಾನವನ್ನು ಬಿಟ್ಟು ಹಾಕಿ ಲೌಕಿಕ ಜ್ಞಾನದೊಳಗೆ ಹೋದರೇ ಅದು ಅಜ್ಞಾನವಾಗುತ್ತದೆ. ಹಾಗೆಯೇ ಯೋಗಿಯಾದ ವೇಮನ ಹೇಳಿದ ಜ್ಞಾನದಲ್ಲಿ ಆಧ್ಯಾತ್ಮಿಕ ಜ್ಞಾನವೇ ಇರುತ್ತದಾಗಲೀ ಪ್ರಪಂಚ ಜ್ಞಾನ ಇರುವುದಿಲ್ಲ. ಆತನು ಹೇಳಿದ ಪದ್ಯವನ್ನು ಪ್ರಪಂಚ ಧರ್ಮದ ಪ್ರಕಾರ ಹೇಳಿಕೊಂಡರೇ ಬ್ರಹ್ಮನನ್ನು ಸೂಳೆ ಮಗನೆಂದು ದೂಷಿಸಿದಂತೇ ಆಗುತ್ತದೆ. ಆತ್ಮ ಧರ್ಮದ ಪ್ರಕಾರ ಹೇಳಿಕೊಂಡರೇ ಮನುಷ್ಯನ ವೊಂದು ಸೃಷ್ಠಿ ರಹಸ್ಯವನ್ನು ಹೇಳುವುದು ಇದೆ. ಈ ಕಾಲದಲ್ಲಿ ಎಷ್ಟೋ ಕಷ್ಟವಾಗಿರುವ ಪದ್ಯಕ್ಕೆ ಬಹಳ ಸುಲಭವಾಗಿ ಅರ್ಥವಾಗುವಂತೆ ನಾವು ವಿವರವನ್ನು ಹೇಳಿದರೇ ಅದನ್ನು ವಕ್ರೀಕರಿಸಿ ಮಾತನಾಡುವವರಿಗೆ ಅದನ್ನು ಗ್ರಹಿಸಿಕೊಳ್ಳುವ ಗ್ರಾಹಿತ ಶಕ್ತಿಯಾದರೂ ಇಲ್ಲದಂತಿರಬೇಕು ಇಲ್ಲದೇ ಹೋದರೇ ತಿಳಿದು ಅಸೂಯೆಯಿಂದಾದರೂ ಮಾತನಾಡಿರಬೇಕು.

ಆಧ್ಯಾತ್ಮಿಕದಲ್ಲಿ ಪರಿಚಯವಿಲ್ಲದವರಿಗೂ ಸಹ ಈ ಪದ್ಯವೊಂದರ ಭಾವ ಚೆನ್ನಾಗಿ ಅರ್ಥವಾಗುತ್ತಿರುವಾಗ, ಅಷ್ಟೋ ಇಷ್ಟೋ ತಿಳಿದವರೆಂದು ಹೇಳಿಕೊಳ್ಳುವವರು, ಆಧ್ಯಾತ್ಮಿಕ ತಜ್ಞರೆಂದು ಹೆಸರು ಇಟ್ಟುಕೊಂಡವರು, ಕೆಲವರು ಸ್ವಾಮೀಜಿಗಳಾಗಿ ಚಲಾವಣೆಯಾಗುತ್ತಿರುವವರು ಮುಖ್ಯವಾಗಿ ನನ್ನನ್ನು

ಅಜ್ಞಾನಿಯನ್ನಾಗಿ ಚಿತ್ರೀಕರಿಸಿ ಹೇಳುತ್ತಿದ್ದಾರೆ. ಅಷ್ಟೇ ಅಲ್ಲದೆ ನಾನು ಅನೇಕ ಬಾರಿ ದೈವದೂಷಣೆ ಮಾಡಿದ್ದೇನೆಂದು, ವಿನಾಯಕನೆಂದರೇ ಸರಿಹೋಗುವುದಿಲ್ಲವೆಂದು, ರಾಮನನ್ನು ದೇವರು ಅಲ್ಲವೆಂದು ಹೇಳಿದ್ದೇನೆಂದು ಹೇಳುತ್ತಿದ್ದಾರೆ. ಸುಮಾರು 40 (ನಲವತ್ತು) ವರ್ಷಗಳಿಂದ ನಾನು ದೈವ ಜ್ಞಾನವನ್ನು ಹೇಳುತ್ತಿದ್ದೇನೆ. ಇಲ್ಲಿಗೆ ನೂರ ಆರು (106) ಗ್ರಂಥಗಳನ್ನು ಬರೆಯುವುದು ನಡೆದಿದೆ. ಎರಡು ನೂರ (200) ಕ್ಕೂ ಮೇಲ್ಪಟ್ಟು ಉಪನ್ಯಾಸ ಪ್ರವಚನಗಳನ್ನು ಹೇಳುವುದು ನಡೆದಿದೆ. ಇದೆಲ್ಲವೂ ನನ್ನ ಕಡೆಯಿಂದ ನಡೆದಾಗ, ದೈವದ ಕಡೆಯಿಂದ ಇಲ್ಲಿಗೆ ಬಂದು ಜ್ಞಾನವನ್ನು ತಿಳಿದುಕೊಂಡವರಿಗೆ ಅನೇಕ ರೋಗಗಳು ಸಹಿತ ಇಲ್ಲದಂತೆ ಹೋಗಿವೆ. ದೇವರನ್ನು ವಿಶ್ವಾಸಿಸಿದವರ ಶರೀರಕ್ಕೆ ಗ್ರಂಥಗಳು ಅಂಟಿಕೊಳ್ಳುವುದು, ಶರೀರದಲ್ಲಿ ಇರುವ ಬಾಧೆಗಳು ಇಲ್ಲದೇ ಹೋಗುವಂತೆ ಮಾಡುವುದು ನಡೆಯುತ್ತಿದೆ. ಅಷ್ಟೇ ಅಲ್ಲದೆ ಇಲ್ಲಿ ಗ್ರಂಥ ರೂಪದಲ್ಲಿ ಬಂದಿರುವ ಜ್ಞಾನ ಎಷ್ಟೋ ವಿವರವಾಗಿ ಇರುವುದರಿಂದ ಎಷ್ಟೋ ಮಂದಿ ಗ್ರಂಥಗಳ ಮೂಲಕ ಜ್ಞಾನಿಗಳಾಗಿ ಬದಲಾಗಿದ್ದಾರೆ. ಹೇಳಲ್ಪಟ್ಟಿರುವ ಅಥವಾ ಬರೆಯಲ್ಪಟ್ಟಿರುವ ಜ್ಞಾನ ಸುಲಭವಾಗಿ ತಿಳಿಯುವುದರಿಂದ ಆಂಧ್ರದಲ್ಲಿ ಸುಮಾರು ಎರಡು ಲಕ್ಷ ಮಂದಿ, ತೆಲಂಗಾಣಾದಲ್ಲಿ ಲಕ್ಷ ಮಂದಿ, ಕರ್ನಾಟಕದಲ್ಲಿ 50 ಸಾವಿರ ಮಂದಿ, ಒರಿಸ್ಸಾದಲ್ಲಿ ಹತ್ತು ಸಾವಿರ ಮಂದಿ ನನ್ನ ಜ್ಞಾನವನ್ನು ತಿಳಿದವರಿದ್ದಾರೆ. ಅಷ್ಟೇ ಅಲ್ಲದೆ ತಮಿಳನಾಡಿನಲ್ಲಿ ಸಹ ಶೀಘ್ರದಲ್ಲಿ ನಾನು ಹೇಳಿದ ಜ್ಞಾನ ಹರಡಬಲ್ಲದು. ಕಳೆದ ಚರಿತ್ರೆಯೊಳಗೆ ನೋಡಿದರೆ ಎಲ್ಲ ಜ್ಞಾನಗಳಿಗಿಂತಲೂ ಅತ್ಯಂತ ವೇಗವಾಗಿ ಮನುಷ್ಯರೊಳಗೆ ಸೇರಿರುವುದು ನನ್ನ ಜ್ಞಾನವೇಯೆಂದು ಹೆಮ್ಮೆಯಿಂದ ಹೇಳುತ್ತಿದ್ದೇವೆ.

ಐದು ರಾಷ್ಟ್ರಗಳಲ್ಲಿ ಲಕ್ಷಾಂತರ ಜನರು ನನ್ನ ಜ್ಞಾನವನ್ನು ಅನುಸರಿಸುವುದೇ ಅಲ್ಲದೆ ಅವರು ನಾನು ಹೇಳಿದ ಜ್ಞಾನವನ್ನು ತಪ್ಪು ಭಾವನೆಯಿಂದಲ್ಲದೆ ಒಳ್ಳೆಯ ಭಾವನೆಯಿಂದ ಅರ್ಥ ಮಾಡಿಕೊಂಡಿದ್ದಾರೆ. ಭೂಮಿ ಮೇಲೆ ದೇವರು, ಮಾಯೆ ಎನ್ನುವ ಎರಡು ವಿಭಾಗಗಳಿವೆ. ಯಾವ ವಿಷಯವನ್ನಾಗಲೀ ಈಕಡೆ ಮಾಯೆ ಪದ್ಧತಿಯಲ್ಲಾಗಲೀ, ಆಕಡೆ ದೈವ ಪದ್ಧತಿಯಲ್ಲಾಗಲೀ ಅರ್ಥ ಮಾಡಿಕೊಳ್ಳುವುದು ನಡೆಯುತ್ತಿದೆ. ನಾನು ಹೇಳುವ ಪ್ರತಿಯೊಂದು ಬೋಧನೆ

ಮಾಯ ಸಂಬಂಧವಾದ ಪ್ರಪಂಚ ಧರ್ಮದಲ್ಲಿ ಅಲ್ಲದೆ ದೈವ ಸಂಬಂಧವಾದ ಆಧ್ಯಾತ್ಮಿಕ ಧರ್ಮದಲ್ಲಿಯೇ ಬೋಧಿಸಿದ್ದೇನೆ. ದೇವರು ಸಹ ತನ್ನ ಬೋಧನೆಯನ್ನು ಅಂತರ್ ದೃಷ್ಠಿಯಿಂದ ನೋಡೆಂದಿದ್ದಾನೆ, ಬಾಹ್ಯ ದೃಷ್ಠಿಯಿಂದ ನೋಡಬೇಡ ಎಂದು ಹೇಳಿದ್ದಾನೆ. ಹಾಗೆಯೇ ವೇಮನ ಅವರು ಸಹ ನನ್ನ ಜ್ಞಾನ ಪ್ರಪಂಚ ಸಂಬಂಧವಾಗಿ ಸಾವಿರ ವಿಧದಲ್ಲಿ ಅರ್ಥವನ್ನು ಕೊಟ್ಟರೂ ಸಹ, ಅದರಲ್ಲಿ ನೋಡಿದರೆ ವಿಚಿತ್ರವಾದ ಜ್ಞಾನವೇ ಇದೆಯೆಂದು ಹೇಳಿದ್ದಾನೆ. ಆ ಮಾತನ್ನು ತನ್ನ ಪದ್ಯದಲ್ಲಿ ಹೀಗೆ ಹೇಳಿದ್ದಾನೆ ನೋಡಿರಿ.

| | |
|---|---|
| **ವೇಯಿ ವಿಧಮು ಲಮರು ವೇಮನ ಪದ್ಯಂಬು** | **ಸಾವಿರ ವಿಧದಲ್ಲಿ ವೇಮನ ಪದ್ಯಗಳ್ ರಾಜಿಸು** |
| **ಅರ್ಥಮಿಚ್ಚು ವಾನಿ ನರಸಿ ಚೂಡ** | **ಅರ್ಥ ವೀವವನೆ ಅರಿಸಿ ನೋಡೆ** |
| **ಜೂಡ ಜೂಡ ಗಲ್ಗು ಜೋದ್ಯಮೌ ಜ್ಞಾನಂಬು** | **ನೋಡು ನೋಡಲುಂಟು ಅದ್ಭುತ ಜ್ಞಾನವು** |
| **ವಿಶ್ವದಾಭಿರಾಮ ವಿನುರ ವೇಮಾ.** | **ವಿಶ್ವದಾಭಿರಾಮ ಕೇಳು ವೇಮಾ.** |

ವೇಮನ ಯೋಗಿ ಮಾತುಗಳಲ್ಲಿ ತನ್ನ ಪದ್ಯ ಪ್ರಪಂಚ ಸಂಬಂಧವಾಗಿ ಸಾವಿರ ವಿಧಗಳಲ್ಲಿ ಅರ್ಥವನ್ನು ಕೊಟ್ಟರೂ, ಆಧ್ಯಾತ್ಮಿಕದ ಪ್ರಕಾರ ಆಶ್ಚರ್ಯ ಕರವಾದ ಜ್ಞಾನ ಪದ್ಯದಲ್ಲಿ ಇದೆಯೆಂದು ಹೇಳಿದ್ದಾನೆ. ಹಾಗೆಯೇ ನಾನು ಮೊದಲಿನಿಂದ ಲೌಕಿಕ ಧರ್ಮದಲ್ಲಿ ಅಲ್ಲದೇ ಆಧ್ಯಾತ್ಮಿಕ ಧರ್ಮದಲ್ಲಿಯೇ ಜ್ಞಾನವನ್ನು ಹೇಳಿದ್ದೇನೆ. ಆದರೇ "ಜಲಂ" ಎನ್ನುವ ಪ್ರವಚನವನ್ನು ಬಹಳ ಮಂದಿ ಜ್ಞಾನಿಗಳಾದವರೇ ಪ್ರಪಂಚ ಸಂಬಂಧವಾಗಿ ಅರ್ಥ ಮಾಡಿಕೊಂಡು, ನಾನು ದೇವತೆಗಳನ್ನು ದೂಷಿಸಿದ್ದೇನೆಂದು ಅಂದಿದ್ದಾರೆಂದರೆ ಅವರಿಗೆ ಪ್ರತಿ ವಿಷಯ ಆಧ್ಯಾತ್ಮಿಕ ಧರ್ಮದಲ್ಲಿ ಅರ್ಥವಾಗಲಿಲ್ಲವೆಂದೇ ತಿಳಿಯುತ್ತಿದೆ. ಉದಾಹರಣೆಗೆ ಹೇಳಿದರೇ ಒಬ್ಬ ಸ್ತ್ರೀ ಪುರುಷನು ಶಾರೀರಕವಾಗಿ ಹತ್ತಿರವಾದರೇ ಅದನ್ನು ಪ್ರಪಂಚ ಧರ್ಮದಲ್ಲಿ ಶೃಂಗಾರ ಎಂದು ಹೇಳುತ್ತೇವೆ. ಅದೇ ಆಧ್ಯಾತ್ಮಿಕ ಧರ್ಮದಲ್ಲಾದರೇ ಅದನ್ನು ಸೃಷ್ಠಿ ರಹಸ್ಯ ಎಂದು ಹೇಳಬಹುದು. ಪ್ರಪಂಚ ವಿಷಯದಲ್ಲಾದರೇ ಅಸಭ್ಯ ವಿಷಯವಾಗುತ್ತದೆ. ಅದೇ ಆಧ್ಯಾತ್ಮಿಕದಲ್ಲಾದರೇ ಜ್ಞಾನವಾಗುತ್ತದೆ. ಕೆಲವರು ನನ್ನೊಂದಿಗೆ ಭೇಟಿಯಾಗಿ ನಾನು ಹೇಳುವ ಜ್ಞಾನವನ್ನು ಕುರಿತು ಅನೇಕವಾಗಿ ಪ್ರಶ್ನೆಗಳನ್ನು ಕೇಳಿದ್ದಾರೆ. ಅವರು ಕೇಳಿದ ಪ್ರಶ್ನೆಗಳೆಲ್ಲವುಗಳಿಗೂ ನಾವು ತಾಳ್ಮೆಯಿಂದ ಉತ್ತರಗಳನ್ನು ಕೊಟ್ಟಿದ್ದೇವೆ. ಈ

ದಿನ ನಮ್ಮ ಮೇಲೆ ಪ್ರಜೆಗಳಲ್ಲಿರುವ ಅಪಾರ್ಥಗಳೆಲ್ಲವನ್ನೂ ಸಹ ಪ್ರಶ್ನೆಗಳಾಗಿ ಕೇಳಿದರೇ ಅವುಗಳಿಗೆ ಉತ್ತರಗಳನ್ನು ಕೊಡುತ್ತಾ ಆ ಪ್ರಶ್ನೆ ಉತ್ತರಗಳೆಲ್ಲವನ್ನೂ ಗ್ರಂಥ ರೂಪವಾಗಿ ಮಾಡಿ **"ಭಕ್ತಿಯಲ್ಲಿ ನೀವು ಸಂಸಾರಿಗಳಾ? ವ್ಯಭಿಚಾರಿಗಳಾ"** ಎಂದು ಹೆಸರಿಟ್ಟು ಹೊರಗೆ ಬಿಡುಗಡೆ ಮಾಡುವುದು ನಡೆದಿದೆ. ಈ ಗ್ರಂಥದ ಮುಖಾಂತರ ಕೆಲವರಿಗೆ ನನ್ನ ಮೇಲೆ ಇರುವ ಕೆಟ್ಟ ಭಾವನೆಗಳು ಇಲ್ಲದಂತಾಗಿ ಒಳ್ಳೆಯ ಭಾವನೆ ಉಂಟಾಗುತ್ತದೆಂದು ಅಂದುಕೊಳ್ಳುತ್ತಿದ್ದೇನೆ.

**ಪ್ರಶ್ನೆ :– ನೀವು ಅಸಭ್ಯ ಮಾತುಗಳಿಂದ ಕೂಡಿಕೊಂಡ ಜ್ಞಾನವಲ್ಲದೆ ಒಳ್ಳೆಯ ಭಕ್ತಿ ಭಾವನೆಗಳಿರುವ ಜ್ಞಾನ ಹೇಳಬಹುದಲ್ಲವೇ! "ಜಲಂ" ಪ್ರಸಂಗದಲ್ಲಿ ಸಾವಿರಾರು ಜನರಿರುವ ಸಭೆಯಲ್ಲಿ "ಜಲಂ"ನ್ನು ತಿರುಗಿಸಿ ಹೇಳಿದರೆ "ಲಂಜ" (ಸೂಳೆ) ಆಗುತ್ತದೆಂದು ಹೇಳುವುದು ಸಭೆಯನ್ನು ಹೀಯಾಳಿಸಿ ಮಾತನಾಡಿದಂತಲ್ಲವೇ! ಸಭೆಯ ಮರ್ಯಾದೆ ಪ್ರಕಾರ ಹೇಳುವ ಮಾತುಗಳು ಅಸಭ್ಯ ಪದಗಳಾಗಿ ಇರಬಾರದಲ್ಲವೇ! ತ್ರಿಮೂರ್ತಿಗಳಲ್ಲಿ ಒಬ್ಬರಾದ ಬ್ರಹ್ಮನನ್ನು ಲಂಜ (ಸೂಳೆ) ಮಗ ಎನ್ನುವುದು ದೇವತೆಗಳನ್ನು ದೂಷಿಸಿದಂತೆ ಅಲ್ಲವೆ! ಎಂದು ಕೇಳುತ್ತಿದ್ದೇವೆ. ಇದಕ್ಕೆ ನೀವು ಏನನ್ನುತ್ತೀರಾ?**

**ಉತ್ತರ :–** ಯಾವ ವಿಷಯವನ್ನಾದರೂ ಸಮಗ್ರವಾಗಿ ಪೂರ್ತಿ ಸಮಾಚಾರವನ್ನು ತಿಳಿದುಕೊಂಡ ನಂತರ ಅದರಲ್ಲಿ ಯಾವ ಸಾರಾಂಶವಿದೆಯೆಂದು ಅರ್ಥ ವಾಗಬಲ್ಲದು. ಹಾಗಲ್ಲದೆ ಚೂರುಚೂರಾಗಿ ಮಾಡಿಕೊಂಡು ನೋಡಿದರೆ ಒಂದು ಹೋಗಿ ಇನ್ನೊಂದು ಅರ್ಥವಾಗಬಲ್ಲದು. ಉದಾಹರಣೆಗೆ ಹೇಳಿದರೆ ಮತ್ತಿನ ಪದಾರ್ಥಗಳನ್ನು ಸೇವಿಸಿದವರಿಗೆ ನೀವು ಗುಡಿಗೆ ಹೋಗುವುದು ಒಳ್ಳೆಯದಲ್ಲ

ಎಂದು ಹೇಳಿದ್ದೇವೆಂದುಕೊಳ್ಳಿ. ಈ ಮಾತನ್ನು ಯಾರು ಕೇಳಿದರೂ ಹೇಳಿರುವುದು ಸರಿಯಾದ ಮಾತೇ ಅಲ್ಲವೇ! ಸಾರಾಯಿ ಕುಡಿದು ಗುಡಿಗೆ ಹೋಗಬಾರದಲ್ಲವೇ! ಎಂದು ಅಂದುಕೊಳ್ಳುತ್ತಾರೆ. ಹಾಗಲ್ಲದೆ ಅದೇ ಮಾತನ್ನೇ ಮತ್ತಿನ ಪದಾರ್ಥಗಳನ್ನು ಸೇವಿಸಿದವರು ಎನ್ನುವುದನ್ನು ತೆಗೆದುಹಾಕಿ **ನೀವು ಗುಡಿಗೆ ಹೋಗಬಾರದು** ಎಂದರೇ ಭಕ್ತಿಯಿಂದ ಗುಡಿಗೆ ಹೋಗುವವರನ್ನು ಹೋಗಬೇಡಿರಿ ಎಂದು ಹೇಳಿದಂತಾಗುತ್ತದೆ. ಆಗ ಆ ಮಾತನ್ನು ಅಪಾರ್ಥ ಮಾಡಿಕೊಳ್ಳುವ ಅವಕಾಶವಿದೆ. ಗುಡಿಗಳಿಗೆ ಹೋಗಬೇಡವೆಂದು ಪ್ರಜೆಗಳಿಗೆ ಕೆಟ್ಟದಾಗಿ ಹೇಳಿದಂತೆ ಕಾಣಿಸುತ್ತದೆ. ಇದೇ ವಿಧವಾಗಿಯೇ ನನ್ನನ್ನು ಕೆಟ್ಟದಾಗಿ ಪ್ರಚಾರ ಮಾಡಬೇಕೆಂದುಕೊಂಡವರು 'ಜಲಂ' ಪ್ರಸಂಗದಲ್ಲಿನ ವಿಷಯವನ್ನು ಚೂರುಚೂರಾಗಿ ಮಾಡಿ ಹೊರಗೆ ತೋರಿಸುವುದರಿಂದ, ಹೇಳಿದ ಜ್ಞಾನ ತಿಳಿಯದಂತೆ ಹೋಗಿ, ಅದರಲ್ಲಿ ಅಸಭ್ಯ ಮಾತ್ರ ಕಾಣಿಸುತ್ತಿದೆ. ಇದು ದುಷ್ಪ್ರಚಾರ ಹೊರತು ನಾನು ಅದರಲ್ಲಿ ಅಸಭ್ಯ ಮಾತುಗಳನ್ನು ಹೇಳಲಿಲ್ಲ. ಸ್ವಚ್ಛವಾದ ಜ್ಞಾನವನ್ನು ಹೇಳಿದ್ದೇವೆ.

"ಜಲಂ" ನಂತಹ ಉಪನ್ಯಾಸಗಳನ್ನು ನೀವು ಹೇಳದಿದ್ದರೇ ಚೆನ್ನಾಗಿ ರುತ್ತಿತ್ತು ಎಂದು ಅಂದಿದ್ದಾರೆ. ನಾನು ಎಷ್ಟೋ ರಂಗಗಳಲ್ಲಿ ಬೆಳೆದರೂ, ದೇವರು ಕೊನೆಗೆ ನನ್ನನ್ನು ಆಧ್ಯಾತ್ಮಿಕ ಗುರುವನ್ನಾಗಿ ತಯಾರು ಮಾಡಿದ್ದಾನೆ. ನನ್ನ ವಂಶಸ್ಥರಿಗೆ ಏಳು ತಲಾಂತರಗಳ ಹಿಂದಿನಿಂದ ನೋಡಿದರೂ ಯಾರೂ ಆಧ್ಯಾತ್ಮಿಕ ಜ್ಞಾನ ಹೊಂದಿದವರಿಲ್ಲ. ತಾತಂದಿರನ್ನು ತಂದೆಯರನ್ನನುಸರಿಸಿ ಅವರ ಮಕ್ಕಳು ತಯಾರಾದಂತೆ ಅಲ್ಲದೆ, ನಮ್ಮ ಹಿರಿಯರು ವ್ಯವಸಾಯ ಮಾಡುವವರಾದರೂ ನಾನು ಪ್ರತ್ಯೇಕಿಸಿ ಆಧ್ಯಾತ್ಮಿಕದೊಳಗೆ ಬರುವುದೇ ಅಲ್ಲದೆ, ಮೂರು ಮತಗಳ ಗುರುವು ಆಗುವುದು ನನ್ನದು ನನಗೇ ಆಶ್ಚರ್ಯ ವನ್ನುಂಟು ಮಾಡುತ್ತಿದೆ. ದೇವರು ಅಂದುಕೊಂಡರೆ ಏನನ್ನಾದರೂ ಮಾಡಬಲ್ಲನು. ಅದೇ ರೀತಿ ಒಬ್ಬ ಸಾಧಾರಣ ವ್ಯಕ್ತಿಯನ್ನು ಸಿದ್ಧಾಂತ ಕರ್ತನಾಗಿ, ಸಂಚಲನಾತ್ಮಕ ಬೋಧಕನಾಗಿ ತಯಾರು ಮಾಡಿದ ಘನತೆ ದೇವರಿಗೇ ಸೇರುತ್ತದೆ. ನಾನು ಎಲ್ಲ ಸಮಯಗಳಲ್ಲಿ ಸಾಧಾರಣ ವ್ಯಕ್ತಿಯಾಗಿದ್ದರೂ ಕೆಲವು ಸಮಯಗಳಲ್ಲಿ ಆತ್ಮ ಜೊತೆಯಾಗಿದ್ದು ನನ್ನನ್ನು ಸ್ವಾಮಿಯಾಗಿ, ಗುರುವಾಗಿ ತಯಾರು ಮಾಡಿ

ಭೂಮಿ ಮೇಲೆ ಯಾರಿಗೂ ತಿಳಿಯದ ಜ್ಞಾನವನ್ನು ಬೋಧನೆಗಳ ರೂಪದಲ್ಲಿ ಹೇಳುವುದು ನಡೆಯುತ್ತಿದೆ.

ಸಾಧಾರಣವಾಗಿ ಒಂದು ಮತದಲ್ಲಿಯೇ ಅನೇಕ ಮಂದಿ ಗುರುಗಳು ಅನೇಕ ವಿಧಗಳ ಪ್ರಜೆಗಳಿಗೆ ಜ್ಞಾನವನ್ನು ಬೋಧಿಸುತ್ತಿರುತ್ತಾರೆ. ಅವರ ಬೋಧನೆಗಳನ್ನು ನೋಡಿದರೆ ಯಾವ ಮತದಲ್ಲಾದರೂ ಸಂಪೂರ್ಣ ಜ್ಞಾನವನ್ನು ಬೋಧಿಸಲಿಲ್ಲವೆಂದು ತಿಳಿಯುತ್ತಿದೆ. ಉದಾಹರಣೆಗೆ ಹಿಂದೂ ಮತದಲ್ಲಿರುವ ಗುರುಗಳು ಭಗವದ್ಗೀತೆಯನ್ನು ಸಂಪೂರ್ಣ ವಿವರವಾಗಿ ಹೇಳಲಾರದೆ ಹೋಗುತ್ತಿದ್ದಾರೆ. ಭಗವದ್ಗೀತೆಯಲ್ಲಿ ಹೇಳಿರುವುದು ಒಂದಾದರೆ ಇವರಿಗೆ ಅರ್ಥವಾಗಿರುವುದು ಮತ್ತೊಂದು. ಹಾಗಿರುವಾಗ ಅವರು ಗುರುಗಳಾಗಿ ಸಂಪೂರ್ಣ ಜ್ಞಾನವನ್ನು ಪ್ರಜೆಗಳಿಗೆ ಬೋಧಿಸಲಿಲ್ಲವೆಂದು ತಿಳಿಯುತ್ತಿದೆ. ಹಾಗೆಯೇ ಉಳಿದ ಎರಡು ಮತಗಳಲ್ಲಿ ದೈವ ಗ್ರಂಥಗಳಲ್ಲಿನ ಜ್ಞಾನವನ್ನು ಸರಿಯಾದ ಮಾರ್ಗದಲ್ಲಿ ಬೋಧಿಸಲಾರದೆ ಹೋಗುತ್ತಿದ್ದಾರೆ. ಇದನ್ನನುಸರಿಸಿ ಒಂದು ಮತದಲ್ಲಿಯು ಸಹ ದೇವರು ತಿಳಿಸಿದ ಜ್ಞಾನವನ್ನು ಸರಿಯಾಗಿ ತಿಳಿಸುವ ಗುರುಗಳು ಇಲ್ಲವೆಂದು ಅರ್ಥವಾಗುತ್ತಿದೆ. ಇಂತಹ ಸಮಯದಲ್ಲಿ ಎಲ್ಲ ಮತಗಳಲ್ಲಿ ಸ್ವಚ್ಛವಾದ ಜ್ಞಾನವನ್ನು ತಿಳಿಸುವ ಗುರುವಾಗಿ ನನ್ನನ್ನು ದೇವರು ಉಪಯೋಗಿಸಿಕೊಳ್ಳುವುದು ನನ್ನ ಅದೃಷ್ಟವಾಗಿ ನಾನು ಭಾವಿಸಿ ಕೊಳ್ಳುತ್ತಿದ್ದೇನೆ.

ನನ್ನನ್ನು ದೇವರು ಎಷ್ಟು ದೊಡ್ಡ (ಶ್ರೇಷ್ಟ) ಮಾರ್ಗದಲ್ಲಿ ಇಟ್ಟಿದ್ದಾನೋ ನನಗೆ ಚೆನ್ನಾಗಿ ಅರ್ಥವಾಗಿದೆ. ಅಂತಹ ನನ್ನನ್ನು ಅಜ್ಞಾನ ಲೋಕ ಕೆಟ್ಟದಾಗಿ ಅಂದುಕೊಂಡರೂ ಪರವಾಗಿಲ್ಲ. ನಾನು ಮಾತ್ರ ಪ್ರಜೆಗಳಿಗು, ಜ್ಞಾನ ಜಿಜ್ಞಾಸಿಗಳಿಗೂ ಸರಿಯಾದ ಜ್ಞಾನವನ್ನು ಒದಗಿಸಬೇಕೆಂದು ಭಾವಿಸುತ್ತಿದ್ದೇನೆ. ನಾನು ದೈವ ಜ್ಞಾನವನ್ನು ತಿಳಿಸುವುದಕ್ಕಾಗಿಯೇ ಬದುಕಬೇಕೇ ಹೊರತು ಪ್ರಪಂಚದಲ್ಲಿ ಬರುವ ದೂಷಣೆ, ಭೂಷಣ, ತಿರಸ್ಕಾರಗಳನ್ನು ಲೆಕ್ಕ ಮಾಡಬಾರದು. ಆದ್ದರಿಂದ ಮನುಷ್ಯನಿಗೆ ಅಗತ್ಯವಿರುವ ಜ್ಞಾನವನ್ನು ತಿಳಿಸಬೇಕೆಂದು ಪ್ರಯತ್ನಿಸುತ್ತಿದ್ದೇನೆ. ಮನುಷ್ಯ ಹುಟ್ಟಿದಾಗಿನಿಂದ ಮರಣದವರೆಗು ಇರುವ

ಅಂತರಂಗ ಜ್ಞಾನವನ್ನು ಬೋಧಿಸಬೇಕು. ಆದ್ದರಿಂದ ಭಗವದ್ಗೀತೆಯಲ್ಲಿ ಸಾಂಖ್ಯಯೋಗದಲ್ಲಿ ಹೇಳಿದ **"ವಾಸಾಂಸಿ ಜೀರ್ಣಾನಿ"** ಎನ್ನುವ ಶ್ಲೋಕವನ್ನು ಇಲ್ಲಿಯವರೆಗು ಪ್ರಪಂಚದಲ್ಲಿ ಯಾರೂ ವಿವರಿಸದ ವಿಧಾನದಲ್ಲಿ ವಿವರಿಸಿದ್ದೇವೆ. ಅದರಲ್ಲಿ ನಾನು ಎಷ್ಟೋ ಆಧ್ಯಾತ್ಮಿಕ ಜ್ಞಾನವನ್ನು ಹೇಳಿದರೂ, ಅದನ್ನು ಗ್ರಹಿಸಿಕೊಳ್ಳದವರಿಗೆ ಅಲ್ಲಿ ಅಸಭ್ಯ ಮಾತುಗಳು ಹೇಳಿದಂತೇ ಅರ್ಥವಾಗಿದೆ. ಅಲ್ಲಿ ಭಗವದ್ಗೀತೆಯಲ್ಲಿ ಭಗವಂತನು ಹೇಳಿದ ಜ್ಞಾನವನ್ನು ವಿವರಿಸಿ ಹೇಳಿದ್ದೇನೆ. ನಾನು ಸ್ವತಃವಾಗಿ ಕಲ್ಪಿಸಿ ಹೇಳಿರುವುದು ಏನೂ ಇಲ್ಲ. ಹಾಗೇ ಆಧ್ಯಾತ್ಮಿಕ ರಂಗದಲ್ಲಿ ದೊಡ್ಡ ಯೋಗಿಯಾಗಿದ್ದ ವೇಮನರವರು ಹೇಳಿದ ಪದ್ಯವನ್ನು ವಿವರಿಸಿ ಹೇಳಿದ್ದೇನೆ. ಇಲ್ಲಿಯೂ ಸಹ ವೇಮನ ಹೇಳಿರುವುದನ್ನು ವಿವರಿಸಿ ಹೇಳಿದ್ದೇನೆ ಹೊರತು ಸ್ವತಃವಾಗಿ ಹೇಳಿರುವುದು ಏನೂ ಇಲ್ಲ. ಹೇಳಿರುವುದನ್ನು ಗ್ರಹಿಸಿಕೊಳ್ಳುವ ಶಕ್ತಿ ಇಲ್ಲದವರು ನಾನು ಏನೋ ತಪ್ಪು ಮಾಡಿದಂತೆ ಮಾತನಾಡುತ್ತಿದ್ದಾರೆ. ಇದು ನಿಮ್ಮಲ್ಲಿ ಇರುವ ಲೋಪವೇ ಹೊರತು, ನನ್ನ ತಪ್ಪು ಏನೂ ಇಲ್ಲವೆಂದು ಹೇಳುತ್ತಿದ್ದೇನೆ.

ಗರ್ಭಿಣಿ ಸ್ತ್ರೀ ಪ್ರಸವಕ್ಕಾಗಿ ವೈದ್ಯನ ಹತ್ತಿರಕ್ಕೆ ಹೋದರೇ ಇದು ಅಸಭ್ಯ ಕೆಲಸ ನಾವು ಮಾಡುವುದಿಲ್ಲ ಎನ್ನುತ್ತಿದ್ದಾರಾ? ಇಲ್ವಲ್ಲಾ. ಶರೀರದ ಮೇಲೆ ಬಟ್ಟೆಗಳನ್ನೆಲ್ಲಾ ತೆಗೆದು ಹಾಕಿ ಅಗತ್ಯವಾದರೆ ಸ್ತ್ರೀ ಮರ್ಮಾವಯವವಾದ ಯೋನಿಯೊಳಗೆ ಕೈಯ್ಯನ್ನಿಟ್ಟು ಶಿಶುವನ್ನು ಹೊರಗೆ ತೆಗೆಯಬೇಕಾಗಿ ಬರುತ್ತಿದೆ. ಆಗ ಅವರನ್ನು ಹೊಗಳುತ್ತೀರಾ ಅಥವಾ ಅಸಭ್ಯ ಕೆಲಸಗಳನ್ನು ಮಾಡಿದ್ದೀರೆಂದು ಹೇಳುತ್ತಿದ್ದೀರಾ? ವಿಟನು ಸ್ತ್ರೀ ಯೋನಿಯನ್ನು ಮುಟ್ಟಿಕೊಂಡರೆ ಅದು ವ್ಯಭಿಚಾರವಾಗುತ್ತದೆ. ಒಬ್ಬ ವೈದ್ಯನು ವೈದ್ಯಶಾಲೆಯಲ್ಲಿ ಆ ಕೆಲಸವನ್ನು ಮಾಡಿದರೆ ಅದು ವೈದ್ಯವಾಗುತ್ತದೆ. ಯಾವುದು ವ್ಯಭಿಚಾರ, ಯಾವುದು ವೈದ್ಯ ಎಂದು ಅರ್ಥಮಾಡಿಕೊಳ್ಳದವರನ್ನು ಮೂರ್ಖರೆಂದು ಕರೆಯಬೇಕು. ನಾನು ಹೇಳಿರುವುದು ಆಧ್ಯಾತ್ಮಿಕ ವಿವರವೇ ಹೊರತು ಪ್ರಪಂಚ ಸಂಬಂಧ ಶೃಂಗಾರ ಕೋನದಲ್ಲಿ ಹೇಳಲಿಲ್ಲವಲ್ಲಾ? ಯಾವುದು ಶೃಂಗಾರ, ಯಾವುದು ಜ್ಞಾನ ಎಂದು ಗ್ರಹಿಸಲಾರದವರನ್ನು ಮೂರ್ಖರು ಎನ್ನದೇ ಏನನ್ನಬೇಕು? ವೇಮನಯೋಗಿ ತನ್ನ ಪದ್ಯದಲ್ಲಿ ಸೂಳೆ (ಲಂಜ) ಎಂದು ಪ್ರಪಂಚದಲ್ಲಿ ಅನ್ನುವುದು ನಡೆಯುತ್ತಿದೆ.

ಪ್ರಪಂಚ ಧರ್ಮದಲ್ಲಿ ತಪ್ಪಾಗಿ ಇರುವ ಲಂಜ ಎನ್ನುವ ಪದವನ್ನು ಆಧ್ಯಾತ್ಮಿಕ ರಂಗದಲ್ಲಿ ನೋಡಿದರೆ ಎಲ್ಲರನ್ನು ಹಾಗೆಯೇ ಹೇಳಬೇಕಾಗಿ ಬರುತ್ತದೆಂದು ಹೇಳುತ್ತಾ "ಸೂಳೆ (ಲಂಜ) ಆಗದವರ್ಯಾರು ರಾಜ್ಯದಲ್ಲಿ" ಎಂದು ಹೇಳಿದ್ದಾನೆ. ಆತನ ಅರ್ಥದ ಪ್ರಕಾರ ನೀರಿನಲ್ಲಿ ಹುಟ್ಟದವರ್ಯಾರು ಎಂದು ಕೇಳಿದ್ದಾನೆ. ಅಷ್ಟೇ ಅಲ್ಲದೆ ಶರೀರವನ್ನು ಧರಿಸಿ ಇರುವವನು ಯಾರಾದರೂ ನೀರಿನಿಂದಲೇ ಹುಟ್ಟಿದ್ದಾನೆ, ಆದ್ದರಿಂದ ಬ್ರಹ್ಮನನ್ನು ಸಹ ಲಂಜ ಮಗ ಎಂದು ಆಧ್ಯಾತ್ಮಿಕ ರೀತಿಯಲ್ಲಿ ಹೇಳಿದ್ದಾನೆ ಹೊರತು ಪ್ರಪಂಚ ಧರ್ಮದ ಪ್ರಕಾರ ಆತನನ್ನು ಬೈಯ್ಯಲಿಲ್ಲ. ಹಾಗೆ ಹೇಳುವುದು ದೇವತೆಗಳನ್ನು ದೂಷಿಸಿದಂತೇ ಎಂದಾಗ ಅಂತಹವರನ್ನು ಸಮಯವನ್ನು ಸಂದರ್ಭವನ್ನು ಅರ್ಥಮಾಡಿಕೊಳ್ಳದ ಮೂರ್ಖರೆಂದು ಹೇಳಬೇಕು.

ತಾಯಿ ಪಕ್ಕದಲ್ಲಿ ಐದು ವರ್ಷಗಳ ಮಗನು ಮಲಗಿಕೊಂಡರೇ ತಾಯಿಗೆ ಮಗನ ಮೇಲೆ ಎಷ್ಟು ಪ್ರೀತಿಯೋ ಎಂದು ಅಂದುಕೊಳ್ಳುತ್ತೇವೆ. ಹಾಗೇ 20 ವರ್ಷಗಳ ಯುವತಿ ತನ್ನ ಪಕ್ಕದಲ್ಲಿ 20 ವರ್ಷಗಳ ವಯಸ್ಸಿರುವ ಗಂಡನನ್ನು ಮಲಗಿಸಿಕೊಂಡರೆ ಅವರದ್ದು ಗಂಡ ಹೆಂಡತಿ ಪ್ರೇಮ ಎನ್ನುತ್ತೇವೆ. ಇಲ್ಲಿ ಸಮಯ ಸಂದರ್ಭವನ್ನು ಅನುಸರಿಸಿ ತಾಯಿ ಪ್ರೀತಿ ಎಂದು, ಹೆಂಡತಿ ಪ್ರೀತಿ ಎಂದು ಎರಡೂ ಬಿಡಿಬಿಡಿಯಾಗಿ ಹೇಳಿಕೊಳ್ಳುತ್ತೇವೆ. ಆ ಪ್ರೀತಿಗಳ ಮಧ್ಯೆ ಇರುವ ವಿಧಾನಗಳು ಭಾವನೆಗಳು ಬೇರೆಬೇರೆ ಎಂದು ಎಲ್ಲರಿಗೂ ತಿಳಿದಿದೆ. ಹಾಗಲ್ಲದೆ ಎರಡನ್ನೂ ಒಂದೇ ವಿಧವಾಗಿ ಲೆಕ್ಕಹಾಕಿಕೊಂಡರೇ ಅವನನ್ನು ಪರಮ ಮೂರ್ಖನು ಎನ್ನಬೇಕು. ತಾಯಿ ಪ್ರೇಮವನ್ನು, ಗಂಡನ ಪ್ರೇಮವನ್ನು ಅರ್ಥ ಮಾಡಿಕೊಳ್ಳದ ಅಜ್ಞಾನಿ ಎಂದು ಕರೆಯಬೇಕು. ಅದೇ ವಿಧವಾಗಿ ನಾನು ಹೇಳಿರುವುದು ಆಧ್ಯಾತ್ಮಿಕವಾ, ಲೌಕಿಕವಾ ಎಂದು ಅರ್ಥ ತಿಳಿಯದೆ ಎರಡನ್ನೂ ಬೆರೆಸಿಕೊಂಡವರನ್ನು ಸಮಯ ಸಂದರ್ಭ ತಿಳಿಯದವರನ್ನಾಗಿ, ತಾಯಿ ಪ್ರೇಮವನ್ನು ಹೆಂಡತಿ ಪ್ರೇಮವನ್ನು ಬಿಡಿಬಿಡಿಯಾಗಿ ಗುರುತಿಸದ ಮೂರ್ಖರನ್ನಾಗಿ ಲೆಕ್ಕಿಸಿಕೊಳ್ಳಬೇಕು. ನಾನು ಗುರು ಸ್ಥಾನದಲ್ಲಿ ಇರುವಾಗ ಮನುಷ್ಯನಿಗೆ ದೈವಜ್ಞಾನ ಉಂಟಾಗುವುದಕ್ಕೆ ಹೇಗೆ ಬೋಧಿಸಬೇಕೋ ಹಾಗೇ ಬೋಧಿಸುತ್ತೇನೆ ಹೊರತು ಮೂರ್ಖರನ್ನು ಲೆಕ್ಕ ಮಾಡುವುದಿಲ್ಲ.

**ಪ್ರಶ್ನೆ :–** ಸುಮಾರು ಎರಡು ತಿಂಗಳ ಹಿಂದೆ ನಿಮ್ಮ ಭಕ್ತರು 108 ಪ್ರಾಂತಗಳಲ್ಲಿ ಕೃಷ್ಣಾಷ್ಟಮಿ ಮಹೋತ್ಸವಗಳನ್ನು ವಿಜೃಂಭಣೆಯಿಂದ ಮಾಡಿದ್ದಾರೆ. ಕೃಷ್ಣಾಷ್ಟಮಿ ದಿನದಿಂದ ಹನ್ನೊಂದು ದಿನಗಳು ಕೃಷ್ಣನ ಮೆರವಣಿಗೆಯನ್ನು ಪಲ್ಲಕಿ ಸಮೇತವಾಗಿ, ಸಾಂಪ್ರದಾಯಬದ್ಧವಾಗಿ ಮಾಡಿ ನೀವು ಒಳ್ಳೆಯ ಹೆಸರು ತಂದುಕೊಂಡಿದ್ದೀರ. ಮಹೋತ್ಸವಗಳನ್ನು ಮುಕ್ತಾಯ ಗೊಳಿಸುವ ಸಂದರ್ಭವಾಗಿ ಕೆಲವು ಮಂದಿ ನಿಮ್ಮ ಭಕ್ತರು ಚಿನ್ನಪೊಡಮಲ ಗ್ರಾಮದಲ್ಲಿರುವ ಕೃಷ್ಣಮಂದಿರಕ್ಕೆ ಶ್ರೀಕೃಷ್ಣನ ಪೂಜೆ ನಿಮಿತ್ತ ಬಂದಿರುವ ಸಂದರ್ಭದಲ್ಲಿ ಪಕ್ಕದಲ್ಲಿರುವ ಗ್ರಾಮಸ್ಥರಾದ ಪೆದ್ದಪೊಡಮಲ ವಾಸಿಗಳು ವಿನಾಯಕ ಮೆರವಣಿಗೆಯನ್ನು ನಿಮ್ಮ ಮಂದಿರದ ಮುಂದೆ ತೆಗೆದುಕೊಂಡು ಬಂದಾಗ ಆಕಸ್ಮಿಕವಾಗಿ ಇದ್ದಕ್ಕಿದ್ದಂತೆ ಅವರಿಗು ನಿಮ್ಮ ಭಕ್ತರಿಗೂ ಘರ್ಷಣೆ ನಡೆದಿದೆ. ಆ ಘರ್ಷಣೆಯಲ್ಲಿನ ಭಾಗವಾಗಿ ಎರಡನೆ ದಿನದಿಂದ ರಾಜಕೀಯ ವ್ಯಕ್ತಿಗಳು ಸಹ ನಿಮ್ಮನ್ನು ವಿಮರ್ಶಿಸುವುದು, ಪುನಃ ಎರಡನೆ ದಿನ ನಿಮಗೂ ಅವರಿಗೂ ಮಧ್ಯೆ ಘರ್ಷಣೆ ನಡೆಯುವುದು, ಅದರಲ್ಲಿ ಒಬ್ಬ ವ್ಯಕ್ತಿ ಕೂಡಾ ಮರಣಿಸುವುದು ನಡೆದಿದೆ. ಇದೆಲ್ಲಾ ಒಂದೇ ಬಾರಿ ರಾಷ್ಟ್ರ ವ್ಯಾಪ್ತವಾಗಿ ಪ್ರಚಾರ ಆಗುವುದು ಅನೇಕ ಟೀ.ವೀ ಛಾನಲ್‌ಗಳು ನಿಮ್ಮ ಆಶ್ರಮದ ಮೇಲೆ, ನಿಮ್ಮ ಮಂದಿರದ ಮೇಲೆ, ನಿಮ್ಮ ಮೇಲೆ ಅನೇಕ ಚರ್ಚಾ ವೇದಿಕೆಗಳನ್ನಿಟ್ಟು ಅನೇಕವಾಗಿ ನಿಮ್ಮನ್ನು ವಿಮರ್ಶಿಸುವುದು ನಡೆದಿದೆ. ಒಟ್ಟಾರೆ ಈ ಸಂಘಟನೆಯನ್ನು

**ಕುರಿತು ನೀವೇನನ್ನುತ್ತೀರಾ? ಇಲ್ಲಿಯವರೆಗು ನಿಮ್ಮ ಹೆಸರು, ನಿಮ್ಮ ಆಶ್ರಮದ ಹೆಸರು, ನಿಮ್ಮ ಕೃಷ್ಣ ಮಂದಿರದ ಹೆಸರು ತಿಳಿಯದವರಿಗೂ ಸಹ ಒಂದೇ ಬಾರಿ ತಿಳಿದುಹೋಗಿದೆ. ಬಹಳ ಜನ ಟೀ.ವೀ ಛಾನಲ್‌ರವರು ನಿಮ್ಮನ್ನು ಎ.ಪಿ ಡೇರಾ ಬಾಬಾರನ್ನಾಗಿ ವರ್ಣಿಸಿ ಹೇಳಿದ್ದಾರೆ. ಎಂ.ಪಿ ದಿವಾಕರ್ ರೆಡ್ಡಿ ನಿಮ್ಮನ್ನು ಅನೇಕವಾಗಿ ವಿಮರ್ಶಿಸಿ ನಿಮ್ಮ ಆಶ್ರಮದಲ್ಲಿ ಅಸಾಂಘಿಕ ಕಾರ್ಯಕಲಾಪಗಳು ನಡೆಯುತ್ತಿರುವಂತೆ ಸರ್ಕಾರಕ್ಕೂ ಸಹ ಹೇಳಿದ್ದಾನೆ. ನೀವು ನಾನು ಜ್ಞಾನ ಬೋಧನೆಗಳು ಮಾಡುತ್ತಿದ್ದೇನೆಂದು ಹೇಳುತ್ತಿರುವಾಗ, ಇಂತಹ ಆರೋಪಣೆಗಳು ಏಕೆ ಬಂದಿವೆ? ಇಂತಹ ಘರ್ಷಣೆಗಳು ಏಕೆ ನಡೆದಿವೆ?**

**ಉತ್ತರ :–** 2018 ಸೆಪ್ಟೆಂಬರ್ 15,16 ತಾರೀಖುಗಳಲ್ಲಿ ಎರಡು ದಿನಗಳು ನಮ್ಮ ಆಶ್ರಮದ ಹತ್ತಿರ ಘರ್ಷಣೆ ನಡೆದಿರುವುದು ವಾಸ್ತವವೇ. ವಾಸ್ತವವಾಗಿ ಕೃಷ್ಣಾಷ್ಟಮಿ ಮಹೋತ್ಸವಗಳನ್ನು ಮುಕ್ತಾಯಗೊಳಿಸುವ ಸಂದರ್ಭವಾಗಿ 14 ನೇ ತಾರೀಖು ಸುಮಾರು ಹತ್ತು ಸಾವಿರ ಮಂದಿ ನಮ್ಮ ಭಕ್ತರು ಕೃಷ್ಣ ಮಂದಿರಕ್ಕೆ ಪೂಜೆ ನಿಮಿತ್ತ ಬಂದಿದ್ದಾರೆ. ನಾನೂ ಸಹ 14ನೇ ತಾರೀಖು ರಾತ್ರಿ ಸುಮಾರು ಎಂಟು ಗಂಟೆಗಳ ಸಮಯದಲ್ಲಿ ಮಂದಿರಕ್ಕೆ ಹೋಗಿ ಅದೇ ದಿನ ರಾತ್ರಿ ವೈಜಾಗ್ ಎನ್ನುವ ಊರ ಕಡೆ ಹೊರಟು ಹೋಗಿದ್ದೇನೆ. ನಾನು ಕೆಲವು ವರ್ಷಗಳಿಂದ ನಮ್ಮ ಭಕ್ತರೊಂದಿಗೆ ಯಾರೊಂದಿಗೂ ಸಂಬಂಧ ಇಟ್ಟುಕೊಂಡಿಲ್ಲ. ಮುಖ್ಯವಾದ ಒಬ್ಬರು ಅಥವಾ ಇಬ್ಬರು ಹೊರತು ಯಾರೂ ನನ್ನ ಹತ್ತಿರಕ್ಕೆ ಬರುವುದಿಲ್ಲ. ನಾನು ಯಾರೊಂದಿಗೂ ಮಾತನಾಡುವುದಿಲ್ಲ. ಇದು ವಿವರವಾಗಿ ನಿಮಗೆ ಅರ್ಥವಾಗಬೇಕೆಂದರೇ ಸ್ವಲ್ಪ ಹಿಂದಿನಿಂದ ಹೇಳಬೇಕಾಗಿ ಬರುತ್ತದೆ.

ನಾನು ಕಳೆದ ಐದು ವರ್ಷಗಳ ಹಿಂದೆಯೇ ಆರು ಆಧ್ಯಾತ್ಮಿಕ ಸಂಸ್ಥೆಗಳನ್ನು ತಯಾರಿ ಮಾಡಿ, ಆಯಾ ಸಂಸ್ಥೆಗಳಿಗೆ ಜವಾಬ್ದಾರಿಯಾಗಿ ಇರುವ ಕಮಿಟೀಗಳನ್ನು (ಸಂಘಗಳನ್ನು) ತಯಾರು ಮಾಡಿ ಇಡುವುದು ನಡೆದಿದೆ. ಈ ಆರು ಸಂಸ್ಥೆಗಳಲ್ಲಿ ಮೊದಲನೆಯದು **"ಪ್ರಬೋಧ ಸೇವಾ ಸಮಿತಿ"** ಇದು 1991 ರಲ್ಲಿಯೇ ತಯಾರಾಗಿದೆ. ಅದರ ನಂತರ **"ಇಂದೂ ಜ್ಞಾನ ವೇದಿಕೆ"**. ಇದು 2004 ರಲ್ಲಿ ನಿರ್ಮಿಸಲ್ಪಟ್ಟಿದೆ. ನಂತರ ಈಗ ಹತ್ತು ಸಂವತ್ಸರಗಳಿಂದ ಉಳಿದ ನಾಲ್ಕು ಸಂಸ್ಥೆಗಳನ್ನು ತಯಾರು ಮಾಡುವುದು ನಡೆದಿದೆ. ಅದರಲ್ಲಿ **"ಸುವಾರ್ತೆ ಕ್ರೈಸ್ಥವ ಸಂಘ"** ಕ್ರೈಸ್ಥರದ್ದು ಆದಾಗ, ಮುಸ್ಲೀಮ್‌ರದ್ದು **"ಖುದಾ ಇಸ್ಲಾಮಿಕ್ ಸ್ಪಿರಿಚ್ಯುವಲ್ ಸೊಸೈಟೀ"** ಈ ಎರಡೂ ಎರಡು ಮತಗಳಿಗೆ ಸಂಬಂಧಿಸಿರುವವು ಆದಾಗ, ಹಿಂದೂ ಮತದಲ್ಲಿನ ಕುಲಗಳಿಗೆ ಸಂಬಂಧಿಸಿದ **"ದ್ರಾವಿಡ ಬ್ರಾಹ್ಮಣ ಸಂಘ"**, **"ದ್ರಾವಿಡ ಶ್ರೇಷ್ಠಿ ಸಂಘ"** ಎನ್ನುವ ಎರಡು ಸಂಘಗಳು ತಯಾರಾಗಿವೆ. ಒಟ್ಟಾರೆ ಆರು ಸಂಘಗಳು ನಮ್ಮಿಂದ ನಿರ್ಮಿಸಲ್ಪಟ್ಟಿವೆ. ಪ್ರಜೆಗಳಲ್ಲಿ ಶ್ರದ್ಧೆಯನ್ನು ಬೆಳಸಿ ಜ್ಞಾನವನ್ನು ತಿಳಿದುಕೊಳ್ಳುವಂತೆ ಒಳ್ಳೆಯ ಉದ್ದೇಶದಿಂದಲೇ ಆರು ಸಂಘಗಳನ್ನು ತಯಾರು ಮಾಡಿ, ಅವರಿಗೆ ಕೇವಲ ಜ್ಞಾನವನ್ನು ತಿಳಿಸುವ ಕೆಲಸವನ್ನು ಮಾತ್ರ ನಾನು ತೆಗೆದುಕೊಂಡಿದ್ದೇನೆ. ಆರು ಸಂಘಗಳನ್ನು, ಪ್ರೆಸಿಡೆಂಟ್‌ರವರು ಉಳಿದ ಕಾರ್ಯವರ್ಗ ಸದಸ್ಯರು ಸಕ್ರಮವಾಗಿ ನಡೆಸಿಕೊಳ್ಳುತ್ತಾ, ಅವರು ಜ್ಞಾನವನ್ನು ತಿಳಿದುಕೊಳ್ಳುತ್ತಾ, ಇತರರಿಗೆ ಜ್ಞಾನವನ್ನು ತಿಳಿಸುತ್ತಿದ್ದಾರೆ. ಎಲ್ಲ ಮತದವರು, ಎಲ್ಲ ಕುಲದವರು ನನ್ನ ಜ್ಞಾನದೊಂದಿಗೆ ಸಂಬಂಧಪಟ್ಟು ನನಗೆ ಭಕ್ತರಾಗಿ ಹೇಳಿಕೊಳ್ಳುತ್ತಿದ್ದಾರೆ.

ಚಿನ್ನಪೊಡಮಲದಲ್ಲಿ ಇರುವ ಆಶ್ರಮ ಮತ್ತು ಕೃಷ್ಣಮಂದಿರ ಜವಾಬ್ದಾರಿಗಳನ್ನು ಪ್ರಬೋಧ ಸೇವಾ ಸಮಿತಿ, ಇಂದೂ ಜ್ಞಾನವೇದಿಕೆ ಎರಡೂ ಸಂಯುಕ್ತವಾಗಿ ನಿರ್ವಹಿಸುವುದರಿಂದ ನಾನು ಯಾವ ಜವಾಬ್ದಾರಿ ಇಲ್ಲದೆ ಅಗತ್ಯವನ್ನನುಸರಿಸಿ ಜ್ಞಾನವನ್ನು ತಿಳಿಸುವುದೇ ಕೆಲಸವಾಗಿ ಇಟ್ಟುಕೊಂಡಿದ್ದೇನೆ. ನಾನು ಹೈದರಾಬಾದ್ ಮತ್ತು ಬೆಂಗಳೂರಿನಲ್ಲಿ ನಿವಾಸವಿರುತ್ತಾ ವರ್ಷಕ್ಕೆ ಒಂದು ಅಥವಾ ಎರಡು ಬಾರಿ ಕೃಷ್ಣ ಮಂದಿರಕ್ಕೆ ಹೋಗಿ ಬರುತ್ತೇನೆ. ಪ್ರತೀ ತಿಂಗಳು ಎಲ್ಲ ಸಂಘಗಳು ಕೃಷ್ಣ ಮಂದಿರದಲ್ಲಿ ಸಮಾವೇಶವಾಗುತ್ತಾ, ಪೌರ್ಣಮಿ

ದಿನ ನಮ್ಮ ಪ್ರವಚನಗಳನ್ನು ಸ್ವೀಕರಿಸುವುದು, ಅವರ ಅಭಿವೃದ್ಧಿ ಕಾರ್ಯ ಕ್ರಮಗಳನ್ನು ಎಲ್ಲರೂ ಸೇರಿ ನೋಡಿಕೊಳ್ಳುವುದು ನಡೆಯುತ್ತಿದೆ. ಇದರಲ್ಲಿ ನಾನು ಬರೆದ ಗ್ರಂಥಗಳ ಸಂಬಂಧವಾಗಿ ನನಗೆ ಸ್ವಲ್ಪ ಆದಾಯ ಬರುವುದು ನಡೆಯುತ್ತಿರುತ್ತದೆ. ಉಳಿದ ಖರ್ಚುಗಳು, ಆದಾಯಗಳು ಎಲ್ಲಾ ಅವರವರ ಸಂಘಗಳಿಗೆ ಹೊರತುಪಡಿಸಿ ನನಗೆ ಎಂತಹ ಸಂಬಂಧ ಇರುವುದಿಲ್ಲ. ಹೊರಗೆ ನನಗೆ ಇರುವ ವ್ಯಾಪಾರಗಳಲ್ಲಿ ಬರುವ ಆದಾಯದಲ್ಲಿ ನಾನು ಕೆಲವು ಲಕ್ಷಗಳ ಹಣವನ್ನು ಕೃಷ್ಣಮಂದಿರದ ಸೇವೆಗೆ ವಿನಿಯೋಗಿಸುತ್ತಿರುತ್ತೇನೆ. ಹಾಗೇ ನನ್ನ ಗ್ರಂಥಗಳಲ್ಲಿ ಬಂದಿರುವ ಸ್ವಲ್ಪ ಮಟ್ಟಿನ ಆದಾಯವನ್ನು ಕೂಡಾ ಕೃಷ್ಣ ಮಂದಿರ ಅಭಿವೃದ್ಧಿಗೇ ವಿನಿಯೋಗಿಸಿಕೊಳ್ಳುತ್ತೇನೆ.

ಈ ವಿಧವಾಗಿ ಇರುವ ನನಗೆ ಕೃಷ್ಣಮಂದಿರದ ಹತ್ತಿರ ನಡೆದ ಘರ್ಷಣೆಗೆ ಎಂತಹ ಸಂಬಂಧವೂ ಇಲ್ಲ. ನಾವು ನಮ್ಮ ಭಕ್ತರು ಪ್ರಶಾಂತ ಜೀವನವನ್ನು ಕೋರಿಕೊಳ್ಳುತ್ತೇವೆ ಹೊರತು, ಅಶಾಂತಿಯನ್ನುಂಟು ಮಾಡುವ ವಿಧಾನಗಳನ್ನು ಕೋರಿಕೊಳ್ಳುವುದಿಲ್ಲ. ಸೆಪ್ಟೆಂಬರ್ 15 ನೇ ತಾರೀಖು ನಡೆದ ಘರ್ಷಣೆಯನ್ನು ನಮ್ಮ ಭಕ್ತರು ಊಹಿಸಿರುವುದೆ ಆದರೇ ನಾನು ಹಾಗೆ ನಡೆಯುತ್ತದೆಂದು ಅಂದುಕೊಳ್ಳಲಿಲ್ಲ. ಮೊದಲೇ ಊಹಿಸಿದ ಪ್ರಬೋಧ ಸೇವಾಸಮಿತಿಯವರು ಆ ವಿಷಯವನ್ನು ಪೋಲೀಸ್ ರವರ ದೃಷ್ಟಿಗೆ ಒಂದು ವಾರದ ದಿನಗಳ ಮುಂಚೆಯೇ ತಿಳಿಸಿದ್ದಾರೆ. ಅದಕ್ಕೆ ಪೋಲೀಸ್‌ರವರು ಅಂತಾದ್ದು ಏನೂ ನಡೆಯದಂತೆ ನೋಡಿಕೊಳ್ಳುತ್ತೇವೆ ನೀವು ಏನೂ ಟೆನ್ಷನ್ ಬೀಳಬೇಡಿ ಎಂದು ಹೇಳಿದ್ದಾರೆ. ಇದೇ ವಿಷಯವನ್ನು ವಾರದೊಳಗೆ ಮೂರು ಬಾರಿ ಹೇಳಿದ್ದೇವೆ. ಇಂಟಲಿಜೆನ್ಸ್‌ರವರು ಕೂಡಾ ಮುಂಚಿತವಾಗಿ ಘರ್ಷಣೆ ನಡೆಯುವ ಅವಕಾಶಗಳಿವೆಯೆಂದು ತಿಳಿಸಿದ್ದಾರೆ. ಪಕ್ಕದಲ್ಲೇ ಇರುವ ಪೆದ್ದಪೊಡಮಲದವರು ಪ್ರತಿ ವರ್ಷ ಅವರ ಊರಿಂದ ಪಶ್ಚಿಮದ ಕಡೆ ಹೋಗಿ, ಅಲ್ಲಿರುವ ನೀರಿನಲ್ಲಿ ವಿನಾಯಕನ ವಿಸರ್ಜನೆ ಮಾಡುತ್ತಿದ್ದರು. ಈ ವರ್ಷ ಪೋಲೀಸ್ ಸಿ.ಐ ಸುರೇಂದ್ರನಾಥರೆಡ್ಡಿ ಎನ್ನುವಾತನು ಆ ಗ್ರಾಮಕ್ಕೆ ಹೋಗಿ ನೀವು ಎಲ್ಲರೂ ಪ್ರಬೋಧಾಶ್ರಮದ ಮುಂಭಾಗದಿಂದ ಹೋಗಬೇಕು ಎಂದು ಹೇಳಿದಾಗ, ಆ ಗ್ರಾಮಸ್ಥರು ಬಹಳ ಮಂದಿ ಆತನ ಮಾತನ್ನು ಒಪ್ಪಿಕೊಳ್ಳಲಿಲ್ಲ. ಅದು ನಮಗೆ

ದಾರಿಯಲ್ಲ ನಾವು ಪಶ್ಚಿಮದ ಕಡೆ ಇರುವ ನೀರಿನ ಕಡೆ ಹೋಗುತ್ತೇವೆ ಎಂದು ಹೇಳಿದ್ದಾರೆ. ಆದರೂ ಸಿ.ಐ ಸುರೇಂದ್ರನಾಥರೆಡ್ಡಿ ಎರಡು ವಿಗ್ರಹಗಳನ್ನು ಬಲವಂತವಾಗಿ ಆಶ್ರಮದ ಕಡೆ ತಂದಿದ್ದಾನೆ. ಕೆಲವು ಮಂದಿ ಪಶ್ಚಿಮದ ಕಡೆ ಹೋದರೆ ಎರಡು ವಿಗ್ರಹಗಳನ್ನು ಪೂರ್ವದ ಕಡೆ ತಂದಿದ್ದಾನೆ. ಆಶ್ರಮದ ಬಳಿ ಗಲಾಟೆ ಮಾಡಬೇಕೆಂದು ಅವರಿಗೆ ಕಲಿಸಿ ಅವರ ಟ್ರಾಕ್ಟರ್‌ಗಳಲ್ಲಿ ಕಲ್ಲು, ಕೋಲುಗಳನ್ನು ಸಹ ತಂದುಕೊಳ್ಳುವುದು ನಡೆದಿದೆ.

ಈ ವಿಷಯಗಳೆಲ್ಲವೂ ಆ ಊರಿನಲ್ಲಿನ ಕೆಲವರಿಂದ ತಿಳಿದು ನಮ್ಮ ಭಕ್ತರು, ಸಂಯಮವನ್ನು ಪಾಲಿಸಬೇಕು, ಅವರು ಉದ್ರೇಕಿಸಿದರೆ ನಾವು ಉದ್ರೇಕಗೊಳ್ಳಬಾರದು ಎಂದು ಮಾತನಾಡಿಕೊಂಡಿದ್ದಾರೆ. ಘರ್ಷಣೆ ನಡೆದರೇ ತಪ್ಪದೇ ಪೊಲೀಸ್ ಕೇಸುಗಳು ಇಡುತ್ತಾರೆಂದು ನಮ್ಮವರು ಸಹನೆಯಿಂದ ಘರ್ಷಣೆ ನಡೆಯಬಾರದೆನ್ನುವ ಉದ್ದೇಶದಿಂದ ಇದ್ದಾರೆ. ಗತದಲ್ಲಿ ಒಂದು ವರ್ಷದಿಂದ ಸ್ಥಾನಿಕ M.L.A, ಜೆ.ಸಿ. ಪ್ರಭಾಕರ್ ರೆಡ್ಡಿ ನಮ್ಮ ಮೇಲೆ ವೈರತ್ವ ಕಟ್ಟಿಕೊಂಡು ಆಶ್ರಮಕ್ಕೆ ನೀರಿನ ಕನೆಕ್ಷನ್ ತೆಗೆದುಹಾಕುವುದು, ಕರೆಂಟ್ ಕನೆಕ್ಷನ್ ತೆಗೆಸುವುದು, ಬಿಲ್ಡಿಂಗ್ ಪರ್ಮಿಷನ್ ಇದ್ದರೂ ಇಲ್ಲವೆಂದು ಆಶ್ರಮವನ್ನು ನೆಲಕ್ಕುರುಳಿಸ (ನಾಶಮಾಡ)ಬೇಕೆಂದು ಪಂಚಾಯಿತಿ ಅವರನ್ನು ಪ್ರೇರೇಪಿಸುವುದು ಹೀಗೆ ಅನೇಕವಾಗಿ ಮಾಡಿದ್ದಾನೆ. ನಾವು ಎಲ್ಲವನ್ನು ಸಹಿಸಿಕೊಂಡಿದ್ದೇವೆ. ಅದೇ ದೊಡ್ಡ ಪೊಡಮಲ ಗ್ರಾಮದವರಿಂದ ಆಶ್ರಮಕ್ಕೆ ಸೇರಿದ ಟ್ರಾಕ್ಟರನ್ನು ಕೂಡಾ ಬೆಂಕಿ ಇಡಿಸಿ ಸುಟ್ಟು ಹೋಗುವಂತೆ ಮಾಡಿಸಿದ್ದಾನೆ. ಹೊಡೆದಾಡುವ ಘರ್ಷಣೆಯನ್ನು ಪೊಲೀಸ್ ರವರಿಂದ ಹತ್ಯಾ ಪ್ರಯತ್ನ ಮಾಡಿದಂತೆ ನಮ್ಮ ಭಕ್ತರ ಮೇಲೆ ಕೇಸು ಸಹ ಇಡುವುದು ನಡೆದಿದೆ. ಪರ್ಮಿಷನ್ ಪ್ರಕಾರ ಮರಳನ್ನು ಆಶ್ರಮ ನಿರ್ಮಾಣಕ್ಕೆ ತಂದುಕೊಳ್ಳುತ್ತಿದ್ದರೆ ಪರ್ಮಿಷನ್ ಲೆಟರ್ ಹರಿದು ಹಾಕಿ ಅಕ್ರಮವಾಗಿ ಮರಳನ್ನು ರವಾಣೆ ಮಾಡುತ್ತಿದ್ದೇವೆಂದು ಎರಡು ಲಾರಿಗಳನ್ನು ಆರು ತಿಂಗಳ ಕಾಲ ಪೊಲೀಸ್ ಸ್ಟೇಷನ್‌ನಲ್ಲಿ ನಿಲ್ಲಿಸಿದ್ದಾನೆ. ಇಂತಹವುಗಳನ್ನು ಎಷ್ಟೋ ಮಾಡಿದ್ದಾನೆ. ಆದರೂ ಎಲ್ಲವನ್ನು ಸಹಿಸಿಕೊಂಡು ನಮ್ಮ ಅಭಿವೃದ್ಧಿಗೆ ಆತಂಕ ಏರ್ಪಡಬಾರದೆಂದು ನಮ್ಮ ಕೆಲಸ ನಾವು ಮಾಡಿಕೊಳ್ಳುತ್ತಾ ಹೋಗುತ್ತಿದ್ದೇವೆ. ನಾನು ಆಶ್ರಮಕ್ಕೆ ದೂರವಾಗಿ ಇದ್ದರೂ

ನನ್ನನ್ನು ಸಹ ಆತನ ಕೆಳಗೆ ಅನುಚರನನ್ನಾಗಿ ಮಾಡಿಕೊಳ್ಳಬೇಕೆಂದು ಎಷ್ಟೋ ಪ್ರಯತ್ನಗಳು ಮಾಡಿದ್ದಾನೆ. ನಮ್ಮಿಂದ ಹಣವನ್ನು ಕಸಿದುಕೊಳ್ಳಬೇಕೆಂದು ನೋಡಿದ್ದಾರೆ. ಕಳೆದ 40 ವರ್ಷಗಳಿಂದ ಈ ಪ್ರಾಂತದಲ್ಲಿ J.C ಬ್ರದರ್ಸ್ ರೌಡಿಸಂ ಮುಂದುವರೆಸುತ್ತಾ, ಪ್ರಜೆಗಳೆಲ್ಲರನ್ನೂ ಅವರ ವಶದಲ್ಲಿ ಇಟ್ಟುಕೊಂಡು ಅವರು ಹೇಳಿರುವುದು ಪ್ರತಿಯೊಂದೂ ನಡೆಯುವಂತೆ ಮಾಡಿಕೊಂಡು ಅವರ ಕೈ ಕೆಳಗೇ ತಾಡಿಪತ್ರಿ ವಾಸಸ್ಥರೆಲ್ಲರೂ ನಡೆಯುವಂತೆ ಮಾಡಿಕೊಂಡಿದ್ದಾರೆ. ಯಾರಾದರೂ ಅವರ ಮಾತು ಕೇಳಲಿಲ್ಲವೆಂದರೇ ಅವರ ಕ್ರಿಮಿನಲ್ ಮೈಂಡ್‌ನಿಂದ ಅನೇಕ ಸಮಸ್ಯೆಗಳನ್ನು ಸೃಷ್ಠಿಸಿ, ಪೋಲೀಸ್ ಕೇಸುಗಳನ್ನು ಹಾಕಿ, ತಮ್ಮ ದಾರಿಯೊಳಗೆ ತಂದುಕೊಳ್ಳುವುದು ಅವರಿಗೆ ಅಭ್ಯಾಸವಾಗಿ ಹೋಗಿದೆ. ಚಿಕ್ಕ ವ್ಯಾಪಾರದಿಂದ ದೊಡ್ಡ ವ್ಯಾಪಾರದ ವರೆಗು ಬರುವ ಲಾಭದಲ್ಲಿ ಅವರಿಗೆ ಸ್ವಲ್ಪ ಕೊಡುವಂತೆ ಮಾಡಿಕೊಂಡು ಸಾವಿರ ಕೋಟಿಗಳು ಸಂಪಾದಿಸಿದ್ದಾರೆ. ಅವರಿಗೆ ಎದುರಾಗಿ ಪ್ರತಿಪಕ್ಷ ಎನ್ನುವುದು ಇಲ್ಲದಂತೆ ಮಾಡಿಕೊಂಡಿದ್ದಾರೆ. ಕೊನೆಗೆ ಆಶ್ರಮಗಳ ಮೇಲೆ ಕೂಡಾ ಅವರ ದೌರ್ಜನ್ಯಗಳನ್ನು ಮುಂದುವರೆಸಿ ನಮ್ಮಿಂದ ಕೂಡಾ ಹಣ ಕಸಿಯಬೇಕೆಂದು ಚಿನ್ನಪೊಡಮಲ ಪ್ರೆಸಿಡೆಂಟ್ ಮುಖಾಂತರ ಪ್ರಯತ್ನಿಸಿದ್ದಾರೆ.

ನಮ್ಮ ಹತ್ತಿರ ಅವರ ಆಟ ನಡೆಯದೇ ಹೋಗಿರುವುದರಿಂದ ಅವರ ದೃಷ್ಠಿಯೆಲ್ಲಾ ನಮ್ಮ ಮೇಲೆ ಇಟ್ಟು ನಮ್ಮನ್ನು ಅಡಿಯಾಳುಗಳನ್ನಾಗಿ ಮಾಡಿಕೊಳ್ಳಬೇಕೆನ್ನುವ ಪ್ರಯತ್ನದೊಳಗಿನದ್ದೇ ಸೆಪ್ಟೆಂಬರ್ 15,16 ನೇ ದಿನಾಂಕಗಳಲ್ಲಿ ನಡೆದ ದಾಳಿಯೆಂದು ಹೇಳಬಹುದು. ವಿನಾಯಕ ವಿಸರ್ಜನೆ ದಿನ ನಾವು ಅವರನ್ನು ತಡೆದಾಗ ಘರ್ಷಣೆ ಆರಂಭವಾಗುವಂತೆ ಮೊದಲೇ ವ್ಯೂಹ ರಚನೆ ಮಾಡಿ, ಪೋಲೀಸ್ ಸಿ.ಐ. ಯಿಂದ ಮೆರವಣಿಗೆಯನ್ನು ಬಲವಂತವಾಗಿ ಈಕಡೆಗೇ ತಂದಿದ್ದಾರೆ. ಘರ್ಷಣೆ ನಡೆದರೇ ನಮ್ಮ ಭಕ್ತರನ್ನು ಹೊಡೆದೋಡಿಸುವುದಕ್ಕೆ ಬೇಕಾಗುವ ಕಲ್ಲು, ದೊಣ್ಣೆಗಳನ್ನು ಟ್ರಾಕ್ಟರ್‌ಗಳಲ್ಲಿ ತಂದುಕೊಳ್ಳುವುದು ನಡೆದಿದೆ. ಅಲ್ಲಿಯವರೆಗಾದರೆ ಘರ್ಷಣೆ ನಡೆಯುತ್ತಿರಲಿಲ್ಲ. ಆದರೆ ಹಾಗಾಗಬಾರದೆಂದು ಜೆ.ಸಿ ಸೋದರರು ಪಥಕದ ಪ್ರಕಾರ ಯಾರಿಗೂ ತಿಳಿಯದಂತೆ ಅನಂತಪುರದಿಂದ ತಂದಿರುವ 30 ಮಂದಿ ಬಾಡಿಗೆ ಮನುಷ್ಯರನ್ನು

ನಮ್ಮ ಭಕ್ತರ ನಡುವೆ ನಮ್ಮಲ್ಲಿ ಬೆರೆಸಿರುವ ವಿಷಯ ನಮ್ಮವರಿಗೂ ಸಹ ತಿಳಿದಿಲ್ಲ. ಮುಖದಲ್ಲಿ ಮುದ್ರೆಯನ್ನು ಧರಿಸಿದವರೆಲ್ಲರೂ ನಮ್ಮ ಭಕ್ತರೇ ಎಂದುಕೊಳ್ಳುವುದರಿಂದ ಅವರು ಸುಲಭವಾಗಿ ನಮ್ಮಲ್ಲಿ ಬೆರೆತುಹೋಗಿದ್ದಾರೆ. ಹಾಗೆ ನಮ್ಮಲ್ಲಿ ಬೆರೆತಿರುವುದು ಸುಮಾರು ಮೂರು ನಾಲ್ಕು ತಿಂಗಳಿಂದ ನಡೆಯುತ್ತಿದೆಯೆಂದು ನಮಗೆ ತಡವಾಗಿ ತಿಳಿದಿದೆ. ಯಾರಿಗೂ ಅನುಮಾನ ಬಾರದಂತೆ ನಮ್ಮವರಲ್ಲಿ ಸೇರಿಹೋದ ಅವರ ಮನುಷ್ಯರು ಸೆಪ್ಟೆಂಬರ್ 15ನೇ ದಿನಾಂಕದಂದು ಘರ್ಷಣೆ ಮೊದಲು ಅವರೇ ಶುರು ಮಾಡಿದ್ದಾರೆ. ಮೊದಲು ಘರ್ಷಣೆ ಶುರುವಾದರೇ ಎಲ್ಲರೂ ಘರ್ಷಣೆಗೆ ಬರುತ್ತಾರೆಂದು ಅವರ ಉದ್ದೇಶ. ಅದೇ ವಿಧವಾಗಿ ನಮ್ಮವರಿಗೆ ತಿಳಿಯದಂತೆ ಭಕ್ತರ ಮುಸುಗಿನಲ್ಲಿ ಇದ್ದ ಅವರು ಮೊದಲು ಘರ್ಷಣೆ ಶುರು ಮಾಡಿದ್ದಾರೆ. ಕೂಡಲೇ ನಮ್ಮವರು ಸಹ ಸ್ಪಂದಿಸಿ ಸೈರನ್ ಕೂಗಿಸಿ ಆಗಿಂದಾಗಲೇ ಕೋಲುಗಳನ್ನು ಹಿಡಿದು ಬಂದು ವಿನಾಯಕ ಮೆರವಣಿಗೆಯನ್ನು ಚೆದರಿಸಿ ಓಡಿ ಹೋಗುವಂತೆ ಮಾಡಿದ್ದಾರೆ. ಆಗ ಯಾರಿಗೂ ಯಾವ ಪ್ರಮಾದ ನಡೆಯಲಿಲ್ಲ. ಆ ಘರ್ಷಣೆಯಲ್ಲಿ ಭಕ್ತರ ಮುಸುಗಿನಲ್ಲಿರುವ ಅವರ ಮನುಷ್ಯರೇ ವಿನಾಯಕ ವಿಗ್ರಹಗಳನ್ನು ಹೊಡೆದು ಹಾಕಿ, ಟ್ರಾಕ್ಟರ್‌ಗಳನ್ನು ಸುಟ್ಟುಹಾಕುವುದು ನಡೆದಿದೆ. ಅದೆಲ್ಲಾ ಮಾಡುವವರು ನಮ್ಮವರೇ ಎಂದು ನಮ್ಮ ಭಕ್ತರು ಕೂಡಾ ಆ ಕೆಲಸಗಳಲ್ಲಿ ಸೇರಿರಬಹುದು. ಈ ವಿಧವಾಗಿ ನಡೆದಿರುವುದನ್ನನುಸರಿಸಿ ಆಶ್ರಮದವರೇ ದಾಳಿ ಮಾಡಿದ್ದಾರೆಂದು ಪೆದ್ದ ಪೊಡಮಲ ಗ್ರಾಮದವರು ಅಂದುಕೊಂಡಿದ್ದಾರೆ.

ಅಷ್ಟಕ್ಕೆ ದೊಡ್ಡದಾಗಿ ಕೇಸುಗಳು ಹಾಕುವುದಕ್ಕೆ ಅವಕಾಶವಿಲ್ಲವೆಂದು ತಿಳಿದ **J.C** ಸಹೋದರರು, ಭಕ್ತರಹಾಗೆ ಇರುವ ಅವರ ಮನುಷ್ಯರಿಗೆ ಫೋನ್‌ಗಳ ಮೂಲಕ ಎರಡನೆ ದಿನ ಘರ್ಷಣೆ ನಡೆಯುವಂತೆ, ಆಗ ಆಶ್ರಮದ ಮೇಲೆ ಘರ್ಷಣೆಗೆ ಬಂದಿರುವವರಲ್ಲಿ ಒಬ್ಬರನ್ನು ಸಾಯಿಸುವಂತೆ ಆದೇಶವನ್ನು ಕೊಟ್ಟಿದ್ದಾರೆ. ಅದರಲ್ಲಿ ಭಾಗವಾಗಿ ಎರಡನೆ ದಿನ **M.P** ದಿವಾಕರ್‌ರೆಡ್ಡಿ **144** ಸೆಕ್ಷನ್ ಜಾರಿಯಲ್ಲಿದ್ದರೂ ಬಂದು ಆಶ್ರಮಕ್ಕೆ ಸಾವಿರ ಅಡಿಗಳ ದೂರದಲ್ಲಿರುವ ಮುಖ್ಯ ರಸ್ತೆ ಮೇಲೆ ಮುಷ್ಕರ ಮಾಡುವುದಕ್ಕೆ ಕುಳಿತುಕೊಳ್ಳುವುದು ಪ್ರಬೋಧಾನಂದ ಸ್ವಾಮಿಯನ್ನು ಅರೆಸ್ಟು ಮಾಡುವವರೆಗು ಹೋಗುವುದಿಲ್ಲವೆಂದು

ಹೇಳಿ ಕುಳಿತುಕೊಳ್ಳುವುದು ನಡೆದಿದೆ. ಬೆಳಗ್ಗೆ ಎಂಟು ಗಂಟೆಗಳಿಗೇ ಆ ಕಾರ್ಯಕ್ರಮ ಶುರು ಮಾಡಿದಾಗ, ಆಶ್ರಮದ ಮುಂದೆ ಪೋಲೀಸ್‌ರವರು ಸುಮಾರು ಎರಡು ನೂರು ಮಂದಿ ಇದ್ದಾರೆ. ಒಂದು ಕಡೆ ದಿವಾಕರ್‌ರೆಡ್ಡಿ ಮುಷ್ಕರ ಮಾಡುತ್ತಾ ಮತ್ತೊಂದು ಕಡೆ ತನ್ನ ಅನುಚರರನ್ನು ಆಶ್ರಮದ ಮೇಲೆ ದಾಳಿ ಮಾಡುವುದಕ್ಕೆ ಹುರಿದುಂಬಿಸಿದ್ದಾನೆ. ಆಶ್ರಮದ ಹಿಂಭಾಗದಲ್ಲಿ ಹತ್ತು ಮಂದಿ ಪೋಲೀಸ್‌ರು ಇರುವಂತೆ ಮಾಡಿ, ಅವರನ್ನು ಕೂಡಾ ಮೇಲ್ನೋಟಕ್ಕೆ ಮಾತ್ರ ಇರುವಂತೆ ಮಾಡಿ, ಅವರ ಮನುಷ್ಯರಿಗೆ ಮಂದಿರದ ಮೇಲೆ ದಾಳಿ ಮಾಡುವುದಕ್ಕೆ ಸುಲಭ ಮಾಡಿದ್ದಾನೆ. ಬೆಳಗ್ಗೆ 10 ಗಂಟೆಗಳಿಂದ ದಾಳಿ ನಡೆಯುತ್ತಿದ್ದರೂ, ಕಲ್ಲುಗಳು ಆಶ್ರಮದೊಳಗೆ ಕೃಷ್ಣ ಮಂದಿರದ ಮೇಲೆ ಬೀಳುತ್ತಿದ್ದರೂ ನಮ್ಮವರು ಎಷ್ಟೋ ಸಹನೆಯಿಂದ ಒಳಗೇ ಇದ್ದಾರೆ. ಮಧ್ಯಾಹ್ನ ಎರಡು ಗಂಟೆಗಳವರೆಗು ಹಾಗೇ ಮುಂದುವರೆದಿದೆ. ದಾಳಿ ಮಾಡುವವರ ಮೇಲೆ ಪೋಲೀಸ್‌ರವರು ಲಾಠೀಚಾರ್ಜ್ ಮಾಡುವುದಾಗಲೀ, ಟಿಯರ್ ಗ್ಯಾಸ್ ಪ್ರಯೋಗಿಸುವುದಾಗಲೀ ಮಾಡಲಿಲ್ಲ. ಕೊನೆಗೆ ಎರಡುವರೆ ಗಂಟೆಗಳ ಸಮಯದಲ್ಲಿ ಒಂದು ವ್ಯಾನ್‌ನಲ್ಲಿ ತಂದುಕೊಂಡ ಪೆಟ್ರೋಲ್ ಪಾಕೆಟ್‌ಗಳನ್ನು, ಬಿಯರ್‌ಬಾಟಿಲ್‌ಗಳನ್ನು ಎಸೆಯುತ್ತಾ ಬಂದು ಆಶ್ರಮದ ಹತ್ತಿರ ನಿಲ್ಲಿಸಿರುವ ಹತ್ತು ವಾಹನಗಳ ಮೇಲೆ, ಐದು ವ್ಯಾನ್‌ಗಳು ಐದು ಕಾರುಗಳ ಮೇಲೆ ದಾಳಿ ಮಾಡಿ, ಅವುಗಳಿಗೆ ಪೆಟ್ರೋಲ್ ಸುರಿದು ಬೆಂಕಿ ಹಚ್ಚುವ ಸಮಯದಲ್ಲಿ ನಮ್ಮ ಆಸ್ತಿಗಳನ್ನು ಕಾಪಾಡಿಕೊಳ್ಳುವ ನಿಮಿತ್ತ, ನಮ್ಮ ಭಕ್ತರು ಹೊರಗೆ ಹೋಗಿ ಅವರನ್ನು ಒದ್ದೋಡಿಸಬೇಕೆಂದು ನೋಡಿದ್ದಾರೆ. ಅದೇ ಸರಿಯಾದ ಸಮಯವೆಂದು ಕಾದುಕೊಂಡು ಭಕ್ತರ ಮುಸುಗಿನಲ್ಲಿ ಮುಖದ ಮೇಲೆ ಮುದ್ರೆಯನ್ನು ಧರಿಸಿದ ಅನಂತಪುರದ ಮನುಷ್ಯರು ಅಲ್ಲಿಗೆ ಬಂದಿರುವವರಲ್ಲಿ ಒಬ್ಬರನ್ನು ಸಾಯಿಸುವುದು ನಡೆದಿದೆ. ಹಾಗೇ ಉಳಿದ ಇಬ್ಬರನ್ನು ಸಹ ತೀವ್ರವಾಗಿ ಹೊಡೆದಿದ್ದಾರೆ. ಒಟ್ಟಾರೆ ಮೂವರು ಕೆಳಗೆ ಬಿದ್ದಾಗ ಹಾಗೆ J.C ಮನುಷ್ಯರನ್ನು ಸಾಯಿಸಿ ನಮ್ಮ ಮೇಲೆ ಬಲವಾದ ಮರ್ಡರ್ ಕೇಸು ಇಡಬೇಕೆಂದು ಅವರ ಪಥಕ, ಹಾಗೇ ನಡೆಯಿತು. J.C ಮನುಷ್ಯರನ್ನು J.C ಬಾಡಿಗೆ ಮನುಷ್ಯರು ಸಾಯಿಸಿರುತ್ತಾರೆಂದು ಪೆದ್ದಪೊಡಮಲದ ಗ್ರಾಮಸ್ಥರು ಕೂಡಾ ಅಂದು

ಕೊಂಡಿರಲಿಲ್ಲ. ಈ ಪ್ಲಾನ್ ಯಾರಿಗೂ ತಿಳಿದಿಲ್ಲ. J.C ಮಾತುಗಳನ್ನು ಕೇಳಿ ಆಶ್ರಮದ ಮೇಲೆ ದಾಳಿಗೆ ಬಂದವರಲ್ಲಿ ಮೂವರು ಬಿದ್ದು ಹೋದಾಗ, ಉಳಿದವರೆಲ್ಲರೂ ಓಡಿ ಹೋಗಿದ್ದಾರೆ.

ನಮ್ಮ ಭಕ್ತರಿಗೆ ಯಾರನ್ನೂ ಸಾಯಿಸುವ ಉದ್ದೇಶವಿಲ್ಲ. ಆದರೂ ನಡೆದ ಸಂಘಟನೆ ತಮ್ಮಿಂದಲೇ ನಡೆದಿರುತ್ತದೆಂದು ಅಂದುಕೊಂಡಿದ್ದಾರೆ. ಹಠಾತ್ ಆಗಿ ನಮ್ಮ ಭಕ್ತರು ಊಹಿಸದ ರೀತಿಯಲ್ಲಿ ಸಾವಿರಾರು ಮಂದಿ ಹೊರಗೆ ಬಂದಿರುವುದನ್ನು ನೋಡಿ J.C ದಿವಾಕರ್ ರೆಡ್ಡಿ ಅಲ್ಲಿಂದ ಓಡಿ ಹೋಗಿದ್ದಾನೆ. ಇದೆಲ್ಲಾ ನಾಲ್ಕು ನಿಮಿಷಗಳಲ್ಲಿ ನಡೆದಿದೆ. ಅಲ್ಲಿಯವರೆಗು ಪ್ರೇಕ್ಷಕ ಪಾತ್ರದಾರಿಗಳಾಗಿದ್ದ ಪೊಲೀಸರು ಹಠಾತ್ ಆಗಿ ನಮ್ಮವರ ಮೇಲೆ ಲಾಠೀಗಳಿಂದ ಹೊಡೆಯುವುದು, ಟಿಯರ್ ಗ್ಯಾಸ್ ಪ್ರಯೋಗಿಸುವುದು ಮಾಡಿದ್ದಾರೆ. ಅಂದಿನಿಂದ ಪೊಲೀಸರು ನಮ್ಮ ರಕ್ಷಣೆ ನಿಮಿತ್ತವೆಂದು ಆಶ್ರಮದ ಸುತ್ತ ಸೇರಿ, ನಮ್ಮನ್ನು ನಿರ್ಭಂಧಿಸಿ ಎರಡು ಮೂರು ದಿನಗಳಿಗೆ 40 ಮಂದಿಯನ್ನು ದಾಳಿಯಲ್ಲಿ ಇದ್ದಾರೆಂದು ಅರೆಸ್ಟು ಮಾಡುತ್ತಾ, ಸುಮಾರು ತಿಂಗಳವರೆಗು ಅರೆಸ್ಟುಗಳು ಮುಂದುವರೆಸಿದ್ದಾರೆ. ನಮ್ಮವರು ನಮ್ಮ ಆಶ್ರಮದ ಹತ್ತಿರವೇ ಇದ್ದರೂ ಅವರೇ ಬಂದು ಎರಡು ದಿನಗಳು ಘರ್ಷಣೆ ಮಾಡಿ, ಕೊನೆಗೆ ನಾವು ತಪ್ಪು ಮಾಡಿದಂತೆ ನಮ್ಮವರ ಮೇಲೆ 27 ಕೇಸುಗಳನ್ನು ಹಾಕಿದ್ದಾರೆ. ಎದುರಾಳಿಗಳ ಮೇಲೆ ನಮ್ಮವರು ರಿಪೋರ್ಟು ಮಾಡಿದರೂ ಸಹ ಒಂದು ಕೇಸು ಕೂಡಾ ಹಾಕಲಿಲ್ಲ. ಇದರಿಂದ ಪೊಲೀಸ್‌ರವರು ಅವರ ಕಡೆಗೆ ಪೂರ್ತಿಯಾಗಿ ಕೆಲಸ ಮಾಡುತ್ತಿದ್ದಾರೆಂದು ತಿಳಿದು ಹೋಗಿದೆ. J.C ಬ್ರದರ್ಸ್‌ರಲ್ಲಿ ಒಬ್ಬರು M.L.A ಆಗಿ, ಒಬ್ಬರು M.P. ಆಗಿ ಇದ್ದು ಪೂರ್ತಿ ಅಧಿಕಾರ ದುರ್ವಿನಿಯೋಗ ಮಾಡಿದ್ದಾರೆಂದು ಅರ್ಥವಾಗುತ್ತಿದೆ. ರಾಷ್ಟ್ರವೆಲ್ಲಾ ಕೆಟ್ಟದಾಗಿ J.C ಬ್ರದರ್ಸ್‌ರನ್ನು ಹೇಳಿಕೊಳ್ಳುತ್ತಿದ್ದರೂ ಅವರನ್ನು ತೆಲುಗು ದೇಶ ಪ್ರಭುತ್ವ ಏಕೆ ನಿಯಂತ್ರಣ ಮಾಡಲಿಲ್ಲವೋ ತಿಳಿದಿಲ್ಲ. ಇವರಿಂದ ತೆಲುಗು ದೇಶ ಪಾರ್ಟೀಗೆ ಪ್ರಜೆಗಳಲ್ಲಿ ಕೆಟ್ಟ ಹೆಸರು ಬರುತ್ತದೆಂದು ಪಾರ್ಟೀ ಅಧಿಕಾರಿಗಳು ಗುರುತಿಸಲಾರದೆ ಹೋಗಿದ್ದಾರೆ.

2018 ಸೆಪ್ಟೆಂಬರ್ 15ನೇ ತಾರೀಖು ನಾನು ವಿಜಯನಗರ ಜಿಲ್ಲೆ ಆದ ಅರಕು ಪ್ರಾಂತದಲ್ಲಿ ಇರುವುದರಿಂದ, ನನಗೆ ಫೋನ್ ಇಲ್ಲದ ಕಾರಣ, ಆಶ್ರಮದ ಹತ್ತಿರ ನಡೆದ ವಿಷಯ ಸ್ವಲ್ಪ ತಡವಾಗಿ ತಿಳಿದಿದೆ. ಅಸಲು ಕುತಂತ್ರಗಳೆಲ್ಲವೂ ಅನಂತಪುರದ ಅವರನ್ನು ತಂದು ನಮ್ಮ ಭಕ್ತರಲ್ಲಿ ಸೇರಿಸಿದ ವಿಷಯ ಸುಮಾರು ಒಂದು ತಿಂಗಳಿಗೆ ಇತರರ ಮೂಲಕ ನಮಗೆ ತಿಳಿದಿದೆ. ಅಲ್ಲಿಯವರೆಗು ನಮ್ಮ ಆಶ್ರಮದವರಿಗೂ ಸಹ ಈ ಕುತಂತ್ರದ ವಿಷಯ ತಿಳಿದಿಲ್ಲ. ಅದೇ ಕೆಲಸವಾಗಿ ಕುತಂತ್ರಗಳು ಮಾಡಿದ J.C ಸೋದರರು ಲಕ್ಷಾಂತರ ರೂಪಾಯಿಗಳು ಟಿ.ವಿ ಛಾನಲ್‌ಗಳಿಗೆ ಕೊಟ್ಟು ನಮ್ಮ ಮೇಲೆ ಅಪ ಪ್ರಚಾರ ಮಾಡಿಸಿದ್ದಾರೆ. ಘರ್ಷಣೆ ನಡೆದ ಒಂದು ವಾರಕ್ಕೆ ನಾನು ಕೂಡಾ ಟಿ.ವಿ ಅವರಿಗೆ ಪ್ರೆಸ್ ಮೀಟ್‌ನಲ್ಲಿ ಇದೆಲ್ಲವೂ J.C ಬ್ರದರ್ಸ್ ಅದೇ ಕೆಲಸವಾಗಿ ಮಾಡುತ್ತಿದ್ದಾರೆಂದು ಹೇಳಿದ್ದೇವೆ. ಇಲ್ಲಿಯವರೆಗು ನಾವು ಯಾವ ವಿಷಯದಲ್ಲೂ ಅವರಿಗೆ ಪೈಪೋಟಿಯಾಗಿ ಹೋಗಲಿಲ್ಲ. ಆದರೂ ಅವರು ಪ್ರತಿಯೊಂದು ಕಡೆ ನಮಗೆ ಅಡ್ಡ ಬರುತ್ತಿದ್ದಾರೆ. ಇವರ ದುರಹಂಕಾರವನ್ನು ಎದುರಿಸುವುದಕ್ಕೆ ನಾವು ಕೂಡಾ ರಾಜಕೀಯದೊಳಗೆ ಬರುತ್ತೇವೆಂದು ಹೇಳಿದ್ದೇವೆ.

J.C ದಿವಾಕರ್‌ರೆಡ್ಡಿ ನಮ್ಮ ಆಶ್ರಮದಲ್ಲಿ ಅಸಾಂಘಿಕ ಕಾರ್ಯ ಕಲಾಪಗಳು ವಿಷಯ ನಡೆಯುತ್ತಿವೆಯೆಂದು ಟಿ.ವಿ ಚಾನಲ್‌ಗಳಲ್ಲಿ ಪ್ರಚಾರ ಮಾಡಿಸಿದ್ದಾನೆ. ಅದರ ಕಾರಣವಾಗಿ ಜಿಲ್ಲಾ ಕಲೆಕ್ಟರ್, ಜಿಲ್ಲಾ ಎಸ್.ಪಿ ರವರು ಅನೇಕವಾಗಿ ಆಶ್ರಮದಲ್ಲಿ ಶೋಧನೆ ನಡೆಸಿ, ಅಂತಹವು ಯಾವುವು ಇಲ್ಲವೆಂದು ತೀರ್ಮಾನಿಸಿ ಹೇಳಿದ್ದಾರೆ. ಅಷ್ಟೇ ಅಲ್ಲದೆ ಈ ವಿಷಯದಲ್ಲಿ J.C ಬ್ರದರ್ಸ್ ತಪ್ಪು ಆರೋಪಣೆಗಳು ಮಾಡಿದ್ದಾರೆಂದು ಮೀಡಿಯಾದವರು ಕೂಡಾ ಗಮನಿಸಿ ಅಂತಾದ್ದು ಏನೂ ಇಲ್ಲವೆಂದು ಅವರು ವಾರ್ತಾಪತ್ರಿಕೆಗಳಲ್ಲಿ ಪ್ರಕಟಿಸಿದ್ದಾರೆ. ಅದರಿಂದ J.C ಅವರಿಗೇ ಪ್ರಜೆಗಳಲ್ಲಿ ಮರ್ಯಾದೆ ಹೋಗಿದೆ. ನಮ್ಮ ಮರ್ಯಾದೆ ತೆಗೆಯಬೇಕೆಂದುಕೊಂಡಿದ್ದಾರೆ ಕೊನೆಗೆ ಅವರ ಮರ್ಯಾದೆಯೇ ಹೋಗಿದೆ. ಕೆಲವರು ಟಿ.ವಿ ಚಾನಲ್‌ಗಳು ಕೇವಲ ಹಣ ಸಂಪಾದನೆ ನಿಮಿತ್ತವೇ ಇಟ್ಟುಕೊಂಡಿದ್ದಾರೆ. ಅಂತಹವರು J.C ಬ್ರದರ್ಸ್ ಕೊಡುವ ಹಣಕ್ಕೆ ಒಳಗಾಗಿ

ನಮ್ಮ ಮೇಲೆ ದುಷ್ ಪ್ರಚಾರ ಮಾಡಿದ್ದಾರೆ ಹೊರತು, ನಮ್ಮ ಆಶ್ರಮದಲ್ಲಿ ನಮ್ಮ ಭಕ್ತರಲ್ಲಿ ಯಾವ ತಪ್ಪು ಇಲ್ಲ, ಯಾವ ತಪ್ಪು ನಡೆಯುತ್ತಿಲ್ಲ.

**ಪ್ರಶ್ನೆ :– ಎಷ್ಟೋ ಮಂದಿ ವ್ಯಾಪಾರಿಗಳಿಂದ, ಎಷ್ಟೋ ಫ್ಯಾಕ್ಟರೀಗಳಿಂದ ಹಣವನ್ನು ವಸೂಲು ಮಾಡುತ್ತಿದ್ದಾರೆನ್ನುವ ಮಾತು ನಾವೂ ಸಹ ಕೇಳಿದ್ದೇವೆ. ಸ್ಟೀಲ್ ಫ್ಯಾಕ್ಟರೀ, ಸಿಮೆಂಟ್ ಫ್ಯಾಕ್ಟರೀ ಮೂಲಕ ತಿಂಗಳಿಗೇ ಕೋಟ್ಯಾಂತರ ರೂಪಾಯಿಗಳು ಬರುತ್ತಿವೆಯೆಂದು ಪ್ರಜೆಗಳು ಅಂದುಕೊಳ್ಳುವುದನ್ನು ಕೇಳಿದ್ದೇವೆ. ಆದರೇ ಜ್ಞಾನ ಪ್ರಚಾರ ಮಾಡುವ ನಿಮ್ಮಂತಹವರ ಮೇಲೆ ಏಕೆ ಅಷ್ಟು ದ್ವೇಷ ಬೆಳೆಸಿಕೊಂಡಿದ್ದಾರೆ ಎನ್ನುವುದು ಸ್ವಲ್ಪ ಅರ್ಥವಾಗುತ್ತಿಲ್ಲ. ನೀವು ಇಲ್ಲಿ ಇಲ್ಲ ಎಲ್ಲೋ ಹೈದರಾಬಾದ್, ವೈಜಾಗ್, ಬೆಂಗಳೂರುಗಳಲ್ಲಿ ಇರುತ್ತೇವೆಂದು ಹೇಳುತ್ತಿದ್ದೀರ. ನೀವು ಸನ್ಯಾಸಿ ಅಲ್ಲ ಗೃಹಸ್ಥನಾಗಿ ಇದ್ದು ನೀವು ಹೆಂಡತಿ ಮಕ್ಕಳನ್ನು ಹೊಂದಿದ್ದೀರ. ಆದರೇ J.C ದಿವಾಕರ್ ರೆಡ್ಡಿ ನಿಮ್ಮ ಭಕ್ತರನ್ನು ಅಲ್ಲದೆ ಪದೇ ಪದೇ ನಿಮ್ಮನ್ನೇ ಏಕೆ ಹೇಳುತ್ತಿದ್ದಾರೆ. ಇದರ ಹಿಂದೆ ಇರುವ ಮುಖ್ಯ ಕಾರಣ ಏನಿದೆ?**

**ಉತ್ತರ :–** ಒಂದು ಮಾತಿನಲ್ಲಿ ಹೇಳಬೇಕೆಂದರೇ ಧನಕಾಂಕ್ಷೆ, ಅಧಿಕಾರಕಾಂಕ್ಷೆ ಈ ಎರಡೇ ಅವರಲ್ಲಿ ಪೂರ್ತಿ ಬೇರೂರಿ ಹೋಗಿವೆ. ಆದ್ದರಿಂದ ನಮ್ಮನ್ನು ಸಹ ಬಿಡುತ್ತಿಲ್ಲ. ನಾವು ಅವರು ಕೇಳಿದ ಹಣ ಕೊಡಲಿಲ್ಲ, ಅವರ ಅಧಿಕಾರಕ್ಕೆ ಅವರ ಮುಂದೆ ಕೈಗಳು ಕಟ್ಟಿಕೊಂಡು ನಿಲ್ಲಲಿಲ್ಲ. ಆಶ್ರಮಕ್ಕೆ ನಮ್ಮ ಭಕ್ತರೇ ಕಮಿಟೀ ಏರ್ಪಡಿಸಿಕೊಂಡು ಹೊಣೆಗಾರಿಕೆಯಿಂದ ಇದ್ದರೂ, ನನಗೆ ಕೃಷ್ಣ ಮಂದಿರದೊಂದಿಗೆ ಪ್ರಬೋಧಾಶ್ರಮದೊಂದಿಗೆ ಸಂಬಂಧ ಇಲ್ಲದಿದ್ದರೂ ನನ್ನನ್ನು ಮುಖ್ಯವಾಗಿ ವಿಮರ್ಶಿಸುವುದಕ್ಕೆ ಬುನಾದಿ 1993 ರಲ್ಲಿ ಇದೆ. ಇಲ್ಲಿಗೆ 25 ವರ್ಷಗಳ ಕೆಳಗೆ ಆತನಿಗೆ ವಿರುದ್ಧವಾಗಿ B.J.P ಪಾರ್ಟೀ ಅವರಿಗೆ ಒಂದು ದಿನ ಅನ್ನ ಇಟ್ಟಿದ್ದೇವೆಂದು, ಅಂದಿನಿಂದ ನನ್ನ ಮೇಲೆ ದ್ವೇಷ ಬೆಳಸಿಕೊಂಡಿದ್ದಾನೆ. ಆ ದಿನ ಕೂಡಾ ನಮ್ಮ ಆಶ್ರಮದ ಧರ್ಮದ ಪ್ರಕಾರ ಹಸಿದುಗೊಂಡವರಿಗೆ ಅನ್ನ ಇಟ್ಟಿದ್ದೇವೆ. ಅವರು ಅನ್ನ ಬೇಕು ಎಂದು ನಮ್ಮ ಆಶ್ರಮಕ್ಕೆ ಬಂದಿದ್ದರೆ ಅನ್ನ ಇಟ್ಟಿದ್ದೇವೆ. ಆತನಿಗೆ ಸರಿಹೋಗದವರಿಗೆ ಅನ್ನ ಇಟ್ಟಿದ್ದೇನೆಂದು ನನ್ನ ಮೇಲೆ ದ್ವೇಷ ಇಟ್ಟುಕೊಳ್ಳುವುದು ಒಳ್ಳೆಯದೋ, ಕೆಟ್ಟದೋ ನೀವೇ ಆಲೋಚಿಸಿರಿ.

ನೀನು ಯಾವ ಹೋಟಲ್‌ನಲ್ಲಿ ಕೂಡಾ ಅವರಿಗೆ ಊಟ ಇಡಬಾರದೆಂದು ಹೇಳಿದ್ದರೇ, ಹೋಟಲ್‌ನವರು ಎಲ್ಲರೂ ಹೆದರಿ ಅನ್ನ ಇಡದ ಸಂದರ್ಭದಲ್ಲಿ ಅವರು ರಾತ್ರಿ 9 ಗಂಟೆಗಳಿಗೆ ಬಂದು ಅನ್ನ ಕೇಳಿದರೇ ಅನ್ನ ಇಡುವುದು ತಪ್ಪು ಎಂದು ಹೇಳುವುದು ಅವರಿಗೇ ತಕ್ಕದ್ದು. ದುಷ್ಟರಿಗೆ ದೂರವಾಗಿ ಇರಬೇಕೆಂದು ಸುಮಾರು ಹತ್ತು ವರ್ಷಗಳು ನಾವು ಕರ್ನಾಟಕ ಪ್ರಾಂತದಲ್ಲಿ ಇದ್ದು 2003 ರಲ್ಲಿ ತಾಡಿಪತ್ರಿ ಸಮೀಪದ ಚಿನ್ನಪೊಡಮಲ ಎಂಬ ಗ್ರಾಮದಲ್ಲಿ ಆಶ್ರಮವನ್ನು, ಕೃಷ್ಣಮಂದಿರವನ್ನು ಸ್ಥಾಪಿಸಿ, ಯಾರೊಂದಿಗೂ ಸಂಬಂಧವಿಲ್ಲದೆ ನಾನು ಪ್ರಜೆಗಳಿಗೆ ಜ್ಞಾನವನ್ನು ಹಂಚುತ್ತಿದ್ದೇನೆ. ಆಶ್ರಮವನ್ನು ಜ್ಞಾನ ಪ್ರಚಾರಕ್ಕಾಗಿ ಇಟ್ಟಿದ್ದೇನೆ ಹೊರತು, ಅದರ ಮುಖಾಂತರ ಹಣ ಸಂಪಾದಿಸುವುದಕ್ಕೆ ಅಲ್ಲ. ನನಗೆ ಹಣ ಸಂಪಾದಿಸಲು ಎಷ್ಟೋ ವ್ಯಾಪಾರಗಳಿವೆ. ನಾನು ಸಂಪಾದಿಸಿರುವುದು ಕೂಡಾ ಆಶ್ರಮಕ್ಕೂ, ಕೃಷ್ಣ ಮಂದಿರಕ್ಕೂ ಇಟ್ಟಿದ್ದೇನೆ. ಮೊದಲಿನಿಂದ ಯಾರ ಬಳಿಯೂ ನಾವು ಚಂದಾಗಳು ಕೇಳಲಿಲ್ಲವೆಂದು ಎಲ್ಲರಿಗೂ ತಿಳಿದಿದೆ. ಆದರೂ ಚಿನ್ನಪೊಡಮಲ ಗ್ರಾಮ ಸರ್ಪಂಚ್ ಮೂಲಕ ಹಣವನ್ನು ಕೇಳಿದರೇ ನಾನು ಕೊಡುವುದಿಲ್ಲ ಎಂದಿದ್ದೇನೆ ಎಂದು ಸ್ವಲ್ಪ ಕಾಲದಿಂದ ನಮ್ಮನ್ನು ಅನೇಕ ವಿಧಗಳಲ್ಲಿ ತೊಂದರೆಗಳಿಗೀಡು ಮಾಡಿದ್ದಾನೆ. ಈ ಮಧ್ಯೆ ಕಾಲದಲ್ಲಿ ಈ ಪ್ರಾಂತ್ಯದ ಕಮ್ಮ ಸಂಘದವರು, ಅವರ ಸಂಘ ನಿರ್ಮಾಣಕ್ಕೆ ಹಣ ಕೇಳಿದರೇ ನಾನು ಹತ್ತು ಜನರಿಗೆ ಉಪಯೋಗಪಡುತ್ತದೆಂದು ಕೋಟಿ ರೂಪಾಯಿಗಳನ್ನು ವಿರಾಳವಾಗಿ ಕೊಡುವುದು ನಡೆದಿದೆ.

ಹಾಗೆ ಕೊಟ್ಟಿರುವುದನ್ನು ತಿಳಿದು ನಾವು ಕೇಳಿದರೇ ಕೊಡದೆ ನಿಮ್ಮ ಸಂಘಕ್ಕೆ ಕೊಡುತ್ತೀಯಾ ಎನ್ನುವ ದ್ವೇಷದಿಂದ ಪಕ್ಕದ ಗ್ರಾಮಸ್ಥರನ್ನು ಕೈಗೊಂಬೆಗಳನ್ನಾಗಿ ಮಾಡಿಕೊಂಡು ಅವರಿಂದ ಘರ್ಷಣೆ ಮಾಡಿಸಿ ನಮ್ಮ ಮೇಲೆ ಕೇಸುಗಳು ಹಾಕಿದ್ದಾರೆ. ದಿವಾಕರ್ ರೆಡ್ಡಿಯೇ ನಮ್ಮ ಮೇಲೆಗೆ ರೊಚ್ಚಿಗೆಬ್ಬಿಸಿ ಆತನೇ ಆ ಊರಿನವರನ್ನು ಅನಂತಪುರದವರಿಂದ ಸಾಯಿಸಿದ್ದಾನೆಂದು ನಮಗೆ ನಿಧಾನವಾಗಿ ತಿಳಿದರೂ ಪೆದ್ದಪೊಡಮಲದವರಿಗೆ ಇಲ್ಲಿಯವರೆಗು ತಿಳಿದಿಲ್ಲ. ಅವರ ಹಣಕ್ಕಾಗಿ, ಅಧಿಕಾರಕ್ಕಾಗಿ ಮನುಷ್ಯರನ್ನು ಬಲಿಪಶುಗಳನ್ನಾಗಿ ಮಾಡುತ್ತಾ, ತಾನು ಎಲ್ಲಾ ಸುಖಗಳು ಅನುಭವಿಸುತ್ತಿದ್ದಾನೆಂದು ಕುರುಡು ಪ್ರಜೆಗಳಿಗೆ ತಿಳಿದಿಲ್ಲ.

ತಮಗೇನೋ ಒಳ್ಳೆಯದು ಮಾಡುತ್ತಾನೆಂದು ನಂಬಿ, ಆತನ ಮಾತುಗಳನ್ನು ಕೇಳಿ ಬಹಳ ಜನ ನಷ್ಟ ಹೋಗುತ್ತಿದ್ದಾರೆ. ನಮ್ಮ ಮೆದುಳಿನಲ್ಲಿ ದೇವರು, ಪಾಪ, ಪುಣ್ಯ ಎನ್ನುವವು ಇದ್ದರೇ ಅವರ ಮೆದುಳಿನಲ್ಲಿ ದುರ್ಮಾರ್ಗ ಹೊರತು ಬೇರೆ ಏನೂ ಇಲ್ಲವೆಂದು ಆಲೋಚಿಸುವ ಪ್ರಜೆಗಳಿಗೆ ತಿಳಿಯುತ್ತಿದೆ. ಸ್ಥಾನಿಕ ಪ್ರಜೆಗಳಿಗೆ ನಾವು ಎಂತಹ ಕೆಡಕನ್ನು ಮಾಡದಿದ್ದರೂ ಪೆದ್ದಪೊಡಮಲದಲ್ಲಿ ಕೆಲವರು ಮಾತ್ರ ಆತನ ಮಾತನ್ನು ಕೇಳಿ ನಷ್ಟ ಹೋಗುತ್ತಿದ್ದಾರೆ. ಚಿನ್ನಪೊಡಮಲ ರೈತರೆಲ್ಲರೂ ನಮಗೆ ಸಾನುಕೂಲವಾಗಿ ಇದ್ದರೂ, ಪೆದ್ದ ಪೊಡಮಲದವರು ಎಲ್ಲರೂ ಅಲ್ಲದೆ ಕೆಲವರು ಮಾತ್ರ ಅವರ ಮಾತು ಕೇಳಿ ನಮಗೆ ವಿರುದ್ಧವಾಗಿ ಬದಲಾಗಿದ್ದಾರೆ.

J.C ಬ್ರದರ್ಸ್ ಅವರ ಬುದ್ಧಿ ಎಂತಹದೋ ಒಂದು ಮಾತಿನಲ್ಲಿ ಅರ್ಥವಾಗಬಲ್ಲದು. ನನಗೆ ಎರಡು ವಿವಾಹಗಳು ಆಗಿವೆ, ಇಬ್ಬರು ಹೆಂಡತಿಯರಿದ್ದಾರೆ, ನಾಲ್ವರು ಯುಕ್ತವಯಸ್ಸಿನ ಗಂಡು ಮಕ್ಕಳಿದ್ದಾರೆ. ಒಬ್ಬ ಹೆಂಡತಿ ಅನಾರೋಗ್ಯದಿಂದ ತವರು ಮನೆಯಲ್ಲಿ ಇದ್ದರೂ, ಎರಡನೆ ಹೆಂಡತಿ ಯಾವಾಗಲೂ ನನ್ನ ಹತ್ತಿರವೇ ಇದ್ದು ನನಗೆ ಸೇವೆಗಳು ಮಾಡುತ್ತಿದ್ದಾಳೆ. ನನ್ನ ವಯಸ್ಸು 70 ವರ್ಷಗಳು ಇತರರ ಸಹಾಯವಿಲ್ಲದೆ ಧೈರ್ಯವಾಗಿ ನಡೆಯಲಾರೆನು. ನನ್ನ ಗುಂಡಿಗೆಗೆ ಸ್ಟಂಟ್ಸ್ ಕೂಡಾ ಹಾಕಿದ್ದಾರೆ. 20 ವರ್ಷಗಳಿಂದ ಷುಗರ್, ಬಿ.ಪಿ ಇದೆ. ಕಿವಿಗಳು ಕೇಳಿಸುವುದಿಲ್ಲ. ಸ್ವತಃವಾಗಿ ಬಾತ್‌ರೂಮ್‌ಗು ಸಹ ಹೋಗಲಾರದ ನನ್ನನ್ನು ಕುರಿತು ಮಾತನಾಡುತ್ತಾ, ಅವನ ಹತ್ತಿರ ಮಲಗಿಕೊಳ್ಳುವವರೆಲ್ಲರೂ ಗೋಪಿಕೆಯರಂತೆ ಎಂದು ಹೇಳುವುದು ಆತನ ಸಂಸ್ಕಾರ ಎಂತಹದ್ದೋ ನೋಡಿರಿ. ನನಗಿರುವ ವಯಸ್ಸು ನಿನಗು ಕೂಡಾ ಇದೆ. ಇದು ನೀನು ಮಾತನಾಡಬೇಕಾದ ಮಾತೇನಾ ಎಂದು ಕೇಳುತ್ತಿದ್ದೇನೆ. ಇಂತಹ ಮಾತುಗಳು ಮಾತನಾಡುವವರು ಪ್ರಜೆಗಳಿಗೆ ರಾಜಕೀಯ ನಾಯಕರಾ? ಅವರಿಗೆ ಮತ ಹಾಕಿ ಗೆಲ್ಲಿಸಬಹುದಾ? ನೀವು ಕೇಳಿರುವುದಕ್ಕೆ ಉತ್ತರವಾಗಿ ಎಲ್ಲಾ ಪ್ರಪಂಚ ವಿಷಯವನ್ನೇ ಹೇಳಿದ್ದೇನೆ. ಹಾಗಲ್ಲದೆ ಪ್ರಜೆಗಳಿಗೆ ಉಪಯೋಗ ಪಡುವ ಪ್ರಶ್ನೆಗಳನ್ನು ಕೇಳಿರಿ.

**ಪ್ರಶ್ನೆ :– ಈ ಘರ್ಷಣೆ ನಡೆದ ಕೆಲವು ದಿನಗಳಿಗೇ ಐದಾರು ಮಂದಿ ಮುಸ್ಲೀಮ್‌ರು ಉಳಿದ ಕುಲದವರು ಪ್ರಬೋಧಾನಂದ ಸ್ವಾಮಿ ಅಜ್ಞಾನವನ್ನು ಬೋಧಿಸುತ್ತಿದ್ದಾನೆಂದು ಸುದ್ದಿಗಾರರ ಮುಂದೆ ಆರೋಪಣೆ ಮಾಡಿದ್ದಾರೆ. ಮುಖ್ಯವಾಗಿ ಮುಸ್ಲೀಮ್‌ರು ಮಾತನಾಡುತ್ತಾ ಪ್ರಬೋಧಾನಂದ ಸ್ವಾಮಿ ನಮ್ಮ ಖುರ್‌ಆನ್ ನನ್ನು ಅವಮಾನಪಡಿಸಿದ್ದಾನೆ, ರಾಮಾಯಣವನ್ನು ಅವಮಾನ ಪಡಿಸಿದ್ದಾನೆ ಎನ್ನುವುದನ್ನು ವೀಡಿಯೋದಲ್ಲಿ ನೋಡಿದ್ದೇವೆ. ಹಾಗೇ ಕುಲ ಸಂಘಗಳು ಕೂಡ ಕೆಲವು ಕುಲಗಳನ್ನು ಹೀಯಾಳಿಸಿದ್ದಾರೆಂದು ಹೇಳಿದ್ದಾರೆ, ಇದರಲ್ಲಿ ನಿಜವೆಷ್ಟು? ಎಂದು ಕೇಳುತ್ತಿದ್ದೇವೆ.**

**ಉತ್ತರ :–** ಎಲ್ಲಾ ಕುಲಗಳು ಸಮಾನವೇಯೆಂದು ಕೆಲವು ವರ್ಷಗಳಿಂದ ಬೋಧಿಸುತ್ತಿದ್ದೇನೆ. ಚಿಕ್ಕ ದೊಡ್ಡ ಕುಲಗಳ ವ್ಯತ್ಯಾಸಗಳು ಮನುಷ್ಯರ ಮಧ್ಯದಲ್ಲಿ ಇರಬಾರದೆಂದು ಹೇಳುವುದೇ ಅಲ್ಲದೆ, ಇಂದಿಗೂ ನೂರಕ್ಕೂ ಮೇಲ್ಪಟ್ಟು ಕುಲಾಂತರ ವಿವಾಹಗಳನ್ನು ನಮ್ಮ ಮಂದಿರದಲ್ಲಿಯೇ ಮಾಡುವುದು ನಡೆದಿದೆ. ಪ್ರತಿ ಕುಲದವರು ನನಗೆ ಭಕ್ತರಾಗಿ ಇದ್ದಾರೆ. ಹಾಗಿರುವಾಗ ದಿವಾಕರ್ ರೆಡ್ಡಿಯಿಂದ ಹಣವನ್ನು ಪಡೆದುಕೊಂಡು ಬೀದಿಯಲ್ಲಿ ಕಿರಚುವವರಿಗೇ ಕುಲಗಳ ಭಿನ್ನತೆ (ಉದ್ದೇಶ) ಕಾಣಿಸಿದೆಯಾ? ಕಡಿಮೆ ಕುಲದವರು ಮಾನಸಿಕವಾಗಿ ಕುಲಭೇದ ದಿಂದ ಬಾಧೆಪಡಬಾರದೆಂದು ನನ್ನ ಹತ್ತಿರಕ್ಕೆ ಸೇರಿಸಿಕೊಂಡು, ನನ್ನ ಹತ್ತಿರವೇ ಕೆಲಸಗಳನ್ನು ಕಲ್ಪಿಸಿ ಎಲ್ಲರೊಂದಿಗೆ ಸಮಾನವಾಗಿ ಬದುಕುವಂತೆ ಮಾಡಿದ್ದೇವೆ. ಇದು ಪ್ರತ್ಯಕ್ಷವಾಗಿ ಇರುವ ವಿಷಯವೇ ಅಲ್ಲವೇ! ಬಾಯಿ ಇದೆಯೆಂದು ಯಾವ ಆಧಾರ ಇಲ್ಲದೆ ಮಾತನಾಡಿದರೇ ದೇವರು ಸಹಿಸುವುದಿಲ್ಲ, ಪ್ರಜೆಗಳು ಸಹಿಸುವುದಿಲ್ಲ. ಇದೆಲ್ಲಾ ಜೆ.ಸಿ ದಿವಾಕರ್‌ರೆಡ್ಡಿ ಆಡಿಸುವ ನಾಟಕಗಳೆಂದು ಬಹಳ ಮಂದಿ ಪ್ರಜೆಗಳಿಗೆ ತಿಳಿದಿದೆ.

ಇನ್ನು ನಾನು ಆರು ಆಧ್ಯಾತ್ಮಿಕ ಸಂಸ್ಥೆಗಳನ್ನು ತಯಾರು ಮಾಡಿದ್ದೇನೆ. ಆರು ಸಂಸ್ಥೆಗಳಿಗೆ ನಾನು ತಂದೆಯಂತಹವನೆಂದು ಅವರು ಹೇಳಿಕೊಳ್ಳುವುದು ನಾನು ಸಹ ಕೇಳಿದ್ದೇನೆ. ಸುವಾರ್ತೆ ಕ್ರೈಸ್ಥವ ಸಂಘ ಕ್ರೈಸ್ಥವರದ್ದು ಆದಾಗ, ಖುದಾ ಇಸ್ಲಾಮಿಕ್ ಸ್ಪಿರಿಚ್ಯುವಲ್ ಸೊಸೈಟೀ ಮುಸ್ಲೀಮ್‌ರದ್ದು ಆಗಿದೆ. ನನ್ನ ಹತ್ತಿರ ಎಷ್ಟೋ ಮುಸ್ಲೀಮ್‌ರು ಖುರ್‌ಆನ್ ಜ್ಞಾನವನ್ನು ತಿಳಿದು ಕೊಂಡಿದ್ದಾರೆ. ಎಲ್ಲ ಗ್ರಂಥಗಳು ಸಮಾನವೇಯೆಂದು ಹೇಳಿ ಖುರ್‌ಆನ್ ಗ್ರಂಥವನ್ನು 30 ಸಾವಿರ ಮಂದಿ ಹಿಂದೂಗಳಿಂದ ಓದಿಸಿ, ಅದರಲ್ಲಿನ ಜ್ಞಾನವನ್ನು ತಿಳಿದುಕೊಳ್ಳು ವಂತೆ ಮಾಡಿದ್ದೇನೆ. ಹಾಗೆ ಪ್ರಪಂಚದಲ್ಲಿ ಯಾವ ಗುರುವಾದರೂ ಮಾಡಿದ್ದಾರೇನೋ ಹೇಳೆನ್ನಿರಿ. ಮುಸ್ಲೀಮ್‌ರು ಮಾತನಾಡುತ್ತಾ ಪ್ರಬೋಧಾನಂದ ಸ್ವಾಮಿ ರಾಮಾಯಣವನ್ನು ಹೀಯಾಳಿಸಿದ್ದಾನೆ ಎನ್ನುವುದೇನು? ಇದು ಅವರು ಸ್ವತಃವಾಗಿ ಮಾತನಾಡಿದ ಮಾತು ಅಲ್ಲವೆಂದು, ಇತರರು ಮಾತನಾಡೆಂದರೆ ಮಾತನಾಡಿದ್ದಾರೆಂದು ತಿಳಿಯುತ್ತಿದೆ. ನನ್ನನ್ನು ಪ್ರಜೆಗಳಲ್ಲಿ ಕೆಟ್ಟವನಾಗಿ ಮಾಡುವುದಕ್ಕೆ ಮಾಡುವ ಅನೇಕ ಪ್ರಯತ್ನಗಳಲ್ಲಿ ಕುಲ, ಮತ ಸಂಘಗಳಿಂದ ಹೇಳಿಸುವುದು ಒಂದು ಭಾಗವೆಂದು ನಮಗೆ ಮತ್ತು ಎಲ್ಲರಿಗೂ ತಿಳಿಯುತ್ತಿದೆ. ನಾನು ಇಂತಹ ತಪ್ಪು ಆರೋಪಣೆಗಳು ಮಾಡುವ ಕುಲ ಮತ ಸಂಘಗಳಿಗೆ ಹೇಳುವುದೇನೆಂದರೇ! ಯಾರೋ ಹೇಳಿಕೊಟ್ಟಂತೆ ನೀವೇಕೆ ಹೇಳಬೇಕು. ನಾನು ಬರೆದ ಗ್ರಂಥಗಳು ಮೂರು ಮತಗಳಿಗು ಸಂಬಂಧಿಸಿರುವವು ನೂರಕ್ಕೂ ಮೇಲ್ಪಟ್ಟು ಇವೆ. ಅವುಗಳನ್ನು ಓದಿ ನಾನು ಎಂತಹವನೋ ತಿಳಿದು ಮಾತನಾಡಿರಿ. ಹಾಗೆ ತಿಳಿಯದೆ ಸಾಮಾನ್ಯ ಮನುಷ್ಯರ ಹಾಗೆ ಮಾತನಾಡಿದಂತೆ ದೈವಜ್ಞಾನವನ್ನು ತಿಳಿದ ವ್ಯಕ್ತಿಯೊಂದಿಗೆ ಮಾತನಾಡಿದರೇ ಅದು ದೈವಜ್ಞಾನವನ್ನು ಹೀಯಾಳಿ ಸಿದಂತಾಗುತ್ತದೆ. ಆದ್ದರಿಂದ ದೇವರು ನಿಮ್ಮನ್ನು ಕ್ಷಮಿಸುವುದಿಲ್ಲವೆಂದು ಹೇಳುತ್ತಿದ್ದೇವೆ.

**ಪ್ರಶ್ನೆ :– ನೀವು ದೈವಜ್ಞಾನವನ್ನೇ ಬೋಧಿಸುತ್ತಾ ಇದ್ದರೇ ಬಿ.ಜೆ.ಪಿ ಪಾರ್ಟೀ ಅವರು, R.S.S ನವರು ಉಳಿದವರು ನಿಮ್ಮ ತ್ರೈತ ಸಿದ್ಧಾಂತವನ್ನು ವಿರೋಧಿಸುತ್ತಿದ್ದಾರಲ್ಲವೆ! ಈ**

**ನಡುವೆ ಹತ್ತು ದಿನಗಳ ಕೆಳಗೆ B.J.P ಸ್ಟೇಟ್ ಪ್ರೆಸಿಡೆಂಟ್ ಕೂಡಾ ನಾವು ತ್ರೈತ ಸಿದ್ಧಾಂತವನ್ನು ಅನುಸರಿಸುವುದನ್ನು ವಿರೋಧಿಸುತ್ತಿದ್ದೇವೆ ಎಂದು ಹೇಳಿದ್ದಾನೆ. ಅಷ್ಟೇ ಅಲ್ಲದೆ ನಿಮ್ಮ ದೊಡ್ಡ ಮಗನನ್ನು B.J.P ಪಾರ್ಟೀಯಲ್ಲಿ ಭಾರೀ ಖರ್ಚು ಮಾಡಿ ಸೇರಿಸಿದರೂ, ಅವರು ಆತನನ್ನು ಪಾರ್ಟೀಯಲ್ಲಿ ಸೇರಿಸಿಕೊಳ್ಳದೆ ಪಕ್ಕದಲ್ಲಿಟ್ಟಿದ್ದಾರೆಂದು ಕೇಳಿದ್ದೇವೆ. ನಿಮಗೇಕೆ B.J.P ಯವರು ಬೆಂಬಲ ಕೊಡಲಿಲ್ಲ.**

**ಉತ್ತರ :–** ಇಂದಿನ ದಿನಗಳಲ್ಲಿ ಪ್ರತಿ ರಾಜಕೀಯ ಪಾರ್ಟೀ ರಾಜಕೀಯವಾಗಿ ಪ್ರವರ್ತಿಸುತ್ತಿಲ್ಲ. ನೀಚಕೀಯವಾಗಿ ಪ್ರವರ್ತಿಸುವುದು ಅಭ್ಯಾಸವಾಗಿ ಹೋಗಿದೆ. ಇಂತಹ ಸಮಯದಲ್ಲಿ ದೇಶದಲ್ಲಿ ರಾಜಕೀಯವೇ ಇಲ್ಲದಂತೆ ಹೋಗಿ ನೀಚಕೀಯವೇ ಕಾಣಿಸುತ್ತಿದೆ. 1993 ರಲ್ಲಿ B.J.P ಯವರಿಗೆ ಮೂರು ನೂರು ಮಂದಿಗೆ ಉಚಿತವಾಗಿ ಅನ್ನ ಇಟ್ಟಿದ್ದೇವೆ. ಅವರ ಮೂಲವಾಗಿ ಇಂದಿಗೂ ಜೆ.ಸಿ ದಿವಾಕರ್ ರೆಡ್ಡಿ ಅವರೊಂದಿಗೆ ಶತ್ರುತ್ವ ಏರ್ಪಟ್ಟಿದೆ. ಅದನ್ನು ಇಂದಿಗೂ ಅನುಭವಿಸುತ್ತಿದ್ದೇವೆ. ಹಾಗಿರುವಾಗ ಅನ್ನ ಇಟ್ಟವನನ್ನು ಮರೆತು ಹೋಗಿ ಈ ದಿನ ಮಾತುಗಳು ಮಾತನಾಡುವ ಅವರ ಹಿಂದೆ ಬಿ.ಜೆ.ಪಿ ಯವರು ಹೋಗಿ ತ್ರೈತ ಸಿದ್ಧಾಂತವನ್ನು ಕುರಿತು ಮಾತನಾಡುವುದು ಒಳ್ಳೆಯದೋ ಕೆಟ್ಟದೋ ನೀವೇ ಆಲೋಚಿಸಿರಿ. ಅನ್ನಕ್ಕಾಗಿ ಬಂದು ನಮಗೆ ಶತ್ರುತ್ವವನ್ನು ಕಲ್ಪಿಸಿದ ದಿನ ನಾವು ತ್ರೈತ ಸಿದ್ಧಾಂತದವರೆಂದು ತಿಳಿಯಲಿಲ್ಲವಾ? ಅರ್ಧರಾತ್ರಿ ಸಮಯದಲ್ಲಿ J.C ದಿವಾಕರ್ ರೆಡ್ಡಿ ಅವರು ನನಗೆ ಫೋನ್ ಮಾಡಿ B.J.P ಅವರನ್ನು ಕೂಡಲೇ ಹೊರಗೆ ಕಳುಹಿಸು ಎಂದಾಗ, ಈ ಸಮಯದಲ್ಲಿ ನಾನು ಹೊರಗೆ ಕಳುಸುವುದಿಲ್ಲ ಎಂದಾಗ, ನನ್ನ ಧೈರ್ಯಕ್ಕೆ ಮೆಚ್ಚಿಕೊಂಡವರಿಗೆ ಆ ದಿನ ನಾನು ತ್ರೈತ ಸಿದ್ಧಾಂತ ಕರ್ತನೆಂದು ತಿಳಿದಿಲ್ಲವಾ? ಅಗತ್ಯಕ್ಕೆ ಆದಿನಾರಾಯಣ, ಅಗತ್ಯ ತೀರಿದ ನಂತರ ಗೂದೆ ನಾರಾಯಣ ಎಂದಂತೆ B.J.P ಯವರು ಪ್ರವರ್ತಿಸುವುದು ಒಳ್ಳೆಯದೇನಾ ನೀವೇ ಹೇಳಿರಿ.

1993 ನೇ ವರ್ಷ ಇಂದಿನ ಉಪರಾಷ್ಟ್ರಪತಿಯಾಗಿರುವ ವೆಂಕಯ್ಯ ನಾಯುಡು ಆ ದಿನ B.J.P ಸ್ಟೇಟ್ ಪ್ರೆಸಿಡೆಂಟ್ ಆಗಿ ಇದ್ದಾರೆ. ಆ ದಿನ ಮಧ್ಯಂತರ ಚುನಾವಣೆ ನಿಮಿತ್ತ ಸ್ವತಃ ವೆಂಕಯ್ಯನಾಯುಡುರವರು, ಅವರ ಕಾರ್ಯಕರ್ತರನ್ನು B.J.P ನಾಯಕರನ್ನು ಕಳುಹಿಸಿದಾಗ ನಾವು ರಾಜಕೀಯ ದೊಂದಿಗೆ ಸಂಬಂಧ ಇಲ್ಲದಿದ್ದರೂ ಅವರನ್ನು ಆದರಿಸಿ, ರಕ್ಷಣೆ ಕೊಟ್ಟು ಅನ್ನ ಇಟ್ಟಿದ್ದೇವೆ. ಅದು ಮರೆತು ಹೋಗಿ ಈ ದಿನ ಹೊಸದಾಗಿ ಬಂದಿರುವ ಕಾರ್ಯಕರ್ತರ ಮಾತು ಕೇಳಿ ನಾವು ಉಪಯೋಗಪಡದಂತೆ, ಈ ದಿನ ಒಂದು ರೂಪಾಯಿ ಸಹ ಖರ್ಚು ಇಡದವರೇ ನಿಜವಾದ ಕಾರ್ಯಕರ್ತರಾದಂತೆ ಪ್ರವರ್ತಿಸುತ್ತಿದ್ದಾರೆ. ಇಂತಹ ರಾಜಕೀಯದಿಂದಲೇ ಬಿ.ಜೆ.ಪಿ ಪಾರ್ಟೀ ಆಂಧ್ರ ರಾಷ್ಟ್ರದಲ್ಲಿ ಹೆಸರಿಗೆ ಮಾತ್ರ ಇದೆ. ನಾವು ಹಿಂದೂ ಮತಕ್ಕೆ ವಿರೋಧಿಗಳಾದಂತೆ ಕೆಲವು ಕಾರ್ಯಕರ್ತರು ಹೇಳಿದರೇ, ತ್ರೈತ ಸಿದ್ಧಾಂತ ಅಂದರೆ ಏನೋ ವಿವರಿಸಿ ನೋಡದಂತೆ, "ನಾವು ತ್ರೈತ ಸಿದ್ಧಾಂತವನ್ನು ಅನುಸರಿಸುವುದಿಲ್ಲವೆಂದು, ಅವರ ಬೆಂಬಲ ನಮಗೆ ಇರುವುದಿಲ್ಲವೆಂದು" ಹೇಳುವುದರಿಂದ ನಾವೇ ಅದರಿಂದ ಹೊರಗೆ ಬಂದಿದ್ದೇವೆ. ತ್ರೈತ ಸಿದ್ಧಾಂತ ಹಿಂದೂ ಮತದಲ್ಲಿ ಅದ್ವೈತ, ದ್ವೈತ, ವಿಶಿಷ್ಟಾದ್ವೈತಗಳಂತೆ ಒಂದು ಸಿದ್ಧಾಂತ. ಅದನ್ನು ಅರ್ಥ ಮಾಡಿಕೊಳ್ಳದೇ ಮಾತನಾಡುವವರೊಂದಿಗೆ ನಮಗೂ ಸಹ ಕೆಲಸವಿಲ್ಲ.

B.J.P ಪಾರ್ಟೀಯವರು ಒಬ್ಬ ಗುರುವಾಗಿ ಇರುವ ನಮ್ಮನ್ನು ದೂರ ಇಟ್ಟು ಮಾತನಾಡುವುದಕ್ಕೆ ಕಾರಣ ಆ ಪಾರ್ಟೀಯಲ್ಲಿ ಬ್ರಾಹ್ಮಣರ ಪ್ರಾಬಲ್ಯ ಹೆಚ್ಚಾಗಿ ಇರುವುದೇ ಎಂದು ತಿಳಿಯುತ್ತಿದೆ. ಉತ್ತರ ದೇಶದಲ್ಲಿ ಬ್ರಾಹ್ಮಣರ ಪ್ರಾಬಲ್ಯ ಹೆಚ್ಚಾಗಿ ಇರುವುದರಿಂದ ಅಲ್ಲಿ ಪಾರ್ಟೀ ಬೆಳೆಯಿತು. ಬ್ರಾಹ್ಮಣನು ಒಬ್ಬನಿದ್ದರೂ ಅವರ ಬುದ್ಧಿವಂತಿಕೆಯಿಂದ ಉಳಿದ ಕುಲದವರನ್ನು ತಮಗೆ ಅನುಕೂಲವಾಗಿ ಬದಲಾಯಿಸಿಕೊಳ್ಳುವುದರಿಂದ ಅಲ್ಲಿ ಪಾರ್ಟೀ ಮೇಲಕ್ಕೆ ಬರುವುದು, ಅಧಿಕಾರದೊಳಗೆ ಬರುವುದು ನಡೆದಿದೆ. ಆದರೇ ಇಲ್ಲಿ ಕೂಡಾ ಬ್ರಾಹ್ಮಣೇತರರರನ್ನು ಕಡೆಗಾಣಿಸುವುದು, ತಮಗೆ ಗುಲಾಮರಾಗಿ ಇರುವವರನ್ನು ಪಾರ್ಟೀಯೊಳಗೆ ಸೇರಿಸಿಕೊಳ್ಳುವುದು ನಡೆಯುತ್ತಿದೆ. B.J.P ಪಾರ್ಟೀ ಹಿಂದೂಮತವನ್ನು ಮಾತ್ರ ಅನುಸರಿಸುತ್ತಾ ಉಳಿದ ಮತಗಳನ್ನು ದ್ವೇಷದಿಂದ

ನೋಡುವುದರಿಂದ ಅದಕ್ಕೆ ಮತೀಯ ಪಾರ್ಟಿಯೆಂದು ಮುದ್ರೆ ಬಿದ್ದಿದೆ. ತ್ರೈತ ಸಿದ್ಧಾಂತ ಆಧ್ಯಾತ್ಮಿಕ ಸಿದ್ಧಾಂತ. ಆಧ್ಯಾತ್ಮಿಕ ರೀತಿಯಲ್ಲಿ ನಾವು ಎಲ್ಲ ಮತಗಳನ್ನು ಸಮಾನವಾಗಿ ನೋಡುವುದು ನಡೆಯುತ್ತಿದೆ. ಅದರ ಆಧಾರವಾಗಿ ನಮ್ಮನ್ನು ಪರಮತದವರ ಕೆಳಕ್ಕೆ ಸೇರಿಸಿ ಕೆಲವರು B.J.P ಯವರು ಮಾತನಾಡುವುದು, ಹಿಂದೂ ಮತವನ್ನು ಬಲಹೀನಪಡಿಸಿ ಚೂರು ಚೂರು ಮಾಡಿದಂತೆ ಆಗುತ್ತಿದೆ. ಅವರಿಗೆ ಸರಿಹೋಗದವರು ಹಿಂದೂಮತದವರಾದರೂ ಪರಮತದ ಮುದ್ರೆ ಹಾಕಿ, ಅವರದು ಹಿಂದೂ ಮತ ಅಲ್ಲವೆಂದು ಹೇಳುವುದರಿಂದ ಹಿಂದೂ ಮತ ಕ್ಷೀಣಿಸುತ್ತಾ ಬರುತ್ತಿದೆ.

ಭಾರತೀಯನಾದ ಗೌತಮ ಬುದ್ಧನು ತನಗೆ ತಿಳಿದ ಆಧ್ಯಾತ್ಮಿಕವನ್ನು ಹೇಳಿದರೇ, ಆ ದಿನ ಅಶೋಕಚಕ್ರವರ್ತಿ ಅಂತಹವನು ಸಹ ಆಕರ್ಷಿತನಾಗಿ ಹೋದಾಗ ಸಹಿಸಲಾರದ ಹಿಂದೂ ಸ್ವಾಮೀಜೀಗಳು, ನಾಯಕರು ಬುದ್ಧನದ್ದು ಹಿಂದೂ ಮತ ಅಲ್ಲವೆಂದು, ಆತನದ್ದು ಬೌದ್ಧಮತವೆಂದು ಪ್ರತ್ಯೇಕ ಹೆಸರು ಇಟ್ಟು ಸೀಳಿಸಿ ಹಾಕುವುದರಿಂದ ಒಂದೇ ಸಲ ಹಿಂದೂ ಮತ ಸುಮಾರು 40% ರಷ್ಟು ಕ್ಷೀಣಿಸಿ ಹೋಗಿದೆ. ಶೇ. 40% ಹಿಂದೂಗಳು ಬೌದ್ಧರಾಗಿ ಬೇರೆಯಾಗುವಂತೆ ಮಾಡಿರುವುದು ಹಿಂದೂಗಳು ಅಲ್ಲವೇ! ನಾವು ಹಿಂದೂ ಮತವನ್ನು ಕಾಪಾಡುತ್ತೇವೆಂದು ಹೇಳುತ್ತಿರುವವರು, ಹಿಂದೂ ಮತ ರಕ್ಷಕರೆಂದು ಹೆಸರು ಹೇಳಿಕೊಳ್ಳುತ್ತಿದ್ದರೂ ಹಿಂದೂ ಮತ ಭಕ್ಷಕರಾಗಿ ತಯಾರಾಗಿದ್ದಾರೆ. ಇವರಿಂದಲೇ ಹಿಂದೂ ಮತ ಕ್ಷೀಣಿಸಿ ಹೋಗುತ್ತಿದೆಯೆನ್ನುವುದಕ್ಕೆ ಬುದ್ಧನನ್ನು ಪರಮತಸ್ಥನೆಂದು ಹೇಳಿ ಸೀಳಿಸಿ ಹಾಕಿರುವುದೇ ತಾರ್ಕಾಣ ಎಂದು ಹೇಳಬಹುದು. ಈ ದಿನ ತ್ರೈತ ಸಿದ್ಧಾಂತ ಹಿಂದೂ ಧರ್ಮದಲ್ಲಿನ ಭಾಗವಾದರೂ, ತ್ರೈತ ಸಿದ್ಧಾಂತ ವೇಗವಾಗಿ ಹರಡಿಹೋಗುವುದನ್ನು ನೋಡಿ ಸಂತೋಷಪಡದೆ ಅಸೂಯೆಪಟ್ಟು, ತ್ರೈತ ಸಿದ್ಧಾಂತದವರದ್ದು ಹಿಂದೂಮತ ಅಲ್ಲವೆಂದು, ಅವರದು ಇಂದೂ ಮತ ಎಂದು ಪ್ರತ್ಯೇಕವಾದ ಹೆಸರು ಇಟ್ಟು ಹೇಳುತ್ತಿದ್ದಾರೆ. ಈಗ ನಮ್ಮನ್ನು ಸಹ ಹಿಂದೂ ಮತದಿಂದ ಹೊರಗೆ ಕಳುಹಿಸಿದರೇ ಒಂದೇ ಸಲಕ್ಕೆ ಕೆಲವು ಲಕ್ಷಮಂದಿ ಹಿಂದೂಗಳನ್ನು ಹಿಂದೂ ಮತ ಕಳೆದುಕೊಂಡಂತಾಗುತ್ತದೆ.

ಇದರಿಂದ ಇವರು ಹಿಂದೂ ಮತವನ್ನು ರಕ್ಷಿಸಿದಂತಾ, ಭಕ್ಷಿಸಿದಂತಾ ನೀವೇ ಲೆಕ್ಕಿಸಿಕೊಳ್ಳಿ.

ನಾವು ಈ ದಿನ ಭಗವದ್ಗೀತೆಯನ್ನು ಪ್ರಚಾರ ಮಾಡುತ್ತಿದ್ದರೂ ನಮ್ಮನ್ನು ಪ್ರತ್ಯೇಕ ಮತವೆನ್ನುವವರು B.J.P ಪಾರ್ಟೀಯಲ್ಲಿ ಇರುವುದರಿಂದ ಈ ಪಾರ್ಟೀಯಿಂದ ಹಿಂದೂ ಮತ ಕ್ಷೀಣತೆ ಹೊರತು ಅಭಿವೃದ್ಧಿ ಇರುವುದಿಲ್ಲವೆಂದು ಹೇಳುತ್ತಿದ್ದೇವೆ. ಈ ದಿನ ಬೌದ್ಧ ಮತ ಹಿಂದೂಮತದೊಂದಿಗೆ ಸಮಾನವಾಗಿ ಇದೆ. ಅದು ಈ ದಿನ ಹಿಂದೂ ಮತದಲ್ಲಿ ಸೇರಿದ್ದರೇ ಹಿಂದೂ ಮತ ಎಷ್ಟು ದೊಡ್ಡದಾಗಿ ಕಾಣಿಸುತ್ತಿತ್ತು? ವಿದೇಶಗಳಲ್ಲಿ ಸಹ ಹಿಂದೂ ಮತ ಇದೆಯೆಂದು ಹೇಳುವುದಕ್ಕೆ ಅವಕಾಶವಿರುತ್ತಿತ್ತು. ಬೌದ್ಧರು ಕಾಷಾಯವನ್ನು ಧರಿಸಿ ಎಷ್ಟೋ ಧರ್ಮಯುಕ್ತವಾಗಿ ಅವರ ಬೋಧನೆಗಳನ್ನು ಹೇಳುತ್ತಿದ್ದಾರೆ. ಅವರನ್ನು ಬೇರೆ ಮತವೆಂದು ಹೇಳುವುದಕ್ಕೆ ಅವಕಾಶವೇ ಇಲ್ಲ. ಆದರೂ ಬುದ್ಧನನ್ನು ಪರಮತವೆಂದು ಹೇಳಿದ ಘನತೆ ಹಿಂದೂಗಳಿಗೇ ದಕ್ಕಿದೆ. ಇದರ ಮೂಲವಾಗಿ ಹಿಂದೂ ಮತವನ್ನು ರಕ್ಷಿಸಿದಂತಾ, ನಾಶ ಮಾಡಿದಂತಾ ಎಂದು ನಾವು ಕೇಳುತ್ತಿದ್ದೇವೆ. ಈ ದಿನ ಎಲ್ಲ ವಿಧಗಳಲ್ಲಿ ನಾವು ಭಗವದ್ಗೀತೆಯನ್ನು ದೊಡ್ಡದಾಗಿ ಬೋಧಿಸುತ್ತಿದ್ದರೂ, ಸಿದ್ಧಾಂತವನ್ನು ಸೇರಿಸಿ ತ್ರೈತ ಸಿದ್ಧಾಂತ ಭಗವದ್ಗೀತೆಯನ್ನು ನಾವು ರಚಿಸಿದರೂ, ನಮ್ಮನ್ನು ಪರಮತದ ಕೆಳಗೆ ಜಮಕಟ್ಟಿದರೇ, ನಾವು ಹಿಂದೂಗಳು ಎಂದು ಹೇಳಿಕೊಳ್ಳುವ ನಿಮಗೇ ನಷ್ಟ ಅಲ್ಲವೇ! ಎಲ್ಲ ಮತಗಳಿಗೂ ಭಗವದ್ಗೀತೆ ಆಧಾರವಾಗಿದೆಯೆಂದು ಅದನ್ನು ಓದದೇ ಹೋದರೇ ಏನೂ ಪ್ರಯೋಜನೆ ಇಲ್ಲವೆಂದು ಖುರ್‌ಆನ್ ಗ್ರಂಥದಲ್ಲಿ 62 ನೇ ಸೂರಾ, 5ನೇ ಆಯತ್‌ನಲ್ಲಿಯೂ ಮತ್ತು 5 ನೇ ಸೂರಾ, 68 ನೇ ಆಯತ್‌ನಲ್ಲಿಯೂ ಇದೆಯೆಂದು ನಿರೂಪಿಸಿ ಹೇಳುವುದು ಪರಮತವಾಗುತ್ತದಾ? ಹಿಂದೂ ಮತವಾಗುತ್ತದಾ? ನೀವೇ ಆಲೋಚಿಸಿರಿ. ಒಂದು ಕಡೆ ಬೈಬಲ್, ಇನ್ನೊಂದು ಕಡೆ ಖುರ್‌ಆನ್ ಗ್ರಂಥ ತೌರಾತ್ ಎನ್ನುವ ಹೆಸರಿರುವ ಭಗವದ್ಗೀತೆಯನ್ನು ಹೊಗಳುತ್ತಿವೆಯೆಂದು, ಇತರ ಗ್ರಂಥಗಳಲ್ಲಿ ಕೂಡಾ ಭಗವದ್ಗೀತೆಯನ್ನು ತೋರಿಸಿದ ನಾನು ಪರಮತಸ್ಥನೆಂದು ಹೇಳುವುದು, ಈ ದಿನ ಹಿಂದೂ ಸಮಾಜಕ್ಕೆ ಸರಿಯಲ್ಲವೆಂದು ಹೇಳುತ್ತಿದ್ದೇವೆ. ಅಂತಹ ಹಿಂದೂ ಸಮಾಜವನ್ನು

ನೆತ್ತಿಯ ಮೇಲೆ ಹೊತ್ತುಕೊಂಡ B.J.P ಗೆ ಸಹ ಒಳ್ಳೆಯದಲ್ಲವೆಂದು ಹೇಳುತ್ತಿದ್ದೇವೆ.

**ಪ್ರಶ್ನೆ :– ಈ ನಡುವೆ ಟೀ.ವೀ ಚಾನಲ್‌ಗಳಲ್ಲಿ ಚರ್ಚೆಗಳಿಗೆ ಬಂದಿರುವ ಸ್ವಾಮೀಜೀಗಳೆಲ್ಲರೂ ನಿಮ್ಮನ್ನು ಯಾರೂ ಸಮರ್ಥಿಸಲಿಲ್ಲ. ನೀವು ಹಿಂದೂ ಮತದ ಮುಸುಗಿನಲ್ಲಿ ಅಜ್ಞಾನವನ್ನು ಬೋಧಿಸುತ್ತಾ ಹಿಂದೂ ಸಾಂಪ್ರದಾಯಗಳನ್ನು, ಹಿಂದೂ ಜ್ಞಾನವನ್ನು ನಾಶಮಾಡುತ್ತಿದ್ದಾರೆಂದು ಹೇಳಿದ್ದಾರೆ. ಸಾಮಾನ್ಯ ಪ್ರಜೆಗಳಲ್ಲದೆ ಸ್ವಾಮೀಜೀಗಳೇ ಹಾಗಂದಿದ್ದಾರೆಂದರೇ ನಿಮ್ಮಲ್ಲಿ ಯಾವುದೋ ಲೋಪವಿದ್ದಂತೇ, ನಿಮ್ಮದು ಸರಿಯಾದ ಜ್ಞಾನವಾದಾಗ ಅವರು ಏಕೆ ಹಾಗೆ ಹೇಳುತ್ತಿದ್ದಾರೆ?**

**ಉತ್ತರ :–** ಜ್ವರ ಎಷ್ಟು ಇದೆ ಎಂದು ತಿಳಿಯುವುದಕ್ಕೆ ಥರ್ಮಾಮೀಟರ್ ಇದೆ. ಹಾಗೇ ಹಾಲಿನಲ್ಲಿ ನೀರಿನ ಅಂಶ ಎಷ್ಟು ಇದೆ ಎಂದು ತಿಳಿಯುವುದಕ್ಕೆ ಅದಕ್ಕೆ ಸಂಬಂಧಿಸಿದ ಡಿಗ್ರೀಮೀಟರ್ ಇದೆ. ಹಾಗೇ ಪ್ರಪಂಚದಲ್ಲಿ ಎಷ್ಟೋ ವಿಷಯಗಳನ್ನು ತಿಳಿಯುವುದಕ್ಕೆ ಎಷ್ಟೋ ಪರೀಕ್ಷೆ ಸಾಧನಗಳು ಇವೆ. ಹಾಗೇ ದೇವರ ಜ್ಞಾನ ವಿಷಯದಲ್ಲಿ ಯಾರದು ಸರಿಯಾದ ಜ್ಞಾನ ಎಂದು ತಿಳಿಯುವುದಕ್ಕೆ ಶಾಸ್ತ್ರ ಆಧಾರವಾಗಿ ಇದೆ. ದೇವರ ಜ್ಞಾನ ವಿಷಯಗಳಲ್ಲಿ ಬ್ರಹ್ಮ ವಿದ್ಯಾ ಶಾಸ್ತ್ರ ಪ್ರಮಾಣ ಗ್ರಂಥವಾಗಿ ಇದೆ. ಈಗ ಬ್ರಹ್ಮವಿದ್ಯಾ ಶಾಸ್ತ್ರ ಯಾವುದು? ಎನ್ನುವ ಪ್ರಶ್ನೆ ಬಹಳ ಜನರಿಗೆ ಇದೆ. ಬ್ರಹ್ಮವಿದ್ಯಾ ಶಾಸ್ತ್ರವನ್ನು ಕುರಿತು ಒಬ್ಬ ಗುರುವನ್ನು ಕೇಳಿದರೇ ವೇದಗಳೇ ಬ್ರಹ್ಮ ವಿದ್ಯಾಶಾಸ್ತ್ರ ಎಂದು ಹೇಳಿದ್ದಾನೆ. ಇನ್ನೊಬ್ಬ ಸ್ವಾಮಿ ಹತ್ತಿರಕ್ಕೆ ಹೋಗಿ ಕೇಳಿದರೇ ಉಪನಿಷತ್ತುಗಳೇ ಬ್ರಹ್ಮವಿದ್ಯಾ ಶಾಸ್ತ್ರ ಎಂದು ಹೇಳಿದ್ದಾರೆ. ಮತ್ತೊಬ್ಬ ಆಧ್ಯಾತ್ಮಿಕ ಪಂಡಿತನ ಹತ್ತಿರಕ್ಕೆ ಹೋಗಿ ಕೇಳಿದರೇ ಅದು ಯಾವುದೋ ನನಗೆ ತಿಳಿದಿಲ್ಲ ಎಂದಿದ್ದಾನೆ. ಇನ್ನೊಬ್ಬ ಸಾಧುವಿನ ಹತ್ತಿರ ಹೋಗಿ ಕೇಳಿದರೆ ಅದು ಪೂರ್ವದಲ್ಲಿ ಇರುತ್ತಿತ್ತು ಪ್ರಸ್ತುತ ಕಾಲದಲ್ಲಿ

ಅದು ಎಲ್ಲೂ ಇಲ್ಲ ಎಂದು ಹೇಳಿದ್ದಾನೆ. ಈ ವಿಧವಾಗಿ ಒಬ್ಬೊಬ್ಬರು ಒಂದೊಂದು ವಿಧವಾಗಿ ಹೇಳುವುದರಿಂದ ಅದನ್ನು ಕುರಿತು ಇದೆಯಾ ಇಲ್ಲವಾ ಎನ್ನುವ ಅನುಮಾನ ಬಂದಿದೆ.

ಯಾವ ವಿಷಯಕ್ಕಾದರೂ ಶಾಸ್ತ್ರವೇ ಪ್ರಮಾಣ. ಶಾಸ್ತ್ರದಿಂದಲೇ ಸತ್ಯವಾ ಅಲ್ಲವಾ! ಯೆಂದು ತಿಳಿಯುತ್ತದೆ ಎಂದು ಬಹಳ ಮಂದಿ ಹೇಳುತ್ತಿದ್ದಾರೆ. ಇದು ಹೀಗಿರುವಾಗ ಗೃಹ ವಿಷಯಗಳನ್ನು ತಿಳಿಯುವುದಕ್ಕೆ ವಾಸ್ತುಶಾಸ್ತ್ರ, ಅಡುಗೆಯನ್ನು ಕುರಿತು ತಿಳಿಯುವುದಕ್ಕೆ ಪಾಕಶಾಸ್ತ್ರ, ದೇವಾಲಯಗಳಿಗೆ ಆಗಮ ಶಾಸ್ತ್ರ ತಯಾರಾಗಿವೆ. ಅವುಗಳ ವಿಷಯಗಳು ಸಕ್ರಮವಾಗಿ ತಿಳಿಯಬೇಕೆಂದರೇ ಅವುಗಳಿಗೆ ಸಂಬಂಧಿಸಿದ ಶಾಸ್ತ್ರಗಳನ್ನು ನೋಡಬೇಕೆಂದು ಹೇಳುತ್ತಾರೆ. ಅಸಲಿಗೆ ಶಾಸ್ತ್ರವೆಂದರೆ ಏನು? ಎಂದು ಪ್ರಶ್ನಿಸಿಕೊಂಡು ನೋಡಿದರೇ ಶಾಸನಗಳೊಂದಿಗೆ ಕೂಡಿಕೊಂಡಿರುವುದು ಶಾಸ್ತ್ರ ಎಂದು ಹೇಳಬಹುದು. ಹೇತುಬದ್ಧವಾಗಿ ಕಂಡುಹಿಡಿದು ನಿರ್ಣಯಿಸಿದ ಸಿದ್ಧಾಂತಗಳನ್ನು ಶಾಸನಗಳಿಂದ ತಯಾರು ಮಾಡಲ್ಪಟ್ಟಿರುವುದು ಶಾಸ್ತ್ರ ಎಂದು ತಿಳಿಯುತ್ತಿದೆ. ಹಾಗೇ ಒಂದು ಶಾಸ್ತ್ರ ಇದೆಯೆಂದರೇ ಅದಕ್ಕೆ ಒಬ್ಬ ಕರ್ತ ಇರುತ್ತಾನೆ. ಪ್ರಪಂಚದಲ್ಲಿ ಸಿದ್ಧಾಂತಕ್ಕೆ ಪರಿಶೋಧಕನಾದ ಸಿದ್ಧಾಂತಕರ್ತ ಇರುತ್ತಾನೆ ಆದರೆ, ಪೂರ್ತಿ ಶಾಸ್ತ್ರವನ್ನು ತಯಾರು ಮಾಡಿದ ಮನುಷ್ಯ ಯಾರೂ ಇರುವುದಿಲ್ಲ. ಪ್ರತೀ ಶಾಸ್ತ್ರದ ಹಿಂದೆ ದೇವರೇ ಶಾಸ್ತ್ರಕರ್ತನಾಗಿ ಇರುತ್ತಾನೆ ಹೊರತು ಮನುಷ್ಯರು ಇರುವುದಿಲ್ಲ.

ಈಗ ಶಾಸ್ತ್ರಗಳು ಎಷ್ಟು, ಶಾಸ್ತ್ರಗಳು ಯಾವುವು ಎನ್ನುವ ಪ್ರಶ್ನೆ ಬರುತ್ತಿದೆ. ಅದಕ್ಕೆ ಉತ್ತರವಾಗಿ ಹೀಗೆ ಹೇಳಬಹುದು. ಶಾಸ್ತ್ರಗಳು ಆರುಯೆಂದು, ಪುರಾಣಗಳು 18ಯೆಂದು ಪೂರ್ವದಿಂದ ಹೇಳುವುದನ್ನು ಕೇಳುತ್ತಿದ್ದೇವೆ. ಷಟ್ ಶಾಸ್ತ್ರಗಳು, ಅಷ್ಟಾದಶ ಪುರಾಣಗಳೆಂದು ಅವುಗಳನ್ನು ಗ್ರಂಥರೂಪಕವಾಗಿ ತಯಾರು ಮಾಡಿದ ವ್ಯಾಸನೇ ಹೇಳಿದ್ದಾನೆ. ಆ ಲೆಕ್ಕ ಪ್ರಕಾರ ಆರು ಶಾಸ್ತ್ರಗಳನ್ನು ಕೂಡಾ ಸಾಲಾಗಿ 1) ಗಣಿತ ಶಾಸ್ತ್ರ 2) ಖಗೋಳ ಶಾಸ್ತ್ರ 3) ರಸಾಯನ ಶಾಸ್ತ್ರ 4) ಭೌತ ಶಾಸ್ತ್ರ 5) ಜ್ಯೋತಿಷ್ಯ ಶಾಸ್ತ್ರ 6) ಬ್ರಹ್ಮವಿದ್ಯಾಶಾಸ್ತ್ರ ಎಂದು ಹೇಳಬಹುದು. ಪ್ರಪಂಚದಲ್ಲಿ ಇವು ಆರೇ ಶಾಸ್ತ್ರಗಳು ಆದಾಗ ವಾಸ್ತು ಶಾಸ್ತ್ರ, ಪಾಕ ಶಾಸ್ತ್ರ,

ಆಗಮ ಶಾಸ್ತ್ರ ಎಂದು ಹೇಳುತ್ತಾ ಹೋದರೇ ಬಹಳ ಶಾಸ್ತ್ರಗಳಿವೆ ಅಲ್ಲವೆ! ಇವುಗಳನ್ನು ಏನನ್ನಬೇಕು. ಆರೇ ಶಾಸ್ತ್ರಗಳಾಗಿರುವಾಗ ಉಳಿದಿರುವವೆಲ್ಲಾ ಶಾಸ್ತ್ರಗಳು ಅಲ್ಲವಾ! ಶಾಸ್ತ್ರಗಳು ಅಲ್ಲದಿರುವಾಗ ಅವುಗಳಿಗೆ ಶಾಸ್ತ್ರ ಎಂದು ಏಕೆ ಹೆಸರು ಇಟ್ಟಿದ್ದಾರೆ. ಆರು ಶಾಸ್ತ್ರಗಳನ್ನು ವ್ಯಾಸನು ಹೆಸರುಗಳನ್ನಿಟ್ಟು ಬರೆದಾಗ, ಉಳಿದ ಎಷ್ಟೋ ಶಾಸ್ತ್ರಗಳನ್ನು ಯಾರು ಬರೆದಿದ್ದಾರೆಂದು ಪ್ರಶ್ನಿಸಿದರೇ ಉತ್ತರ ಹೀಗೆ ಇದೆ.

ಕಲ್ಲುಗಳಲ್ಲಿ ಒಳಗೆ ಬೆಳಕಿರುವ ಚಿಕ್ಕ ಚಿಕ್ಕ ಕಲ್ಲುಗಳಿರುತ್ತವೆ. ಅವುಗಳನ್ನು ವಜ್ರಗಳು ಎಂದು ಕರೆಯುತ್ತೇವೆ. ಹಾಗೇ ಕಲ್ಲುಗಳಲ್ಲಿಯೇ ಹೊರಗೆ ಬೆಳಕಿರುವ ಅಂದರೇ ಹೊರಗೆ ಹೊಳೆಯುವ ಕಲ್ಲುಗಳಿರುತ್ತವೆ. ಅವುಗಳನ್ನು ಸೂಜಿಗಲ್ಲು (ಅಯಸ್ಕಾಂತ) ಎನ್ನುತ್ತೇವೆ. ಹಾಗೇ ವಜ್ರಗಳಂತಹವು ಆರು ಶಾಸ್ತ್ರಗಳು ಆದಾಗ, ಸೂಜಿಗಲ್ಲುಗಳಂತಹವು ಉಳಿದ ಶಾಸ್ತ್ರಗಳು. ಷಟ್ ಶಾಸ್ತ್ರಗಳು ಸ್ವತಃವಾಗಿ ದೇವರೇ ತಿಳಿಸಿರುವವು. ಉಳಿದ ಶಾಸ್ತ್ರಗಳು ಎಷ್ಟಿದ್ದರೂ ಅವುಗಳನ್ನು ಮನುಷ್ಯರು ಅವರ ಇಷ್ಟ ಪ್ರಕಾರ ಬರೆದುಕೊಂಡಿರುವವೇಯೆಂದು ಹೇಳಬಹುದು. ಈಗ ಲೆಕ್ಕಗಳು ನೋಡಬೇಕೆಂದರೇ ಗಣಿತ ಶಾಸ್ತ್ರವನ್ನು ನೋಡಬೇಕು. ಭವಿಷ್ಯತ್ತನ್ನು ತಿಳಿಯಬೇಕೆಂದರೇ ಜ್ಯೋತಿಷ್ಯ ಶಾಸ್ತ್ರವನ್ನು ನೋಡಬೇಕು. ಶರೀರ ವಿವರವನ್ನು ತಿಳಿಯಬೇಕೆಂದರೇ ಭೌತ ಶಾಸ್ತ್ರವನ್ನು ನೋಡಬೇಕು. ಹಾಗೇ ದೈವಜ್ಞಾನ ವಿಷಯಗಳಲ್ಲಿ ಯಾವುದು ಸತ್ಯ, ಯಾವುದು ಅಸತ್ಯ ಎಂದು ತಿಳಿಯುವುದಕ್ಕೆ, ಹಾಗೇ ಯಾರು ನಿಜವಾದ ಜ್ಞಾನಿ, ಯಾರು ಅಲ್ಲ ಎಂದು ತಿಳಿಯುವುದಕ್ಕೆ ಬ್ರಹ್ಮವಿದ್ಯಾ ಶಾಸ್ತ್ರವನ್ನು ನೋಡಬೇಕಾಗಿರುತ್ತದೆ.

ಭೂಮಿ ಮೇಲೆ ಬ್ರಹ್ಮವಿದ್ಯಾ ಶಾಸ್ತ್ರ ಯಾವುದು ಎಂದರೇ ಅದು ಆ ಹೆಸರಿನಿಂದ ಪ್ರತ್ಯೇಕವಾದುದಾಗಿ ಇಲ್ಲದೆ ಬೇರೊಂದು ಹೆಸರಿನಿಂದ ಇದೆಯೆಂದು ತಿಳಿಯುತ್ತಿದೆ. ಭಗವದ್ಗೀತೆಯಲ್ಲಿ ಪ್ರತಿ ಅಧ್ಯಾಯದ ಕೊನೆಯಲ್ಲಿ **ಬ್ರಹ್ಮವಿದ್ಯಾಯಾಂ ಯೋಗ ಶಾಸ್ತ್ರೇ**ಯೆಂದು ಹೇಳಲ್ಪಟ್ಟಿದೆ. ಅದನ್ನನುಸರಿಸಿ ಭಗವದ್ಗೀತೆಯನ್ನು ಬ್ರಹ್ಮವಿದ್ಯಾ ಶಾಸ್ತ್ರವಾಗಿ ಹೇಳಬಹುದು. ಆದರೂ ವ್ಯಾಸನು ಹೇಳಿರುವುದು ವಾಸ್ತವವೇನಾ, ಆತನ ಮಾತಿನ ಪ್ರಕಾರ ಭಗವದ್ಗೀತೆ ಬ್ರಹ್ಮವಿದ್ಯಾ

ಶಾಸ್ತ್ರವೇನಾಯೆಂದು ಸಹ ಪ್ರಶ್ನೆ ಬರಬಹುದು. ಭಗವದ್ಗೀತೆ ಬ್ರಹ್ಮವಿದ್ಯಾ ಶಾಸ್ತ್ರವೆಂದು ಹೇಳುವುದಕ್ಕೆ ಬೇರೆ ಆಧಾರ ಏನಾದರೂ ಇದೆಯೇನೋ ಎಂದು ನೋಡಿದರೆ, ಅದು ನಿಜವೇಯೆಂದು ಹೇಳುವುದಕ್ಕೆ ಸ್ವಲ್ಪ ಆಧಾರ ಅಂತಿಮ ದೈವ ಗ್ರಂಥ ಖುರ್‌ಆನ್‌ನಲ್ಲಿ ಸಿಗುತ್ತದೆ. ಖುರ್‌ಆನ್ ಗ್ರಂಥವನ್ನು ಕುರಿತು ಮುಸ್ಲೀಮ್‌ರಿಗೇ ಸರಿಯಾಗಿ ತಿಳಿದಿಲ್ಲ. ಅಂತಾದ್ದು ಹಿಂದೂಗಳಿಗೆ ಅದರಲ್ಲಿರು ವುದು ಹೇಗೆ ತಿಳಿಯುತ್ತದೆ. ಈ ದಿನ ಪರಮತ ಎಂದ ಕೂಡಲೇ ಅಸೂಯೆ ಹುಟ್ಟುತ್ತಿದೆ. ಮುಸ್ಲೀಮ್‌ರನ್ನು ನೋಡಿದರೆ ಹಿಂದೂಗಳಿಗೆ ಸರಿಹೋಗುವುದಿಲ್ಲ. ಹಿಂದೂಗಳನ್ನು ನೋಡಿದರೇ ಮುಸ್ಲೀಮ್‌ರಿಗೆ ಸರಿಹೋಗುವುದಿಲ್ಲ. ವಾಸ್ತವಕ್ಕೆ ಖುರ್‌ಆನ್ ಒಂದು ದೈವ ಗ್ರಂಥವೆಂದು ಹಿಂದೂಗಳು ಸ್ವಲ್ಪವಾದರೂ ಅಂದುಕೊಳ್ಳುತ್ತಿಲ್ಲ. ಹಾಗೇ ಭಗವದ್ಗೀತೆಯನ್ನು ನೋಡಿದರೇ ಇದು ಪ್ರಥಮ ದೈವಗ್ರಂಥವೆಂದು ಮುಸ್ಲೀಮ್‌ರು ಅಂದುಕೊಳ್ಳುತ್ತಿಲ್ಲ. ಇನ್ನೊಂದು ದೊಡ್ಡ ರಹಸ್ಯ ಏನೆಂದರೇ! ಖುರ್‌ಆನ್‌ನಲ್ಲಿ ಬರೆದ ತೌರಾತ್ ಎನ್ನುವ ಹೆಸರಿರುವ ಗ್ರಂಥವೇ ಈ ದಿನ ನಮ್ಮ ಹತ್ತಿರ ಇರುವ ಭಗವದ್ಗೀತೆಯೆಂದು ಇತ್ತ ಹಿಂದೂಗಳಿಗಾಗಲೀ, ಅತ್ತ ಮುಸ್ಲೀಮ್‌ರಿಗಾಗಲೀ ತಿಳಿದಿಲ್ಲ.

ಖುರ್‌ಆನ್ ಮತ್ತು ಬೈಬಲ್ ಗ್ರಂಥಗಳಿಗೆ ಭಗವದ್ಗೀತೆಯಲ್ಲಿನ ಜ್ಞಾನವೇ ಆಧಾರವೆಂದು ಹೇಳುವುದು, ಈ ಎರಡು ಗ್ರಂಥಗಳು ತೌರಾತ್‌ನ್ನು (ಭಗವದ್ಗೀತೆಯನ್ನು) ಧೃಢಪಡಿಸುತ್ತಿವೆಯೆಂದು ಹೇಳುವುದು ನಡೆದಿದೆ. ಅಷ್ಟೇ ಅಲ್ಲದೆ ತೌರಾತ್ ಗ್ರಂಥವನ್ನು ಓದದಿದ್ದರೆ ಅವನು ಯಾವ ಮತ ಧರ್ಮದಲ್ಲಿಯೂ ಇಲ್ಲದಂತೇಯೆಂದು ಸಹ ಹೇಳಿದ್ದಾರೆ. ಭಗವದ್ಗೀತೆ ಆಧ್ಯಾತ್ಮಿಕ ವಿದ್ಯೆಗೆ ಪ್ರಮಾಣ ಗ್ರಂಥವೆಂದು ಹೇಳುವುದಕ್ಕೆ ಖುರ್‌ಆನ್‌ನಲ್ಲಿ ಏನು ಹೇಳಿದ್ದಾರೋ ಒಂದು ಬಾರಿ ನೋಡಿರಿ.

**(62–5) "ತೌರಾತ್ ಗ್ರಂಥದ ಪ್ರಕಾರ ಆಚರಿಸಬೇಕೆಂದು ಆದೇಶಿಸಿದರೂ ಅದಕ್ಕೆ ಅನುಗುಣವಾಗಿ ಅನುಸರಿಸದವರು ಎಷ್ಟು ಗ್ರಂಥಗಳನ್ನು ಅನುಸರಿಸಿದರೂ ಪ್ರಯೋಜನವಿಲ್ಲ.**

ಅಂತಹವರನ್ನು ಎಷ್ಟೋ ಗ್ರಂಥಗಳನ್ನು ಬೆನ್ನಿನ ಮೇಲೆ ಹೊರುವ ಕತ್ತೆಗಳಂತಹವರೆಂದು ಉಪಮಾನವಾಗಿ ಹೇಳಬಹುದು"

(5–68) "ಓ ಗ್ರಂಥವಾಹಕರೇ! ನೀವು ತೌರಾತ್‌ನ್ನು (ಭಗವದ್ಗೀತೆಯನ್ನು), ಇಂಜೀಲ್‌ನ್ನು (ಬೈಬಲನ್ನು) ನಿಮ್ಮ ಪ್ರಭು ಕಡೆಯಿಂದ ನಿಮ್ಮ ಹತ್ತಿರಕ್ಕೆ ಕಳುಹಿಸಲ್ಪಟ್ಟ ಖುರ್‌ಆನ್ ಗ್ರಂಥವನ್ನು ಓದಿ ನಿಮ್ಮ ಜೀವನಗಳಲ್ಲಿ ಧೃಢಪಡಿಸಿಕೊಳ್ಳು ವವರೆಗೂ ನೀವು ಯಾವ ಧರ್ಮದ ಮೇಲೆ ಇಲ್ಲದಂತೇ."

(5–46) "ಆ ಪ್ರವಕ್ತರ ನಂತರ ನಾವು ಮರ್ಯಮ್ (ಮರಿಯಮ್ಮ) ಕುಮಾರನು ಈಸಾನನ್ನು (ಏಸುನನ್ನು) ಕಳುಹಿಸಿದ್ದೇವೆ. ಆತನು ತನಗೆ ಪೂರ್ವದಲ್ಲಿ ಬಂದಿರುವ ತೌರಾತ್ ಗ್ರಂಥವನ್ನು ಸತ್ಯವೆಂದು ಧೃಢೀಕರಿಸುವವನು. ನಾವು ಆತನಿಗೆ ಇಂಜೀಲು (ಬೈಬಲ್) ಗ್ರಂಥವನ್ನು ಕೊಟ್ಟಿದ್ದೇವೆ. ಅದರಲ್ಲಿ ಮಾರ್ಗದರ್ಶಕ, ಜ್ಯೋತಿ ಇವೆ. ಅದು ತನಗಿಂತ ಮೊದಲಿದ್ದ ತೌರಾತ್ ಗ್ರಂಥವನ್ನು ಧೃಢಪಡಿಸುತ್ತದೆ. ಅಷ್ಟೇ ಅಲ್ಲದೆ ಅದು ದೈವಭೀತಿ ಇರುವವರಿಗೆ ಮಾರ್ಗದರ್ಶಿನಿ ಯಾಗಿ, ಹಿತಬೋಧಿನಿಯಾಗಿ ಇದೆ."

(5–44) "ನಾವು ತೌರಾತ್ ಗ್ರಂಥವನ್ನು ಅವತರಿಸುವಂತೆ ಮಾಡಿದ್ದೇವೆ. ಅದರಲ್ಲಿ ಮಾರ್ಗದರ್ಶಕ, ಜ್ಯೋತಿ ಇವೆ. ಈ ತೌರಾತು ಗ್ರಂಥದ ಆಧಾರವಾಗಿಯೇ ದೇವರ ಮೇಲೆ

**ವಿಶ್ವಾಸವಿರುವ ಪ್ರವಕ್ತರು, ರಬ್ಬಾನೀಗಳು, ಧರ್ಮವೇತ್ತರು, ಯೂದರ ಸಮಸ್ಯೆಗಳನ್ನು ಪರಿಷ್ಕರಿಸುತ್ತಿದ್ದರು."**

ಇಲ್ಲಿ ಹೇಳಿದ ನಾಲ್ಕು ವಾಕ್ಯಗಳು (ಆಯತ್‌ಗಳು) ಅರ್ಥವಾಗುವುದಕ್ಕೆ ತೌರಾತ್ ಎಂದರೆ ಭಗವದ್ಗೀತೆಯೆಂದು ಅರ್ಥ ಮಾಡಿಕೊಳ್ಳಬೇಕಾಗಿದೆ. 'ತೌ' ಎಂದರೇ ಮೂರು ಎಂದು ಅರ್ಥ, 'ರಾತ್' ಎಂದರೇ ರಾತ್ರಿ ಎಂದು ಅರ್ಥ. **"ತೌರಾತ್"** ಎಂದರೇ ಮೂರು ರಾತ್ರಿಗಳೆಂದು ಅರ್ಥ. ರಾತ್ರಿ ಎಂದರೆ ಕತ್ತಲಾಗಿ ಇರುವುದು. ಏನೂ ಕಾಣಿಸದಿರುವುದು ಎಂದು ಹೇಳಬಹುದು. ಆತ್ಮ ಎಂದರೆ ತಿಳಿಯದಂತಿರುವುದು ಆದ್ದರಿಂದ ಆತ್ಮವನ್ನು ರಾತ್ರಿಯಾಗಿ ಹೋಲಿಸಿ ಕಾಣಿಸುವುದು ಅಲ್ಲವೆಂದು ಹೇಳಿದ್ದಾರೆ. ತ್ರೈತ ಸಿದ್ಧಾಂತದ ಪ್ರಕಾರ ಭಗವದ್ಗೀತೆಯಲ್ಲಿ ಹೇಳಿದ ಮೂರು ಆತ್ಮಗಳನ್ನು ಮೂರು ರಾತ್ರಿಗಳಾಗಿ ಹೋಲಿಸಿ **"ತೌರಾತ್"** ಎಂದು ಹೇಳಿದ್ದಾರೆ. ಮೂರು ಆತ್ಮಗಳನ್ನು ಕುರಿತು ಹೇಳಿದ ಗ್ರಂಥವನ್ನು ಮನುಷ್ಯರು ಭಗವದ್ಗೀತೆಯೆಂದು ಹೇಳಿದ್ದಾರೆ. ಅದೇ ಭಗವದ್ಗೀತೆ ಯನ್ನು ಮೊಷೇ ಪ್ರವಕ್ತರಿಗೆ ಸ್ವಪ್ನದಲ್ಲಿ ಕೃಷ್ಣನು ಸ್ವತಃವಾಗಿ ಕೊಟ್ಟಾಗ ಕೊಟ್ಟಿರುವ ಗ್ರಂಥದ ಹೆಸರು ತೌರಾತ್ ಎಂದು ಆತನು ಸ್ವತಃವಾಗಿ ಹೆಸರು ಇಟ್ಟು ಕೊಟ್ಟಿದ್ದಾನೆ. ಈ ವಿಷಯಗಳೆಲ್ಲವೂ **"ಕೃಷ್ಣಮೂಸ"** ಎಂಬ ನಮ್ಮ ಗ್ರಂಥದಲ್ಲಿ ಬರೆಯಲ್ಪಟ್ಟಿವೆ. ಮೊಟ್ಟಮೊದಲು ಬರೆಯಲ್ಪಟ್ಟಿರುವ ಗ್ರಂಥವನ್ನು ಬರೆದ ವ್ಯಾಸನು ಭಗವದ್ಗೀತೆ ಯೆಂದು ಹೆಸರು ಇಟ್ಟಿರುವಾಗ ಭಗವದ್ಗೀತೆಯನ್ನು ಹೇಳಿದ ಕೃಷ್ಣನು ಸ್ವತಃವಾಗಿ ತೌರಾತ್‌ಯೆಂದು ಹೆಸರು ಇಟ್ಟಿದ್ದಾನೆ. ಇದೆಲ್ಲವೂ ಯಾರಿಗೂ ತಿಳಿಯದಂತೆ ನಡೆದ ವಿಷಯ. ಆದ್ದರಿಂದ ತೌರಾತ್ ಎಂದರೇ ಮೂರು ತಿಳಿಯದ ಆತ್ಮಗಳೆಂದು ಅರ್ಥ ಮಾಡಿಕೊಳ್ಳಬೇಕಾಗಿದೆ. ಭಗವದ್ಗೀತೆಯಲ್ಲಿ ಸಹ ಮೂರು ಆತ್ಮಗಳ ವಿಷಯವನ್ನೇ ಹೇಳಿದ್ದಾರೆ. ಇದನ್ನನುಸರಿಸಿ ತೌರಾತ್, ಭಗವದ್ಗೀತೆ ಎರಡೂ ಒಂದೇಯೆಂದು ಹೇಳುತ್ತಿದ್ದೇವೆ.

ಇದೆಲ್ಲವೂ ಗಮನಿಸಿದ ನಂತರ ಆಧ್ಯಾತ್ಮಿಕ ವಿದ್ಯೆಗೆ ಪ್ರಮಾಣ ಗ್ರಂಥ ಭಗವದ್ಗೀತೆಯೆಂದು ತಿಳಿಯುತ್ತಿದೆ. ಯಾರಾದರೂ ದೈವಜ್ಞಾನ ವಿಷಯದಲ್ಲಿ ಯಾವುದು ಸತ್ಯ, ಯಾವುದು ಅಸತ್ಯ ಎಂದು ತಿಳಿಯುವುದಕ್ಕೆ ಭಗವದ್ಗೀತೆಯನ್ನು

ಪ್ರಮಾಣ ಗ್ರಂಥವಾಗಿ ತೆಗೆದುಕೊಂಡು ನೋಡಬೇಕಾಗಿದೆ. ಈ ದಿನ ಹಿಂದೂ ಮತದಲ್ಲಿನ ಸ್ವಾಮೀಜೀಗಳು ಒಂದು ಭಗವದ್ಗೀತೆಯನ್ನು ಅಲ್ಲದೆ ಕೆಲವರು ವೇದಗಳನ್ನು, ಕೆಲವರು ಉಪನಿಷತ್ತುಗಳನ್ನು, ಕೆಲವರು ಪುರಾಣಗಳನ್ನು, ಕೆಲವರು ಇತಿಹಾಸಗಳನ್ನು ಆಧಾರ ಮಾಡಿಕೊಂಡು ಅವರು ಹೇಳುವ ಮಾತುಗಳೇ ನಿಜವಾದ ಜ್ಞಾನ ಎಂದು ಅನ್ನುತ್ತಿದ್ದಾರೆ. ಆದ್ದರಿಂದ ಉಳಿದ ಸ್ವಾಮೀಜೀಗಳು ಹೇಳುವ ಜ್ಞಾನವನ್ನು ಬ್ರಹ್ಮ ವಿದ್ಯಾ ಶಾಸ್ತ್ರವಾದ ಭಗವದ್ಗೀತೆಯೊಂದಿಗೆ ಹೋಲಿಸಿ ನೋಡಬೇಕಾಗಿದೆ. ಹಾಗೆ ನೋಡಿದರೇ ಅವರು ಹೇಳುವುದು ನಿಜವಾದ ಜ್ಞಾನವಾ ಅಲ್ಲವಾಯೆಂದು ತಿಳಿಯುತ್ತದೆ. ಈ ದಿನ ಭಗವದ್ಗೀತೆಯನ್ನು ಓದಿದ ಸ್ವಾಮೀಜೀಯರಿಗೂ ಸಹ ಅದರಲ್ಲಿನ ನಿಗೂಢ ಜ್ಞಾನ ಅರ್ಥವಾಗದೇ ಗೀತೆಯಲ್ಲಿ ಒಂದು ಹೇಳಿದ್ದರೇ ಮತ್ತೊಂದನ್ನು ಅವರು ಅರ್ಥ ಮಾಡಿಕೊಳ್ಳುವುದು ನಡೆದಿದೆ. ಹಾಗಿರುವಾಗ ನಾನು ಅಂತಿಮ ದೈವ ಗ್ರಂಥವಾದ ಖುರ್‌ಆನ್ ಸಹ ಹೊಗಳಿದ ತೌರಾತ್ (ಭಗವದ್ಗೀತೆ) ಪ್ರಮಾಣವಾಗಿ ತೆಗೆದುಕೊಂಡು ಯಾವುದು ಜ್ಞಾನವೋ ಅದನ್ನೇ ಅನುಸರಿಸುತ್ತಾ, ಯಾವುದು ಜ್ಞಾನ ಅಲ್ಲವೋ ಅದನ್ನು ಬಿಟ್ಟು ಹಾಕುತ್ತಿದ್ದೇವೆ. ಶಾಸ್ತ್ರ ಸಮರ್ಥಿಸದಿರುವುದನ್ನು ಲೋಕದಲ್ಲಿ ಇರುವವರೆಲ್ಲರೂ ಸಮರ್ಥಿಸಿದರೂ, ನಾನು ಮಾತ್ರ ಅದನ್ನು ಆಚರಿಸುತ್ತಿಲ್ಲ. ಊರಿನವರೆಲ್ಲಾ ಒಂದು ದಾರಿಯಲ್ಲಿ ನಡೆದರೇ ನಾನು ಎಲ್ಲರಿಗೂ ವಿರೋಧಿಯಾದರೂ ಫರವಾಗಿಲ್ಲವೆಂದು ಶಾಸ್ತ್ರವನ್ನು ಅನುಸರಿಸಿ, ಬ್ರಹ್ಮವಿದ್ಯಾ ಶಾಸ್ತ್ರದಲ್ಲಿ ಸೂಚಿಸಿರುವುದನ್ನೇ ಅನುಸರಿಸುತ್ತಿದ್ದೇನೆ.

ಇಂಜೀಲು (ಬೈಬಲ್) ಅಂತಿಮ ದೈವಗ್ರಂಥವಾದ ಖುರ್‌ಆನ್ ಸಮರ್ಥಿಸುವಂತಹ ತೌರಾತ್ (ಭಗವದ್ಗೀತೆ)ಯನ್ನು ಪರಿಶೋಧಿಸಿ ಅದರಲ್ಲಿನ ನಿಜವಾದ ಭಾವವನ್ನು ಗ್ರಹಿಸಿ, ಅದರಲ್ಲಿ ಸರ್ವಮಾನವರಿಗೂ, ಸರ್ವಮತದವರಿಗೂ ಹೇಳಿದ ಜ್ಞಾನವನ್ನು ನಾನು ಗ್ರಹಿಸಿ, ನನ್ನಲ್ಲಿ ಸರಿಯಾದ ಜ್ಞಾನ ಇರುವಂತೆ ಮಾಡಿಕೊಂಡಿದ್ದೇನೆ. ಈ ದಿನ ಮಾನವರು ಯಾವುದೋ ಒಂದು ಮತ ಸಾಂಪ್ರದಾಯವನ್ನು ಅನುಸರಿಸುತ್ತಾ ತಮ್ಮದೇ ನಿಜವಾದ ಜ್ಞಾನ ಎಂದು ಅಂದುಕೊಳ್ಳುತ್ತಿದ್ದಾರೆ. ಭೂಮಿ ಮೇಲೆ ಪ್ರತಿ ಮನುಷ್ಯರು ಮತ ಎನ್ನುವ ಮತ್ತಿನಲ್ಲಿ ಮುಳುಗಿದ್ದಾರೆ. ಯಾರು ಮಾತನಾಡಿದರೂ ಅವರವರ

ಮತ ಸಾಂಪ್ರದಾಯಗಳನ್ನು ಮಾತನಾಡುತ್ತಾ ಅದೇ ನಿಜವಾದ ಜ್ಞಾನವೆಂದು ಹೇಳುತ್ತಿದ್ದಾರೆ. ನಿಜವಾದ ದೇವರ ಜ್ಞಾನ ಮನುಷ್ಯರ ಮಧ್ಯೆ ಭೇಧಗಳನ್ನುಂಟು ಮಾಡುವುದಿಲ್ಲ. ಯಾವ ಮನುಷ್ಯನಲ್ಲಾದರೂ ಒಂದೇ ಇರುತ್ತದೆ. ಹಾಗಲ್ಲದೆ ಈ ದಿನ ಮನುಷ್ಯರ ಮಧ್ಯದಲ್ಲಿ ಭೇದಗಳು ಉಂಟುಮಾಡುವ ಜ್ಞಾನವೇ ಇರುವುದರಿಂದ ಅದು ಶಾಸ್ತ್ರಬದ್ಧವಾದ ಜ್ಞಾನ ಅಲ್ಲವೆಂದು ತಿಳಿಯುತ್ತಿದೆ. ಪ್ರಪಂಚದಲ್ಲಿ ಹನ್ನೆರಡು ಮತಗಳಿದ್ದರೂ ಅದರಲ್ಲಿ ಮೂರು ಮತಗಳೇ ದೊಡ್ಡವು. ಅಷ್ಟೇ ಅಲ್ಲದೆ ಈ ಮೂರು ಮತಗಳಲ್ಲೇ ದೇವರು ತನ್ನ ದೈವ ಗ್ರಂಥಗಳನ್ನು ಕೊಟ್ಟಿದ್ದಾನೆ. ಒಂದೊಂದು ಮತ ಒಂದೊಂದು ದೈವ ಗ್ರಂಥವನ್ನು ನಮ್ಮದು ಎಂದು ಹೇಳಿಕೊಳ್ಳುತ್ತಿದ್ದರೂ ಆ ದೈವಗ್ರಂಥದಲ್ಲಿನ ಜ್ಞಾನವನ್ನು ಪೂರ್ತಿ ಗ್ರಹಿಸಿಕೊಳ್ಳಲಾರದಂತಿದ್ದಾರೆ. ಆದ್ದರಿಂದ ಗ್ರಂಥದಲ್ಲಿನ ಜ್ಞಾನ ಅಲ್ಲದೆ ಮತದಲ್ಲಿನ ಸಾಂಪ್ರದಾಯಗಳೇ ಅವರಲ್ಲಿ ಹೆಚ್ಚಾಗಿ ಮಿಳಿತವಾಗಿ ಹೋಗಿವೆ. ಮತ ಸಾಂಪ್ರದಾಯಗಳಿಗೆ ದೇವರು, ದೇವರ ಜ್ಞಾನ ದೂರವಾಗಿ ಇರುತ್ತದೆ. ಅಂತಹವರು ದೈವ ಗ್ರಂಥಗಳನ್ನು ಅನುಸರಿಸುತ್ತಾ, ಮೂರು ದೈವ ಗ್ರಂಥಗಳಲ್ಲಿ ಒಂದೇ ಜ್ಞಾನವಿದೆಯೆಂದು ಹೇಳುತ್ತಿರುವ ನಮ್ಮನ್ನು ವಿಮರ್ಶಿಸುತ್ತಾ, ನಾವು ಹೇಳುವುದು ಜ್ಞಾನ ಅಲ್ಲವೆಂದು ಅನ್ನುತ್ತಿದ್ದಾರೆ.

ಹಿಂದೂ ಮತಕ್ಕೆ ವಿರುದ್ಧವಾಗಿ ಬೋಧಿಸುತ್ತಿದ್ದಾನೆಂದು, ಹಿಂದೂ ಮತವನ್ನು ನಾಶ ಮಾಡುತ್ತಿದ್ದಾನೆಂದು ನನ್ನನ್ನು ಅನ್ನುತ್ತಿದ್ದಾರೆ. ಯಾರು ಏನೆಂದರೂ ನಾನು ಯಾವ ಮತಕ್ಕೂ ವಿರೋಧಿಯಲ್ಲ. ಇತರೆ ಮತಗಳಾದ ಇಸ್ಲಾಮ್, ಕ್ರೈಸ್ಥವ ಮತಗಳಿಗು ಕೂಡಾ ನಾನು ವಿರೋಧಿಯಲ್ಲ. ಅವರಲ್ಲಿ ಇರುವ ಅಜ್ಞಾನಕ್ಕೆ ವಿರುದ್ಧವಾಗಿ ನನ್ನ ಬೋಧನೆಗಳಿರುತ್ತವೆ ಆದರೆ ಅವರು ನಮ್ಮದು ಎಂದು ಹೇಳಿಕೊಳ್ಳುವ ದೈವಗ್ರಂಥದಲ್ಲಿನ ಜ್ಞಾನಕ್ಕೆ ನಾನು ಎಂದಿಗೂ ವಿರುದ್ಧವಾಗಿ ಹೇಳಲಿಲ್ಲ. ಹಿಂದೂ ಮತದಲ್ಲಿ ಹುಟ್ಟಿದ ನಾನು, ಹಿಂದೂ ಮತದಲ್ಲಿ ಯಾವುದಾದರೂ ಲೋಪವಿದ್ದರೇ ಸರಿಮಾಡಬೇಕೆಂದು ನೋಡುತ್ತೇವೆ ಹೊರತು, ಹಿಂದೂ ಮತಕ್ಕೆ ವಿರುದ್ಧವಾಗಿ ಏಕೆ ಇರುತ್ತೇವೆ? ನನ್ನನ್ನು ಏಕೆ ಕೆಲವರು ಹಾಗೆ ಹೇಳಿಕೊಳ್ಳುತ್ತಿದ್ದಾರೆನ್ನುವುದಕ್ಕೆ ಒಂದು ವಿಷಯವನ್ನು

ಉದಾಹರಣೆಯಾಗಿ ಹೇಳುತ್ತಿದ್ದೇನೆ ನೀವು ಗಮನಿಸಿರಿ. ಈ ದಿನ ನಮ್ಮದು ಹಿಂದೂ ಮತ ಎಂದು ಅನ್ನುತ್ತಿದ್ದಾರೆ. ಯಾರೋ ಒಬ್ಬರೆಂದರೇ ಉಳಿದವರು ಅದನ್ನು ಸ್ವಲ್ಪವಾದರೂ ಆಲೋಚಿಸದಂತೆ ಹಾಗೇ ಅನ್ನುತ್ತಿದ್ದಾರೆ. ವಾಸ್ತವವಾಗಿ ಚರಿತ್ರೆಯೊಳಗೆ ಹೋಗಿ ನೋಡಿದರೇ ಆ ಹೆಸರು ನಮಗೆ ಇಲ್ಲ. ಆ ಹೆಸರು ಅರ್ಥವಿಲ್ಲದ ಹೆಸರು. ಹಿಂದೂ ಎನ್ನುವುದು ಯಾವ ಡಿಕ್ಷನರೀಯಲ್ಲೂ ಇಲ್ಲ. ಅರ್ಥವಿಲ್ಲದ ಪದವನ್ನು ಇಟ್ಟುಕೊಂಡು ಅದು ನಮ್ಮ ಮತ ಎನ್ನುವುದು ನಮಗೆ ಅವಮಾನಕರ ಎಂದು ಹೇಳಿದ್ದೇವೆ. ವಾಸ್ತವವಾಗಿ ನಮ್ಮ ಮತದ ಹೆಸರು ಪೂರ್ವ ಕಾಲದಲ್ಲಿ ಇಂದೂ ಎನ್ನುವ ಶಬ್ದದಿಂದ ಇತ್ತು.

ಇಂದೂ ಎನ್ನುವ ಪದ ಕಾಲಕ್ರಮೇಣ ಹಿಂದೂವಾಗಿ ಬದಲಾಗಿರ ಬಹುದು. ಇದರ ಹೋಲಿಕೆಯಾಗಿ ಒಂದು ವಿಷಯವನ್ನು ಹೇಳಿಕೊಳ್ಳೋಣ. ಹಿಂದೂ ದೇಶಕ್ಕೆ ಪೂರ್ತಿ ದಕ್ಷಿಣ ಭಾಗದಲ್ಲಿ ಲಂಕ ಎನ್ನುವ ದೇಶ ಇದೆ. ಅದು ಪೂರ್ವದಿಂದ ಅದೇ ಹೆಸರಿನಿಂದಲೇ ಇದೆ. ಒಂದು ವೇಳೇ ಕಾಲಕ್ರಮೇಣ ಲಂಕ ಎನ್ನುವ ಹೆಸರು ಸ್ವಲ್ಪ ಬದಲಾವಣೆ ಹೊಂದಿ ಇಂದೂ ಹಿಂದೂವಾಗಿ ಬದಲಾದಂತೆ ಲಂಕ ಸ್ವಲ್ಪ ಲಂಗಾ ಆಗಿ ಬದಲಾಗಿದೆಯೆಂದುಕೊಳ್ಳಿ. ಯಾರಾದರೂ ಬಾಯಿ ತಿರಗದವರು ಲಂಕ ಎನ್ನುವುದು ಹೋಗಿ ಲಂಗಾ ಎಂದು ನುಡಿದರೇ ಅದನ್ನು ಯಾರೂ ಒಪ್ಪಿಕೊಳ್ಳುವುದಿಲ್ಲ. ಲಂಕ ಎಂದರೇ ನೀರಿನಲ್ಲಿ ತೇಲುವುದೆಂದು, ಸುತ್ತಲೂ ನೀರಿರುವುದು ಎಂದು ಅರ್ಥ ಇದೆ. ಅದನ್ನು ಲಂಗಾ ಎನ್ನುವುದರಲ್ಲಿ ಪೂರ್ತಿ ಭಾವವಿಲ್ಲದಂತೆ ಹೋಗುತ್ತದೆ. ಆ ಹೆಸರಿನಲ್ಲಿ ಇರುವ ಅರ್ಥಕ್ಕೆ ಪೂರ್ತಿ ಭಂಗ ಉಂಟಾಗುತ್ತದೆ. ಹಾಗೇ ಇಂದೂ ಎಂದರೇ ಜ್ಞಾನ ಅಥವಾ ಜ್ಞಾನಿ ಎಂದು ಅರ್ಥ. ಇಂದೂ ದೇಶ ಎಂದರೇ ಜ್ಞಾನಿಗಳ ದೇಶ ಎಂದು ಅರ್ಥ. ಹಾಗಿರುವಾಗ ಇಂದೂ ಎಂದು ಹೇಳದೇ ಹಿಂದೂ ಎಂದು ಹೇಳುವುದರಿಂದ ಅದಕ್ಕಿಂತ ಮೊದಲಿರುವ ಅರ್ಥ ಹೋಗಿ ಅರ್ಥವಿಲ್ಲದ ಪದವಾಗಿ ಉಳಿದುಹೋಗುತ್ತಿದೆ. ಈ ದಿನ ಹೇಗಿದ್ದರೂ ಪೂರ್ವದಲ್ಲಿ ನಮ್ಮ ದೇಶ ಪೂರ್ತಿ ಜ್ಞಾನ ಹೊಂದಿರುವುದರಿಂದ ನಮ್ಮ ದೇಶವನ್ನು ಇಂದೂದೇಶ ಎಂದು ಕರೆದಿದ್ದಾರೆ. ಈ ಹೆಸರು ಭೂಮಿಮೇಲೆ

ಮತಗಳು ಇಲ್ಲದಿರುವಾಗಲೇ ಇತ್ತು. ನಮ್ಮ ದೇಶಕ್ಕೆ ಮತವನ್ನನುಸರಿಸಿ ಹೆಸರು ಬಂದಿಲ್ಲ. ಜ್ಞಾನವನ್ನನುಸರಿಸಿ ಇಂದೂ ದೇಶವೆಂದು ಹೆಸರು ಬಂದಿದೆ. ಅಂಥಾದ್ದು ಈ ದಿನ ನಮ್ಮ ಮತಕ್ಕೆ ಸಂಬಂಧಿಸಿದ ಹೆಸರೇ ದೇಶಕ್ಕೆ ಇದೆಯೆಂದು ಹೇಳಿಕೊಳ್ಳುತ್ತಿದ್ದೇವೆ. ವಾಸ್ತವವಾಗಿ ಹೇಳಿದರೇ ಲಂಕ ದೇಶವನ್ನು ಲಂಗಾ ದೇಶವೆಂದರೂ ಅದು ಒಂದು ಅರ್ಥದ ಕೆಳಗೆ ಬರುತ್ತದೆ. ಇಂದೂ ದೇಶವನ್ನು ಹಿಂದೂ ದೇಶವೆನ್ನುವುದರಲ್ಲಿ ಯಾವ ಅರ್ಥವಿಲ್ಲದ್ದಾಗಿ ಹೋಗುತ್ತಿದೆಯೆಂದು ಮೊದಲಿನಿಂದಲೂ ಹೇಳುತ್ತಿದ್ದೇವೆ. ಹಾಗೆ ಹೇಳುವುದು ಹಿಂದೂ ಮತಕ್ಕೆ ವಿರುದ್ಧವಾಗಿ ಹೇಳಿದಂತಾಯೆಂದು ಕೇಳುತ್ತಿದ್ದೇನೆ. ನಾನು ಒಬ್ಬನೇ ಹಿಂದೂ ಅಂದರೇ ಅರ್ಥವಿಲ್ಲದ ಪದವೆಂದು ಹೇಳುತ್ತಿಲ್ಲ. ಹಿಂದೂ ಎನ್ನುವ ಪದಕ್ಕೆ ನಿರ್ವಚನೆ ತಿಳಿದಿಲ್ಲವೆಂದು 12–10–2015 ನೇ ತಾರೀಖಿನಂದು ಸಾಕ್ಷಿ ಪತ್ರಿಕೆಯಲ್ಲಿ ಅನಂತಪುರಂ ಎಡಿಷನ್‌ನಲ್ಲಿ ಬಂದಿದೆ. ಬೇಕಾದರೇ ಆ ದಿನ ಪತ್ರಿಕೆಯಲ್ಲಿ ಹೀಗೆ ಬರೆದಿದ್ದಾರೆ ನೋಡಿರಿ.

## ‘ಹಿಂದೂ ಪದಕ್ಕೆ ನಿರ್ವಚನ ತಿಳಿದಿಲ್ಲ’

Sakshi news paper 12-10-2015

**ಇಂಡೋರ್** : ರಾಜ್ಯಾಂಗ ನ್ಯಾಯಪರವಾಗಿ ಹಿಂದೂ ಪದಕ್ಕೆ ನಿರ್ವಚನ ತಿಳಿದಿಲ್ಲವೆಂದು ಕೇಂದ್ರ ಹೋಂ ಶಾಖ ತಿಳಿಸಿತು. ಹಿಂದೂ ಪದದ ನಿರ್ವಚನ ಹೇಳಬೇಕೆಂದು ಮಧ್ಯ ಪ್ರದೇಶ್‌ಗೆ ಸೇರಿದ ಚಂದ್ರಶೇಖರ್ ಗೌರ್ ಎಂಬ ವ್ಯಕ್ತಿ ಸಮಾಚಾರ ಹಕ್ಕು ಕಾನೂನಿಗೆ ಮಾಡಿಕೊಂಡ ಪಿಟಿಷನ್‌ಗೆ ಉತ್ತರ ಕೊಡುತ್ತಾ ಹೋಂ ಶಾಖೆ ಮೇಲಿನ ರೀತಿಯಲ್ಲಿ ಸ್ಪಂದಿಸಿತು. ಆ ಪದಕ್ಕೆ ಸಂಬಂಧಿಸಿದ ಎಂತಹ ಸಮಾಚಾರ ಇಲ್ಲವೆಂದು ಕೇಂದ್ರ ಪೌರ ಸಂಬಂಧಗಳ ಶಾಖಾಧಿಕಾರಿ ಗುರುತಿಸಿದಂತೆ ಕೇಂದ್ರ ತಿಳಿಸಿತು. ಎಂತಹ ನಿರ್ವಚನ ಇಲ್ಲದಿರುವಾಗ ಇಂತಹ ವರ್ಗದವರು ಇಂದೂಗಳೆಂದು ಹೇಗೆ ನಿರ್ಧಾರಿಸುತ್ತಿದ್ದೀರೆಂದು, ದೇಶದಲ್ಲಿ ಹಿಂದೂಗಳು ಮೆಜಾರಿಟೀಯಾಗಿ ಇದ್ದಾರೆಂದು ಹೇಗೆ ಹೇಳುತ್ತಿದ್ದೀರೆಂದು ಗೌರ್ ಪ್ರಶ್ನಿಸಿದ್ದಾರೆ.

ಹಾಗೇ ಇದು ಹಿಂದೂ ದೇಶವಲ್ಲ ಇಂದೂ ದೇಶ ಎನ್ನುವುದಕ್ಕೂ ಸಹ ನೆಹರೂ ತನ್ನ ಮಗಳು ಇಂದಿರಗೆ ಬರೆದ ಪತ್ರದಲ್ಲಿ ಸ್ಪಷ್ಟವಾಗಿ ತಿಳಿಯುತ್ತಿದೆ.

**ಪ್ರಮುಖರ ಲೇಖನ**

## ಇಂದೂ ದೇಶವೇ ಇಂಡಿಯಾ!

ಹಿಮಾಲಯಗಳಿಗೂ ವಿಂಧ್ಯ ಪರ್ವತಗಳಿಗೂ ಮಧ್ಯದಲ್ಲಿ ಆ ದಿನದ ಆರ್ಯಾವರ್ತನೆ (ಆರ್ಯರ ಭೂಭಾಗ) ಎಲ್ಲಿದೆಯೋ ನಮ್ಮ ದೇಶ ಪಟದಲ್ಲಿ ನೀನು ನೋಡಿದ್ದೀಯಾ. ಅದು ಬಾಲಚಂದ್ರಾಕಾರದಲ್ಲಿ ಇರುವಂತೆ ಕಾಣಿಸುತ್ತಿದೆ. ಆದ್ದರಿಂದ ಆರ್ಯಾವರ್ತನಕ್ಕೆ ಇಂದೂ ದೇಶವೆಂದು ಹೆಸರು ಬಂದಿದೆ. ಇಂದೂ ದೇಶವೇ ಹಿಂದೂ ದೇಶವಾಗಿ ಮಾರ್ಪಾಟಾಗಿದೆ.

ರಾಮಾಯಣ ಹುಟ್ಟಿದ ದೀರ್ಘ ಕಾಲಕ್ಕೆ ಮಹಾಭಾರತ ಹುಟ್ಟಿದೆ. ಅದು ರಾಮಾಯಣಕ್ಕಿಂತಲೂ ದೊಡ್ಡ ಗ್ರಂಥ. ಅದರಲ್ಲಿ ಹೇಳಿರುವುದು ಆರ್ಯ ದ್ರಾವಿಡ ಯುದ್ಧವಲ್ಲ. ಆರ್ಯರ ಮಧ್ಯೆ ಏರ್ಪಟ್ಟ ಕುಟುಂಬ ಕಲಹವೇ ಭಾರತ ಕಥೆ. ಭಾರತದಲ್ಲಿ ಹೇಳಿದ ಕಥೆಗಳು, ಧರ್ಮಗಳು ಅಷ್ಟಿಷ್ಟಲ್ಲ. ಅವು ಬಹಳ ಸುಂದರವಾಗಿ, ಗಂಭೀರವಾಗಿ ಇರುತ್ತವೆ. ಇವೆಲ್ಲವುಗಳಿಗಿಂತ ದೊಡ್ಡದಾದ ಭಗವದ್ಗೀತೆ ಎಂಬ ಮಹಾ ಗ್ರಂಥ ಮಹಾಭಾರತದಲ್ಲಿ ಇರುವ ಕಾರಣದಿಂದ ಅದು ನಮ್ಮೆಲ್ಲರಿಗೂ ಪ್ರಿಯತಮ ವಾದುದ್ದಾಗಿದೆ. ಸಾವಿರ ವರ್ಷಗಳ ಕೆಳಗೇ ನಮ್ಮ ದೇಶದಲ್ಲಿ ಇಂತಹ ವಿಶೇಷವಾದ ಗ್ರಂಥಗಳು ಹುಟ್ಟಿವೆ. ಮಹಾನುಭಾವರೇ ಇವುಗಳನ್ನು ಬರೆದಿರುತ್ತಾರೆ. ಈ ಗ್ರಂಥಗಳು ಹುಟ್ಟಿ ಇಷ್ಟು ಕಾಲ ಕಳೆದರೂ ಅವುಗಳನ್ನು ಕುರಿತು ತಿಳಿದುಕೊಳ್ಳ ದಂತಹ ಮಕ್ಕಳು ಮತ್ತು ಪ್ರಯೋಜನವನ್ನು ಪಡೆಯದ ಹಿರಿಯರಂತೂ ಇರುವುದಿಲ್ಲ.

ನೆಹರೂ ಇಂದಿರಗೆ ಬರೆದ ಲೇಖನದಿಂದ

ಈ ವಿಧವಾಗಿ ನಾವು ಹಿಂದೂಗಳು ಅಲ್ಲ ಇಂದೂಗಳು ಎಂದು ಹೇಳಿದರೆ, ನಾನು ಹೇಳಿರುವುದು ಅಜ್ಞಾನ ಎಂದು ಕೆಲವರು ಅನ್ನುವುದರಲ್ಲಿ ಅರ್ಥವೇ ಇಲ್ಲ. ಸಾಮಾನ್ಯ ಪ್ರಜೆಗಳು ತಿಳಿಯದಿರುವುದನ್ನು ಹೇಳಿದರೆ ಕೇಳುತ್ತಾರೆ,

ಅರ್ಥ ಮಾಡಿಕೊಳ್ಳುತ್ತಾರೆ. ಆದರೆ ಕೆಲವರು ಪಂಡಿತರು, ಸ್ವಾಮಿಗಳು ನಾವು ತಿಳಿದವರು ಎಂಬ ಅಹಮ್‌ನಿಂದ ಅವರು ಹೇಳಿರುವುದೇ ಜ್ಞಾನವೆಂದು, ಇತರರು ಹೇಳಿರುವುದು ಜ್ಞಾನ ಅಲ್ಲವೆಂದು ಹೇಳುವುದೇ ಅಲ್ಲದೆ, ಸತ್ಯ ಹೇಳಿದವರನ್ನು ಅಜ್ಞಾನಿಗಳೆನ್ನುವುದು ಅವರ ಕೆಲಸವಾಗಿದೆ. ಅದೇ ವಿಧವಾಗಿ ನನ್ನನ್ನು ಕೂಡಾ ಅವರು ಅಜ್ಞಾನವನ್ನು ಬೋಧಿಸುತ್ತಿದ್ದಾನೆಂದು ಹೇಳಿದ್ದಾರೆ.

**ಪ್ರಶ್ನೆ :– ಹಿಂದೂಗಳಿಗೆ ಎಷ್ಟೋ ಹಬ್ಬಗಳು ಇವೆ. ಅದರಲ್ಲಿ ಕೆಲವು ಹಬ್ಬಗಳು ಮನೆಯಲ್ಲಿಯೇ ಮಾಡಿಕೊಂಡರೆ, ಕೆಲವು ಹಬ್ಬಗಳು ಬಹಿರಂಗವಾಗಿ ಮಾಡುತ್ತಾ ಮೆರವಣಿಗೆಗಳು ಮೊದಲಾದವು ಮಾಡುತ್ತಿರುತ್ತಾರೆ. ಅಂತಹ ಹಬ್ಬಗಳಲ್ಲಿ ವಿನಾಯಕ ಚವತಿ ಹೊರಗೆ ಮೆರವಣಿಗೆ ಮಾಡುವ ಹಬ್ಬವಾಗಿದೆ. ವಿನಾಯಕ ಮೆರವಣಿಗೆಗಳು ಚಿಕ್ಕದಾಗಿ ಇರುವುದೇ ಅಲ್ಲದೆ ಅದ್ದೂರಿಯಾಗಿ ಕೂಡಾ ಇರುತ್ತದೆ. ಯಾರ ಸಾಮರ್ಥ್ಯಕ್ಕೆ ತಕ್ಕಂತೆ ಅವರು ಮಾಡುತ್ತಾರೆ. ಅಂತಹ ಸಾಂಪ್ರದಾಯ ಹಬ್ಬಕ್ಕೆ ನೀವು ಪೂರ್ತಿಯಾಗಿ ವಿರುದ್ಧವೆಂದು ಕೇಳಿದ್ದೇವೆ. ಈ ಮಧ್ಯ ಕಾಲದಲ್ಲಿ ಮೆರವಣಿಗೆಯಲ್ಲಿನ ವಿನಾಯಕ ವಿಗ್ರಹಗಳನ್ನು ಹೊಡೆದು ಹಾಕಿ ಮೆರವಣಿಗೆಯಲ್ಲಿ ಇರುವವರನ್ನು ಓಡಿಸಿದ್ದಾರೆಂದು ಕೇಳಿದ್ದೇವೆ. ನೀವು ಮಾಡದಿದ್ದರೂ ಫರವಾಗಿಲ್ಲ. ಆದರೆ ಭಕ್ತಿಯಿಂದ ಮಾಡಿಕೊಳ್ಳುವವರ ಮೇಲೆ ದಾಳಿ ಮಾಡುವುದು, ವಿನಾಯಕ ಪ್ರತಿಮೆಗಳನ್ನು ಹೊಡೆದುಹಾಕುವುದು ಏತಕ್ಕೆ ಎಂದು ಕೇಳುತ್ತಿದ್ದೇವೆ. ಹೀಗೆ ಮಾಡುವುದು ಹಿಂದೂಗಳಿಗೆ ವಿರುದ್ಧವಾಗಿ ಮಾಡಿದಂತೆ ಅಲ್ಲವೆ! ಎಂದು ಕೇಳುತ್ತಿದ್ದೇವೆ.**

**ಉತ್ತರ :–** ವಿನಾಯಕ ಹಬ್ಬವನ್ನು ಕುರಿತು ಗತದಲ್ಲಿ ಎಲ್ಲರಿಗೂ ಅರ್ಥವಾಗುವಂತೆ ಹೇಳಿದ್ದೇನೆ. ವಿನಾಯಕ ವಿಗ್ರಹಗಳನ್ನು ಮೆರವಣಿಗೆ ಮಾಡಿರೆಂದು ಹೇಳಿದ್ದೇನೆ ಆದರೆ, ಮಾಡಬಾರದೆಂದು ನಾನು ಎಂದೂ ಹೇಳಲಿಲ್ಲ. ಮೆರವಣಿಗೆ ಮಾಡು ವುದು ಕೊನೆಗೆ, ವಿಗ್ರಹವನ್ನು ಹೊಡೆದು ಹಾಕಿ ನೀರಿನಲ್ಲಿ ಹಾಕುವವರೆಗು ಮಾಡಬೇಕಾದ ಕೆಲಸವೆಂದೇ ಹೇಳಿದ್ದೇನೆ. ಹಾಗೆಯೇ ಪೂರ್ವದಲ್ಲಿ ಮಾಡುತ್ತಿದ್ದ ರೆಂದು, ಈದಿನ ಈ ವಿಧವಾಗಿ ಮಾಡುತ್ತಿದ್ದರೂ ಪೂರ್ವಕ್ಕು ಈ ದಿನಕ್ಕು ಮನುಷ್ಯರ ಭಾವನೆಯಲ್ಲಿ ವ್ಯತ್ಯಾಸ ಇದೆಯೆಂದು ಹೇಳಿದ್ದೇವೆ. ಪೂರ್ವದಲ್ಲಿ ವಿನಾಯಕ ಚವತಿ ಸಾಮಾಜಿಕ ನ್ಯಾಯವನ್ನು ತಿಳಿಸುವುದಾಗಿ ಇರುವಾಗ, ಈ ದಿನ ಆ ಭಾವನೆ ಹೋಗಿ ವಿನಾಯಕನು ದೇವರು ಎಂಬ ಭಾವನೆ ಬಂದಿದೆ. ಹಾಗೆ ವಿನಾಯಕನು ಒಬ್ಬ ದೇವರು ಎಂದು ಭಾವಿಸಿ ಪೂಜೆಗಳು ಮಾಡುವುದು ಒಳ್ಳೆಯದಲ್ಲ ಎಂದು ಹೇಳಿದ್ದೇನೆ. ಪೂರ್ವದಲ್ಲಿ ಯಾವ ಕೆಲಸವನ್ನು ಮಾಡಿದರೂ ನಮ್ಮ ಹಿರಿಯರು ಎಷ್ಟೋ ಉನ್ನತವಾದ ಭಾವದಿಂದ ಮಾಡುತ್ತಿದ್ದರು. ಹಾಗೇ ಈ ದಿನ ನಾವು ಮಾಡುವ ವಿನಾಯಕ ಹಬ್ಬಕ್ಕು, ಪೂರ್ವದಲ್ಲಿ ಹಿರಿಯರು ಮಾಡಿದ ವಿನಾಯಕ ಹಬ್ಬಕ್ಕು ಭಾವನೆಯಲ್ಲಿ ಎಷ್ಟೋ ವ್ಯತ್ಯಾಸವಿದೆ, ಪೂರ್ವದಲ್ಲಿ ಮಾಡಿದ ಭಾವನೆಯಿಂದ ವಿನಾಯಕನನ್ನು ಮೆರವಣಿಗೆ ಮಾಡಿರೆಂದು ಹೇಳಿದ್ದೇನೆ ಆದರೆ ಅಸಲಿಗೆ ಆ ಹಬ್ಬವೇ ಮಾಡಬಾರದೆಂದು ನಾನು ಎಲ್ಲಾದರೂ ಹೇಳಿದ್ದೀನಾ ಎಂದು ಕೇಳುತ್ತಿದ್ದೇನೆ.

ಈ ವಿಷಯವಾಗಿ ಚಿಕ್ಕ ಉದಾಹರಣೆಯನ್ನು ಹೇಳುತ್ತಿದ್ದೇನೆ ನೋಡಿರಿ. ಹಾಗೆ ಹೇಳುವುದರಿಂದ ನಾನು ಹೇಳುವ ವಿಷಯ ನಿಮಗೆ ಚೆನ್ನಾಗಿ ಅರ್ಥವಾಗುತ್ತದೆ. ಪೂರ್ವದಲ್ಲಿ ಎಲ್ಲರೂ ಮಲ ವಿಸರ್ಜನೆಗೆ ದೂರವಾಗಿರುವ ಬಯಲು ಪ್ರಾಂತದೊಳಗೆ ಹೋಗುತ್ತಿದ್ದರು. ನಿವಾಸಕ್ಕೆ ಸ್ವಲ್ಪ ದೂರವಾಗಿರುವ ಬಯಲು ಪ್ರಾಂತದಲ್ಲಿ ಗಿಡದ ಮರೆಯಲ್ಲಿಯೋ, ಗುಣಿಗಳ ಮರೆಯಲ್ಲಿಯೋ ಕುಳಿತುಕೊಂಡು ತಮ್ಮ ಕೆಲಸ ಮುಗಿಸಿಕೊಂಡು ಬರುತ್ತಿದ್ದರು. ಹಾಗೆ ಹೋಗುವಾಗ ಮಲವಿಸರ್ಜನೆ ಮುಗಿದ ನಂತರ ಶುಭ್ರ ಮಾಡಿಕೊಳ್ಳುವುದಕ್ಕೆ ದೊಡ್ಡ ಚೆಂಬುಗಳಿಂದಲೋ, ತಂಬಿಗೆಯಿಂದಲೋ, ಡಬ್ಬಾಗಳಿಂದಲೋ ಲೀಟರ್ ನಿಂದ

ಎರಡು ಲೀಟರ್‌ಗಳ ವರೆಗು ನೀರನ್ನು ತೆಗೆದುಕೊಂಡು ಹೋಗುತ್ತಿದ್ದರು. ಕೈಲಾದವರು ನಡೆದುಕೊಂಡು ಹೋಗುತ್ತಿದ್ದರು, ನಡೆಯುವುದಕ್ಕೆ ಕೈಲಾಗದವರು ಕುದುರೆಯ ಮೇಲೋ ಅಥವಾ ಚಿಕ್ಕದಾದ ಒಂಟಿ ಎತ್ತಿನ ಗಾಡಿಯ ಮೇಲೆಯೋ ಹೋಗಿ ಬರುತ್ತಿದ್ದರು. ಅದು ಎಲ್ಲರಿಗೂ ತಿಳಿಯುವ ಕೆಲಸವಲ್ಲ, ತಿಳಿಸಬೇಕಾದ ಅಗತ್ಯವು ಇಲ್ಲ. ಆದ್ದರಿಂದ ಯಾರ ಉಪಾಯಕ್ಕೆ ತಕ್ಕಂತೆ ಅವರು ಹೋಗಿ ಬರುತ್ತಿದ್ದರು, ಮಾಡುವ ಕೆಲಸವನ್ನನುಸರಿಸಿ ಕೆಲವು ಕೆಲಸಗಳಿಗೆ ಪ್ರಚಾರ ಆರ್ಭಟಗಳು ಅಗತ್ಯ ಇರುವುದಿಲ್ಲ. ಪೂರ್ವದಲ್ಲಿ ಸೌಕರ್ಯಗಳು ಇಲ್ಲದ ಕಾಲದಲ್ಲಿ ಹಾಗೆ ಹೋಗುತ್ತಿದ್ದರು ಈದಿನ ಎಲ್ಲಾ ಸೌಕರ್ಯಗಳಿರುವ ಕಾಲದಲ್ಲಿ ಮನೆಗಳಲ್ಲಾಗಲೀ, ಮನೆಯ ಸಮೀಪದಲ್ಲಾಗಲಿ ಚಿಕ್ಕ ರೂಮುಗಳನ್ನು ಕಟ್ಟಿಸಿಕೊಂಡು ಅದರೊಳಗೆ ಹೋಗಿ ಮಲ ವಿಸರ್ಜನೆ ಮಾಡಿಬರುವುದು ಎಲ್ಲರಿಗೂ ತಿಳಿದ ವಿಷಯವೇ.

ಈ ದಿನವಾಗಲಿ, ಪೂರ್ವದಲ್ಲಾಗಲಿ ಮಲ ವಿಸರ್ಜನೆಗೆ ಹೋಗುವ ವರು ಇತರರಿಗೆ ತಿಳಿಯುವ ಹಾಗೆ ಡೋಲು, ಮೇಳಗಳನ್ನು ಬಾರಿಸಿಕೊಳ್ಳುತ್ತಾ ಮೆರೆವಣಿಗೆಯಾಗಿ ಎಲ್ಲರಿಗೂ ತಿಳಿಯುವ ವಿಧವಾಗಿ ಯಾರೂ ಹೋಗುವುದಿಲ್ಲ. ಅದು ಇತರರಿಗೆ ತಿಳಿಯಬೇಕಾದ ವಿಷಯವು ಅಲ್ಲ. ಆದರೆ ಈ ದಿನ ದೊಡ್ಡ ಮೆರವಣಿಗೆಗಳಿಂದ ಬಹಿರ್ಭೂಮಿಗೆ ಹೋಗುವುದು ಯಾರಾದರೂ ಮಾಡಿದರೆ ಅವನದು ತಿಳುವಳಿಕೆ ಇಲ್ಲದ ಕೆಲಸವೆಂದು ಹೇಳಬಹುದು. ಹಾಗೇ ವಿನಾಯಕನ ಮೆರವಣಿಗೆ ಮಾಡಬೇಕೇ ಹೊರತು, ದೇವರು ಎಂದು ಮಾಡಿದರೆ ಅದು ದೊಡ್ಡಿಗೆ (ಮಲ ವಿಸರ್ಜನೆಗೆ) ಮೆರೆವಣಿಗೆಯೊಂದಿಗೆ ಹೋದಂತಾಗುತ್ತದೆ. ವಿನಾಯಕ ವಿಸರ್ಜನೆ ದಿನ ಆ ವಿಷಯವನ್ನು ಅಂದರೇ ವಿಸರ್ಜನೆಯನ್ನು ಎಲ್ಲರಿಗೂ ತಿಳಿಸಬೇಕು. ಆದ್ದರಿಂದ ವಿನಾಯಕನನ್ನು ಮೆರವಣಿಗೆಯೊಂದಿಗೆ ತೆಗೆದುಕೊಂಡು ಹೋಗಬೇಕಾಗಿದ್ದೆ. ಅಷ್ಟೇ ಹೊರತು ವಿನಾಯಕನನ್ನು ದೇವರು ಎಂದು ಅಂದುಕೊಳ್ಳುವುದು ಮಲ ವಿಸರ್ಜನೆ ಪವಿತ್ರ ಕಾರ್ಯ ಎನ್ನು ವಂತಿರುತ್ತದೆ. ಮಲ ವಿಸರ್ಜನೆಗಿಂತ ಮೊದಲು ಕುಂಡಿ ಪೂಜೆ ಮಾಡಬೇಕೆನ್ನು ವಂತಿರುತ್ತದೆ. ಆದ್ದರಿಂದ ಯಾವ ಕಾರ್ಯವನ್ನು ಯಾವ ಭಾವನೆಯಿಂದ ಮಾಡಬೇಕೊ ಆ ಭಾವನೆಯಿಂದಲೇ ಮಾಡಬೇಕಾಗಲಿ, ಇನ್ನೊಂದು

ಭಾವನೆಯಿಂದ ಮಾಡಿದರೆ ಅದು ವಿಡ್ಡೂರವಾಗಿರುತ್ತದೆ. ಪೂರ್ವದಲ್ಲಿ ವಿನಾಯಕ ನಿಮಜ್ಜನೆ ಇದೆ, ವಿನಾಯಕನ ಮೆರವಣಿಗೆ ಇದೆ. ಆದರೆ ಭಕ್ತಿ ಭಾವನೆಯಿಂದ ವಿನಾಯಕ ಪೂಜೆಗಳು ಮಾಡುವುದಾಗಲೀ, ವಿನಾಯಕನನ್ನು ದೇವರು ಎನ್ನುವುದಾಗಲೀ ಯಾವುದೂ ಇಲ್ಲ. ಅದೇ ವಿಷಯವನ್ನೇ ನಾನು ಭಾವಯುಕ್ತ ವಾಗಿ ಹೇಳಿದ್ದೇನೆ ಹೊರತು, ವಿನಾಯಕ ನಿಮಜ್ಜನ ಮಾಡಬಾರದೆಂದು ನಾನು ಎಂದೂ ಹೇಳಲಿಲ್ಲ. ವಿನಾಯಕನು ದೇವರು ಎಂದರೇ ಕುಂಡಿಗೆ ಪೂಜೆ ಮಾಡಬೇಕು ಎನ್ನುವಂತಿರುತ್ತದೆ.

ವಿನಾಯಕ ನಿಮಜ್ಜನವನ್ನು ಕುರಿತು ಪೂರ್ತಿ ವಿವರದೊಳಗೆ ಹೋದರೆ ನಾಯಕ ಎಂದರೇ ಒಂದು ಗುಂಪಿಗೆ ಅಧಿಪತಿ ಅಥವಾ ಸ್ವಲ್ಪಜನರಿಗೆ ದೊಡ್ಡದಾಗಿ ಇರುವವನು ಎಂದು ಹೇಳಬಹುದು. ನಾಯಕ ಬಹಳ ದೊಡ್ಡವನು ಎಂದು ವಿಶೇಷತೆಯನ್ನು ತೋರಿಸುವುದಕ್ಕೆ "ವಿ" ಎಂಬ ಅಕ್ಷರವನ್ನು ಸೇರಿಸಿ ವಿನಾಯಕನು ಎಂದು ಹೇಳಬಹುದು. ನಾಯಕನಾಗಲೀ, ದೊಡ್ಡ ನಾಯಕ (ವಿನಾಯಕ) ನಾಗಲೀ ಮನುಷ್ಯರಲ್ಲಿಯೇ ಇರುತ್ತಾರೆ. ನಾಯಕನಾಗಿ ಕೆಲವರಿರಬಹುದು. ವಿಶೇಷವಾದ ನಾಯಕತ್ವವನ್ನು ಹೊಂದಿದವರು ಅಪರೂಪ ವಾಗಿರುತ್ತಾರೆ. ಅಂದರೇ ನಾಯಕರಲ್ಲಿಯೇ ದೊಡ್ಡ ನಾಯಕರನ್ನು **ವಿನಾಯಕರು** ಅನ್ನುತ್ತಿದ್ದರು. ಸಮಾಜದಲ್ಲಿ ಎಷ್ಟೋ ಮಂದಿ ಮನುಷ್ಯರಿಗೆ ಹಿರಿಯನಾಗಿರುವ ವನನ್ನು ನಾಯಕನು ಎನ್ನುವುದಲ್ಲದೆ ವಿನಾಯಕನು ಎಂದು ಕರೆಯಬಹುದು. ಪ್ರಜೆಗಳು ಬಲಹೀನರಾಗಿರುವಾಗ ಅವರಿಗಿಂತ ಹೆಚ್ಚಿನ ಧನ, ಅಧಿಕಾರ ಎರಡೂ ಇದ್ದು ಪ್ರಜೆಗಳನ್ನು ಭಯಪಡಿಸಿ ತನ್ನ ಮಾತು ಕೇಳುವ ಹಾಗೆ ಮಾಡಿಕೊಳ್ಳುವವನನ್ನು ವಿನಾಯಕನು ಎಂದು ಕರೆಯಬಹುದು. ಪೂರ್ವದಲ್ಲಿ ಕೃತಯುಗದಲ್ಲಿ ಜ್ಞಾನ ಹೊಂದಿದ ಮನುಷ್ಯರು ಇರುವುದರಿಂದ ಬಡವ ಶ್ರೀಮಂತುಂಬ ಭೇದವಿಲ್ಲದೆ ಸಮಾನವಾಗಿ ಇರುತ್ತಿದ್ದರು. ಹಾಗೇ ತ್ರೇತಾಯುಗ ದಲ್ಲಿ (ತ್ರೈತಾಯುಗದಲ್ಲಿ) ಸ್ವಲ್ಪ ಪಾಪಭೀತಿ ಇರುವುದರಿಂದ ಮನುಷ್ಯರಲ್ಲಿ ಕೆಲವರು ಧನಬಲ, ಅಧಿಕಾರಬಲ ಹೊಂದಿದ್ದರೂ ಅದನ್ನು ಹೊರಗಿನ ಪ್ರಜೆಗಳ ಮೇಲೆ ಉಪಯೋಗಿಸದೆ ಪ್ರಜೆಗಳೊಂದಿಗೆ ನಾಯಕರು ಬೆರೆತು ಹೋಗುತ್ತಿದ್ದರು,

ಆದ್ದರಿಂದ ತ್ರೇತಾಯುಗದಲ್ಲಿ ಕೂಡಾ ಬಡವ ಶ್ರೀಮಂತಾ, ಚಿಕ್ಕವರು ದೊಡ್ಡವರು, ಬಲಹೀನನು ಬಲವಂತನು ಎಂಬ ವ್ಯತ್ಯಾಸಗಳು ಇಲ್ಲದಹಾಗೆ ಕಳೆದುಹೋಗಿದೆ.

ತ್ರೇತಾಯುಗ ಕಳೆದುಹೋದ ನಂತರ ದ್ವಾಪರಯುಗದಲ್ಲಿ ಮನುಷ್ಯರಲ್ಲಿ ಅಜ್ಞಾನ ಹೆಚ್ಚು ಬೆಳೆಯುತ್ತಾ ಬಂದಿದೆ. ಆಗ ಮನುಷ್ಯರಲ್ಲಿ ಬಡವ ಶ್ರೀಮಂತ, ಬಲಹೀನನು ಬಲವಂತನು ಎಂಬ ವ್ಯತ್ಯಾಸಗಳು ಬಂದಿವೆ. ಆಗ ಪ್ರಜೆಗಳಲ್ಲಿ ನಾಯಕರು ಕೆಲವರು, ವಿನಾಯಕರು ಕೆಲವರು ತಯಾರಾಗಿದ್ದಾರೆ. ಆಗಿನ ಕಾಲದಲ್ಲಿ ಧನ ಬಲವಿರುವವರು ಧನವಿಲ್ಲದ ಬಡವರಿಗೆ ನಾಯಕರಾಗಿದ್ದು ಅವರ ಮೇಲೆ ಅಧಿಕಾರ ಚಲಾಯಿಸುತ್ತಾ ಇರುತ್ತಿದ್ದರು. ಧನವಿರುವವರು ಧನ ಇಲ್ಲದವನನ್ನು ಯಾವುದೊ ಒಂದು ವಿಧವಾಗಿ ತೊಂದರೆಗಳಿಗೀಡು ಮಾಡುತ್ತಿದ್ದರು. ಅಂತಹವನ ಕೈಯಲ್ಲಿ ಹಣ ಇಲ್ಲದವರು ಮಾತ್ರವೇ ಬಾಧೆಪಡುತ್ತಿದ್ದರು. ಹಣಕ್ಕಾಗಿ ಅವರು ಹೇಳಿದಹಾಗೆ ಕೇಳುತ್ತಿದ್ದರು. ಹೀಗೆ ಎಷ್ಟೋಜನ ಅಮಾಯಕರು ಕೆಲವು ನಾಯಕರ ಕೈಯಲ್ಲಿ ಅನೇಕ ಕಷ್ಟಗಳು ಪಡುತ್ತಿದ್ದರು. ಧನವಂತನು ಬಡವನ ಅವಶ್ಯ ನಿಮಿತ್ತ ಸ್ವಲ್ಪ ಹಣಕೊಟ್ಟು ಬಡ್ಡಿ ಎಂಬ ಹೆಸರಿನಿಂದ ಅವನನ್ನು ಸೊಳ್ಳೆ, ತಿಗಣಿಗಳಂತೆ ಪೀಡಿಸುತ್ತಿದ್ದರು. ಹಾಗೆ ನಾಯಕರ ಕೈಯಲ್ಲಿ ಅಮಾಯಕರು ಪೀಡಿಸಲ್ಪಡುತ್ತಿದ್ದರು.

ಸಮಾಜದಲ್ಲಿ ಧನ ಹೊಂದಿದ ನಾಯಕರ ಕೈಯಲ್ಲಿ ಎಷ್ಟೋ ಜನ ಬಡ ಪ್ರಜೆಗಳು ಪೀಡಿಸಲ್ಪಡುತ್ತಿರುವಾಗ, ನಾಯಕರಾಗಿರುವವರು ಕೂಡಾ ನಾಯಕರಿಗಿಂತಲೂ ದೊಡ್ಡದಾಗಿರುವ ವಿನಾಯಕರ ಕೈಯಲ್ಲಿ ಪೀಡಿಸಲ್ಪಡುತ್ತಿದ್ದರು. ನಾಯಕರ ಹತ್ತಿರ ಧನವಿದ್ದರೂ ಅಧಿಕಾರ ಇರುತ್ತಿರಲಿಲ್ಲ. ಅದೇ ವಿನಾಯಕರ ಹತ್ತಿರವಾದರೆ ಧನ ಮತ್ತು ಅಧಿಕಾರ ಎರಡೂ ಇರುವುದರಿಂದ ಅವರು ನಾಯಕರ ಹತ್ತಿರ ಇರುವ ಧನವನ್ನು ಕೂಡಾ ಕಸಿದುಕೊಳ್ಳುತ್ತಾ, ತಮ್ಮ ಅಧಿಕಾರವನ್ನು ಉಪಯೋಗಿಸಿ ಧನಿಕರಾದ ನಾಯಕರನ್ನು ಕೂಡಾ ಬೆದರಿಸುತ್ತಾ ತಾವು ನಾಯಕರಿಗಿಂತಲೂ ಪ್ರತ್ಯೇಕದವರು ವಿನಾಯಕ ಎನ್ನುವಂತೆ ಪ್ರವರ್ತಿಸುತ್ತಿದ್ದರು. ನಾಯಕರ ಅಧೀನದಲ್ಲಿ ಕೇವಲ ಬಡವರು ಮಾತ್ರವೇ ಇರುವಾಗ, ಅಧಿಕಾರ ಬಲವಿರುವ ವಿನಾಯಕರ ಕೈಯಲ್ಲಿ ಬಡವರು, ಧನಿಕರು

ಇಬ್ಬರೂ ಇರುವುದು ವಿಶೇಷ ಪೂರ್ವದಲ್ಲಿ ಊರಿಗೊಬ್ಬ ನಾಯಕನು ಇರುವಾಗ, ಒಂದು ಜಿಲ್ಲೆಗೆಲ್ಲಾ ಸೇರಿಸಿ ಒಬ್ಬ ವಿನಾಯಕನು ಇರುತ್ತಿದ್ದನೆಂದು ಅಂದು ಕೊಳ್ಳೋಣ. ಇಂದು ಪ್ರತಿ ಊರಿನಲ್ಲಿಯೂ ನಾಯಕರು ಕೆಲವರಿರುವಾಗ, ವಿನಾಯಕ ಒಬ್ಬನಾದರೂ ಇರುವುದು ನಡೆಯುತ್ತಾ ಇದೆ.

ಸಮಾಜದಲ್ಲಿ ಪ್ರಜೆಗಳ ಬಗ್ಗೆ ನಡೆಯುವ ಅಕ್ರಮಗಳನ್ನು, ನಾಯಕರ ವಿನಾಯಕರ ದುಶ್ಚರ್ಯಗಳನ್ನು ಗಮನಿಸುತ್ತಿರುವ ಆಧ್ಯಾತ್ಮಿಕ ತಜ್ಞರು ಪ್ರಜೆಗಳಲ್ಲಿನ ಸಾಮಾಜಿಕ ವಾದಿಗಳನ್ನು ಕರೆದು ನಾಯಕರು ವಿನಾಯಕರು ಮಾಡುವ ದುಶ್ಚರ್ಯಗಳನ್ನು ಪ್ರಜೆಗಳಿಗೆ ತಿಳಿಸಿ, ಪ್ರಜೆಗಳನ್ನು ಚೈತನ್ಯವಂತರನ್ನಾಗಿ ಮಾಡಬೇಕೆಂದು ಸೂಚನೆಗಳನ್ನು ಕೊಟ್ಟಿದ್ದಾರೆ. ಅಂತಹ ಸೂಚನೆಗಳಿಂದ ಸ್ವಲ್ಪ ಮಟ್ಟಿಗೆ ನಾಯಕರ, ವಿನಾಯಕರ ದೌರ್ಜನ್ಯಗಳನ್ನು ತಡೆಗಟ್ಟಬಹುದೆಂದು ತಿಳಿಸಿದ್ದಾರೆ. ಆಧ್ಯಾತ್ಮಿಕ ತಜ್ಞರು ಹೇಳಿದ ಹಾಗೆ ಸಾಮಾಜಿಕ ವಾದಿಗಳು ಮಾಡಲು ಆರಂಭ ಮಾಡಿದ್ದಾರೆ. ಅದರಿಂದ ಅಂದಿನ ಕಾಲದಲ್ಲಿ ಅಂದರೇ ದ್ವಾಪರಯುಗ ದಲ್ಲಿ ಸ್ವಲ್ಪಮಟ್ಟಿಗೆ ಪ್ರಜೆಗಳಲ್ಲಿ ಚೈತನ್ಯ ಬಂದಿದೆ. ನಾಯಕರ, ವಿನಾಯಕರ ದುಶ್ಚರ್ಯಗಳು ಕಡಿಮೆಯಾಗಿವೆ. ನಂತರ ಕಾಲ ಕಳೆದಂತೆಲ್ಲ ಈ ದಿನ ಕಲಿಯುಗದಲ್ಲಿ ನಾಯಕರ, ವಿನಾಯಕರ ದೌರ್ಜನ್ಯಗಳು ಪ್ರಜೆಗಳ ಮೇಲೆ ಬೆಳೆದು ಹೋಗಿವೆ. ಆದರೆ ಪೂರ್ವದಲ್ಲಿ ಆಧ್ಯಾತ್ಮಿಕ ತಜ್ಞರು ಸೂಚಿಸಿದ ಕಾರ್ಯಗಳು ಇಂದು ಸಮಾಜದಲ್ಲಿ ಉಳಿದಿದ್ದರೂ, ಪ್ರಜೆಗಳಿಗೆ ಅವುಗಳ ಭಾವನೆ ತಿಳಿಯದೆ ಹೋಗಿರುವುದರಿಂದ ನಾಯಕರಿಗು, ವಿನಾಯಕರಿಗು ಹದ್ದು, ಹತೋಟಿ ಇಲ್ಲದ ಹಾಗೆ ಹೋಗಿದೆ.

ಪೂರ್ವದಲ್ಲಿ ಆಧ್ಯಾತ್ಮಿಕತಜ್ಞರು ಸಾಮಾಜಿಕ ವಾದಿಗಳಿಗೆ ಏನು ಸೂಚನೆಗಳು ಕೊಟ್ಟಿದ್ದಾರೆ. ಅವುಗಳನ್ನು ಹೇಗೆ ಜಾರಿ ಮಾಡಿದ್ದಾರೆ ಎಂಬ ವಿಷಯ ಈಗ ನಾವು ತಿಳಿದುಕೊಳ್ಳಬೇಕಾಗಿದೆ. ಇದು ಯಾವಾಗಲೋ ದ್ವಾಪರ ಯುಗದಲ್ಲಿರುವ ಹಾವಭಾವಗಳ ವಿಷಯಗಳನ್ನು ನಾನು ಈಗ ತಿಳಿಸುತ್ತಿದ್ದೇನೆ. ಅಂದಿನ ವಿಷಯಗಳು ಈಗ ನಿನಗೇಗೆ ತಿಳಿದಿವೆ ಎಂದು ಕೇಳದೇ ನಾನು ಹೇಳುವುದು ಸತ್ಯವೋ ಅಲ್ಲವೋ ಆಲೋಚಿಸಿ ನೋಡಿಕೊಳ್ಳಿರಿ. ಅಂದಿನ

ರಹಸ್ಯಗಳನ್ನು ಇಂದು ನಾನು ಬಿಚ್ಚಿ ಹೇಳುವುದರಿಂದ ಕೆಲವರಿಗೆ ಅಂದರೇ ನಾಯಕರಿಗು, ವಿನಾಯಕರಿಗು ನನ್ನ ಮೇಲೆ ಕೋಪ ಬರಬಹುದು. ಅವರ ಕೋಪದಿಂದ ನನ್ನನ್ನು ಕೂಡಾ ತೊಂದರೆಗೀಡು ಮಾಡಲು ನಾವು ಜ್ಞಾನಿಗಳು ಅಂದುಕೊಳ್ಳುವ ಕೆಲವರನ್ನು ನನಗೆ ವಿರುದ್ಧವಾಗಿ ಹುರಿದುಂಬಿಸಿ ನನ್ನ ಮೇಲೆ ದುಷ್ಪ್ರಚಾರ ಮಾಡಬಹುದು. ಆದರೂ ಫರವಾಗಿಲ್ಲ. ನಾನು ಹೇಳುವುದು ಶ್ರದ್ಧೆಯಿಂದ ಕೇಳಿರಿ.

ಸಾಧಾರಣ ಮನುಷ್ಯನಿಗೆ ಎರಡು ಕೈಗಳು ಇರುತ್ತವೆ. ಸಾಮಾನ್ಯ ಮನುಷ್ಯರಲ್ಲಿ ಧನಬಲ ಇರುವವನನ್ನು ಆಧ್ಯಾತ್ಮಿಕ ತಜ್ಞರು ಪ್ರತ್ಯೇಕವಾಗಿ ತೋರಿಸಬೇಕೆಂದು, ಅವರು ಸಾಮಾನ್ಯನಿಗಿಂತಲೂ ಅಧಿಕ ಬಲ ಇರುವವನೆಂದು ನೋಡುತ್ತಲೇ ಕಾಣಿಸುವ ಹಾಗೆ ಮನುಷ್ಯನ ಆಕಾರಕ್ಕೆ ನಾಲ್ಕು ಕೈಗಳನ್ನು ಇಟ್ಟು ತೋರಿಸಿದ್ದಾರೆ. ಇನ್ನೂ ಧನ–ಬಲ ಹೆಚ್ಚಾಗಿ ಇರುವವನನ್ನು ಆರು ಕೈಗಳಾಗಿ ಕೂಡಾ ತೋರಿಸಿದ್ದಾರೆ. ಮನುಷ್ಯನಿಗೆ ಎರಡು ಕೈಗಳು ಹೊರತು ನಾಲ್ಕು, ಆರು ಕೈಗಳು, ಎಲ್ಲಿಯೂ ಇರುವುದಿಲ್ಲ. ಆದರೇ ಬಲದಲ್ಲಿ ಹೆಚ್ಚು ಎನ್ನುವಂತೆ ಹೆಚ್ಚು ಕೈಗಳನ್ನು ಮನುಷ್ಯನ ಬೊಂಬೆಗೆ ಇಟ್ಟು ತೋರಿಸುವುದು ನಡೆದಿದೆ. ಇದೆಲ್ಲವೂ ದ್ವಾಪರ ಯುಗದಲ್ಲಿ ವ್ಯಾಸನಿದ್ದಾಗಲೇ ವ್ಯಾಸನ ಸೂಚನೆ ಮೇರೆಗೆ ನಡೆದಿದೆಯೆಂದು ಸ್ವಲ್ಪ ಆಧಾರದಿಂದ ಹೇಳಬಹುದು. ಧನ ಬಲ ಇರುವವರನ್ನು ನಾಲ್ಕು ಕೈಗಳಿಂದ ತೋರಿಸುವುದು ಆ ದಿನ ನಡೆದಿದೆ. ನಾಲ್ಕು ಕೈಗಳು, ಆರು ಕೈಗಳಿರುವ ಮನುಷ್ಯನ ಬೊಂಬೆಗಳನ್ನು ಊರ ಮೆರವಣಿಗೆಯಲ್ಲಿ ಬೀದಿಗಳನ್ನೆಲ್ಲ ಸುತ್ತಿ ತೋರಿಸುತ್ತಿದ್ದರು. ಹಾಗೆ ಹೆಚ್ಚು ಕೈಗಳಿರುವವರು ಎರಡು ಕೈಗಳಿರುವ ಸಾಮಾನ್ಯರನ್ನು ತಮ್ಮ ಅಧೀನದಲ್ಲಿ ಇಟ್ಟುಕೊಂಡು ಎರಡು ಕೈಗಳ ಪ್ರಜೆಗಳಿಂದ ಬಿಟ್ಟಿಚಾಕರಿ ಮಾಡಿಸಿಕೊಳ್ಳುತ್ತಿದ್ದಾರೆಂದು ತಿಳಿಯುವ ಹಾಗೆ ನಾಲ್ಕು ಕೈಗಳ ಬೊಂಬೆಗಳನ್ನು ಊರೆಲ್ಲಾ ಸುತ್ತಿಸಿ ತೋರಿಸುತ್ತಿದ್ದರು. ಹಾಗೆ ತೋರಿಸುವಾಗ ಆ ಬೊಂಬೆಗಳ ಬಗ್ಗೆ ಯಾರಿಗೂ ಗೌರವಭಾವನೆ ಇರುತ್ತಿರಲಿಲ್ಲ. ಇಂತಹ ದುರ್ಮಾರ್ಗರು ಬೇಗನೆ ಹೋಗಬೇಕೆಂದು ಅಂದುಕೊಳ್ಳುತ್ತಿದ್ದರು. ತೆಂಗಿನಕಾಯಿ ಗಳು ಹೊಡೆಯುವುದಾಗಲೀ, ಪೂಜೆಗಳು ಮಾಡುವುದಾಗಲೀ ಇರುತ್ತಿರಲಿಲ್ಲ. ಅಂತಹ ಬಲಾಢ್ಯರು, ತಮ್ಮನ್ನು ಪೀಡಿಸುವ ಬಲಾಢ್ಯರು, ತಮ್ಮ

ಹಣವನ್ನು ಬಡ್ಡಿರೂಪದಲ್ಲಿ ದೋಚಿಕೊಳ್ಳುವವರು ಈಗಿನಿಂದ ಇಲ್ಲದ ಹಾಗೆ ಹೋಗಬೇ ಕೆಂದು ಮಂಗಳಾರತಿ ಕೊಟ್ಟು ಶವದ ಹತ್ತಿರ ಹೇಳಿದಹಾಗೆ ಗೋವಿಂದಾ ಗೋವಿಂದ ಎಂದು ಹೇಳುತ್ತಿದ್ದರು. ಹಾಗೆ ಆ ಕಾಲದಲ್ಲಿ ನಡೆಯುತ್ತಿತ್ತು. ಆದರೆ ಕಾಲ ಬದಲಾದಂತೆಲ್ಲ ಅದರ ಅರ್ಥ ಹೇಳುವವರು ಇಲ್ಲದಂತೆ ಹೋಗಿ ವೈಶ್ಯ ಎಂಬ ಪದ ವೇಶ್ಯ ಎಂಬ ಪದವಾಗಿ ಬದಲಾಗಿ ಹೋದ ಹಾಗೆ, ಇಂದೂ ಎನ್ನುವ ಪದ ಹಿಂದೂ ಎಂಬ ಪದವಾಗಿ ಬದಲಾಗಿ ಹೋದ ಹಾಗೆ ನಾಲ್ಕು ಕೈಗಳ, ಆರು ಕೈಗಳ ಧನಿಕ ದುರ್ಮಾರ್ಗರು ಪ್ರಜೆಗಳ ಪಾಲಿಗೆ ದೇವತೆಗಳಾಗಿ ಕುಳಿತುಕೊಂಡಿದ್ದಾರೆ.

ದ್ವಾಪರ ಯುಗದಿಂದ ಇರುವ ಆಚರಣೆ ಇಂದಿಗೂ ಇದ್ದರೂ ಆಗಿನ ಅರ್ಥ ಇಲ್ಲದಹಾಗೆ ಹೋಗಿದೆ. ಆಗ ಕೆಟ್ಟವರಂತೆ ತೋರಿಸಲ್ಪಡುತ್ತಿದ್ದ ಬೊಂಬೆಗಳನ್ನು ಈ ದಿನ ದೇವತೆಗಳ ಹಾಗೆ ತೋರಿಸುತ್ತಿದ್ದಾರೆ. ಬಲವಂತರಾದ ಧನಿಕರು ಪ್ರಜೆಗಳನ್ನು ವೇಧಿಸುವವರು, ಬಾಧಿಸುವವರು ಎನ್ನುವಂತೆ ಗುರುತಿಗಾಗಿ ಅವರಿಗಿರುವ ನಾಲ್ಕು ಕೈಗಳಿಗು ನಾಲ್ಕು ಹಿಂಸೆಗೆ ನೆಲೆಯಾದ ಆಯುಧಗಳನ್ನು ಇಟ್ಟು ತೋರಿಸಿದ್ದಾರೆ. ಇವರಿಂದಲೇ ನೀವು ಹಿಂಸಿಸಲ್ಪಡುತ್ತೀರ ಎನ್ನುವಹಾಗೆ ಕೈಗಳಲ್ಲಿ ಆಯುಧಗಳನ್ನು ಇಟ್ಟು ತೋರಿಸಿದರೂ ಈ ದಿನ ಅವರು ದೇವತೆಗಳಾಗಿಯೇ ಭಾವಿಸಲ್ಪಡುತ್ತಿದ್ದಾರೆ. ಹಾಗೆ ಮನುಷ್ಯರಲ್ಲಿ ಭಾವನೆ ಬದಲಾಗಿಹೋಗಿದೆ. ಪೂರ್ವದಲ್ಲಿ ಮೆರವಣಿಗೆ ಸಮಯದಲ್ಲಿ ನಾಲ್ಕು ಕೈಗಳ ಬೊಂಬೆ ಪಕ್ಕದಲ್ಲಿಯೇ ಒಬ್ಬ ಜ್ಞಾನಿ ಅಥವಾ ಆಧ್ಯಾತ್ಮಿಕ ತಜ್ಞರಿದ್ದು ಆ ಬೊಂಬೆಗೆ ಅರ್ಥ ಹೇಳುತ್ತಾ ನಿನ್ನ ಪೀಡೆ ಇಲ್ಲಿಗೆ ಕೊನೆಯಾಗಿ ಹೋಗಬೇಕೆಂದು ಮಂಗಳಾರತಿ ಕೊಟ್ಟು ಶವಕ್ಕೆ ಹೇಳಿದಹಾಗೆ ಗೋವಿಂದಾ ಗೋವಿಂದ ಎಂದು ಜೋರಾಗಿ ಹೇಳುತ್ತಾ, ಎಲ್ಲರಿಂದ ಹೇಳಿಸುತ್ತಿದ್ದರು. ಹಾಗೆ ಒಂದು ಊರಿನಲ್ಲಿ ಮೆರವಣಿಗೆ ನಡೆಯುತ್ತಿರುವಾಗ ಪ್ರತಿ ಮನೆಗು ಪ್ರತಿ ಬಜಾರಿಗು, ಪ್ರತಿ ಬೀದಿಗು ಆ ಬೊಂಬೆಯನ್ನು ತೆಗೆದುಕೊಂಡು ಹೋಗಿ ಧನವಂತರ ಹತ್ತಿರ ಸೇರಬೇಡಿರಿ ಎಂದು ಹೇಳುತ್ತಾ ಮಂಗಳ ಹಾರತಿ ಕೊಟ್ಟು ಗೋವಿಂದಾ ಗೋವಿಂದ ಹೇಳಿಸುತ್ತಿದ್ದರು. ಆ ದಿನ ಪ್ರಜೆಗಳಲ್ಲಿ ಆ ವಿಧವಾದ ಭಾವನೆಯನ್ನು ಜ್ಞಾನಿಗಳು ಉಂಟುಮಾಡಿದರೆ, ಈ ದಿನ ಅಂತಹ ಮೆರವಣಿಗೆಗಳೇ ಇದ್ದರೂ, ಮೆರವಣಿಗೆ

ಮಾಡುವ ಬೊಂಬೆಯ ಪಕ್ಕದಲ್ಲಿ ಬ್ರಾಹ್ಮಣರು ಇರುತ್ತಾ, ಆ ಬೊಂಬೆಗಳನ್ನು ದೇವತೆಗಳಂತೆ ಚಿತ್ರಿಸಿ ಬೊಂಬೆಗಳ ಬಗ್ಗೆ ಭಕ್ತಿ ಭಾವನೆಯನ್ನು ಉಂಟುಮಾಡಿ ದ್ವಾಪರಯುಗದಲ್ಲಿನ ಭಾವನೆಯನ್ನು, ಅರ್ಥವನ್ನು ಸ್ವಲ್ಪವೂ ಇಲ್ಲದಂತೆ ಮಾಡಿದ್ದಾರೆ.

ಅಧಿಕ ಕೈಗಳು ಇರುವ ಬೊಂಬೆ ಪುರುಷನಿಗೇ ಅಲ್ಲದೇ ಈ ದಿನ ಸ್ತ್ರೀಯರ ಬೊಂಬೆಗಳು ಕೂಡಾ ತಯಾರಾಗಿವೆ. ದ್ವಾಪರ ಯುಗದಲ್ಲಿ ಆಧ್ಯಾತ್ಮಿಕ ತಜ್ಞರಾದ ಜ್ಞಾನಿಗಳು ಅರ್ಥದಿಂದ ಕೂಡಿಕೊಂಡ ಕೆಲಸ ಮಾಡಿದರೆ, ಈ ದಿನ ಅಜ್ಞಾನ ಬೆಳೆದುಹೋಗಿ ಯಾವುದು ಒಳ್ಳೆಯ ಕೆಲಸ, ಯಾವುದು ಕೆಟ್ಟ ಕೆಲಸವೆಂದು ಆಲೋಚಿಸದೆ ಒಳ್ಳೆಯ ಕೆಲಸವನ್ನು ಬಿಟ್ಟು ಕೆಟ್ಟ ಕೆಲಸವನ್ನೇ ಒಳ್ಳೆಯ ಕೆಲಸವಾಗಿ ಆಚರಿಸುತ್ತಿದ್ದಾರೆ. ಪೂರ್ವದಲ್ಲಿ ಈ ದಿನ ಇರುವ ಅಧಿಕ ಕೈಗಳಿರುವ ಬೊಂಬೆಗಳು ಇಲ್ಲ ಆದರೆ, ಹೆಚ್ಚು ಕೈಗಳಿರುವ ಗಂಡು ಪ್ರತಿಮೆ ಇರುತ್ತಿತ್ತು. ಅದನ್ನು ಭೈರವ ಎಂದು ಕರೆಯುತ್ತಿದ್ದರು. ಭೈರವನು ಎಂಬ ಪದದಲ್ಲಿ ಕೂಡಾ ವಿಶೇಷ ಅರ್ಥವಿದೆ. ರವನು ಎಂದರೇ ನಾಶ ಮಾಡುವವನು ಎಂದು ಅರ್ಥ. 'ಭೈ' ಎಂದರೇ ಹತ್ತಿರವಾಗಿ ಇರುವವನು ಅಥವಾ ಪಕ್ಕದಲ್ಲಿಯೇ ಇರುವವನು ಎಂದು ಅರ್ಥ. ಅದರ ಪ್ರಕಾರ ನಿನ್ನ ಪಕ್ಕದಲ್ಲಿಯೇ ಧನಿಕನ ರೂಪದಲ್ಲಿ ನಿನ್ನನ್ನು ನಾಶ ಮಾಡುವವನು ಇದ್ದಾನೆ ಎಂದು ಹೇಳುವುದಾಗಿದೆ. ಒಬ್ಬ ಇಲ್ಲದವನಿಗೆ ಇರುವವನು ಧನವನ್ನು (ಹಣ) ಕೊಟ್ಟಿದ್ದಾನೆ ಎಂದರೇ ಆಗಿನಿಂದ ಇರುವವನು ಇಲ್ಲದವನನ್ನು ಪೀಡಿಸುವುದು ಪ್ರಾರಂಭ ಮಾಡಿದ ಹಾಗೇ ಎಂದು ಹೇಳಬಹುದು. ಆದ್ದರಿಂದ ಧನವಿರುವವನನ್ನು ಹೆಚ್ಚು ಬಲವಂತನೆಂದು ತಿಳಿಯುವ ಹಾಗೆ ಹೆಚ್ಚು ಕೈಗಳನ್ನು ಇಟ್ಟು ತೋರಿಸುವುದೇ ಅಲ್ಲದೆ ಆ ಬೊಂಬೆಗೆ ಭೈರವನೆಂದು ಹೆಸರು ಇಡುವುದು ಕೂಡಾ ನಡೆದಿದೆ. ಈ ವಿಧಾನದ ಪ್ರಕಾರ ನೀವು ಧನವಿರುವವರಿಂದ ನಿಮ್ಮ ಧನವನ್ನು ಕಳೆದುಕೊಳ್ಳಲಿಲ್ಲವಾ! ನೀವು ಸಂಪಾದಿಸಿರುವುದೆಲ್ಲಾ ಬಡ್ಡೀ ರೂಪದಲ್ಲಿ ಅವರಿಗೆ ಸಮರ್ಪಿಸಿಕೊಳ್ಳುತ್ತಾ ಬರಲಿಲ್ಲವಾ! ಆದರೂ ಆ ಸಾಲ ತೀರದೆ ಅವರ ಬಾಧೆ ಮುಗಿದು ಹೋಗದಹಾಗೆ ಇರುವವರು ಸಮಾಜದಲ್ಲಿ ಎಷ್ಟೋಜನ ಇದ್ದಾರೆ.

ಅಮಾಯಕ ಬಲಹೀನರನ್ನು ಪೀಡಿಸುವ ಹೆಚ್ಚಿನ ಕೈಗಳ ಬಲಾಢ್ಯರಾಗಿ ನಿಮ್ಮಗೆ ಕಾಣಿಸುತ್ತಿದ್ದಾರೆ ಅಲ್ಲವೇ!

ಸಮಾಜದಲ್ಲಿ ಧನಬಲ ಇರುವವರನ್ನು ಹೇಗೆ ಹೋಲಿಸಿ ತೋರಿಸಿದ್ದಾರೋ ತಿಳಿದಿದೆ ಅಲ್ಲವೇ! ಹಾಗೆಯೇ ಧನ ಬಲ, ಅಧಿಕಾರ ಬಲ ಇರುವವರನ್ನು ಕೂಡಾ ಇನ್ನೊಂದು ವಿಧವಾಗಿ ಹೋಲಿಸಿ ತೋರಿಸುವುದು ನಡೆದಿದೆ. ಧನಬಲ ಇರುವವರನ್ನು ಭೈರವನನ್ನಾಗಿ ತೋರಿಸಿದರೇ, ಅಧಿಕಾರ ಬಲ ಇರುವವನನ್ನು ಇನ್ನೂ ಪ್ರತ್ಯೇಕವಾಗಿ ತೋರಿಸುವುದು ನಡೆದಿದೆ. ಅಧಿಕಾರ ಬಲ, ಧನಬಲಕ್ಕಿಂತಲೂ ದೊಡ್ಡದು, ಎಷ್ಟು ಧನ ಇರುವವನನ್ನಾದರೂ ಅಧಿಕಾರದಿಂದ ಅಡಗಿಸಿ ಹಾಕಬಹುದು. ಬಂಧಿಸಿ ಜೈಲಿನಲ್ಲಿ ಹಾಕಬಹುದು. ಧನ ಬಲಕ್ಕಿಂತಲೂ ಅಧಿಕಾರಕ್ಕೇ ಹೆಚ್ಚಿನ ಬಲ ಇರುವುದರಿಂದ ಈ ದಿನ ಧನ ಇರುವವರೆಲ್ಲರೂ ಅಧಿಕಾರಕ್ಕಾಗಿ ಪರೆದಾಡುತ್ತಿದ್ದಾರೆ. ಅಧಿಕಾರವನ್ನು ಹೆಚ್ಚು ಬಲವಿರುವ ಆನೆಗೆ ಸಮಾನವಾಗಿ ಹೋಲಿಸಿದ್ದಾರೆ. ಆನೆಗೆ ನಾಲ್ಕು ಕಾಲುಗಳಿದ್ದರೂ ಕಾಲುಗಳಿಂದ ನಡೆಯುವುದು ಹೊರತು ಏನೂ ಮಾಡಲಾ ರದು. ಆದರೆ ಆನೆಗೆ ನಾಲ್ಕು ಕಾಲುಗಳೇ ಅಲ್ಲದೆ ಪ್ರತ್ಯೇಕವಾಗಿ ಸೊಂಡಿಲು ಇರುವುದರಿಂದ ಎಲ್ಲಾ ಕೆಲಸಗಳನ್ನು ಸೊಂಡಿಲಿನಿಂದಲೇ ಮಾಡುತ್ತಿದೆ. ನೀರು ಕುಡಿಯುವುದರಿಂದ ಹಿಡಿದು ಆಹಾರವನ್ನು ತೆಗೆದುಕೊಂಡು ಬಾಯಿಯಲ್ಲಿ ಇಟ್ಟುಕೊಳ್ಳುವವರೆಗು ಉಳಿದ ಕೆಲಸಗಳೆಲ್ಲ ಆನೆ ಸೊಂಡಿಲಿನಿಂದಲೇ ಮಾಡಬಲ್ಲದು. ಆದ್ದರಿಂದ ಪ್ರತ್ಯೇಕವಾದ ಕೈಯಂತೆ ಆನೆ ಸೊಂಡಿಲು ಇದೆ.

ಮನುಷ್ಯನಿಗೆ ಧನಕ್ಕಿಂತ ಅಧಿಕಾರ ದೊಡ್ಡದು ಎನ್ನುವಹಾಗೆ, ಆನೆಗೆ ನಾಲ್ಕು ಕಾಲುಗಳಿಗಿಂತಲೂ ಸೊಂಡಿಲೇ ಹೆಚ್ಚು ಬಲವಾದುದಾಗಿದೆ. ಆದ್ದರಿಂದ ಪೂರ್ವದಲ್ಲಿ ಆಧ್ಯಾತ್ಮಿಕತಜ್ಞರಾದವರು ಧನಬಲ ಇರುವವರನ್ನು ನಾಲ್ಕು ಕೈಗಳ ಮನುಷ್ಯನನ್ನಾಗಿ ತೋರಿಸಿದರೆ, ಅಧಿಕಾರಬಲ ಇರುವವನನ್ನು ನಾಲ್ಕು ಕೈಗಳ ಮನುಷ್ಯನಿಗೆ ಆನೆ ಸೊಂಡಿಲನ್ನಿಟ್ಟು ಇದು ಪ್ರತ್ಯೇಕವಾದ ಅಧಿಕಾರ ಬಲ ಎಂದು ಹೇಳುವುದಾಗಿದೆ. ಆ ವಿಧವಾಗಿ ತಯಾರಾಗಿರುವುದೇ ವಿನಾಯಕ ಬೊಂಬೆ. ವಿನಾಯಕನ ಬೊಂಬೆ ಆಕಾರ ದ್ವಾಪರ ಯುಗಕ್ಕಿಂತ ಮೊದಲು

ಇಲ್ಲ. ದ್ವಾಪರ ಯುಗದಲ್ಲಿ ವ್ಯಾಸನ ಸೃಷ್ಠಿಯೇ ವಿನಾಯಕನು. ಆದ್ದರಿಂದ ಬಾಲ ವಿನಾಯಕನು ವ್ಯಾಸನ ಹತ್ತಿರ ವಿದ್ಯೆ ಕಲಿತಂತೆ ಚಿತ್ರವನ್ನು ಅಲ್ಲಲ್ಲಿ ನೋಡಬಹುದು. ವಿನಾಯಕನನ್ನು ಸೃಷ್ಠಿಸಿದ ವ್ಯಾಸನು ತನ್ನ ಶಿವ ಪುರಾಣದಲ್ಲಿ ಪಾರ್ವತಿಗೆ ವಿನಾಯಕನು ಹುಟ್ಟಿದಂತೆ ಬರೆದಿದ್ದಾರೆ. ಅದೂ ಪತಿಯಾದ ಶಿವನಿಗೆ ತಿಳಿಯದಂತೆ ವಿಘ್ನೇಶ್ವರನನ್ನು ಪಾರ್ವತಿ ತಯಾರು ಮಾಡಿದ್ದಾಳೆ ಎಂಬ ಮಾತನ್ನು ಕೂಡಾ ಶಿವ ಪುರಾಣದಲ್ಲಿ ಕೇಳಿದ್ದೇವೆ. ಪತಿಗೆ ತಿಳಿಯದಹಾಗೆ ವಿನಾಯಕನು ಪಾರ್ವತಿಗೆ ಹೇಗೆ ಹುಟ್ಟಿದ್ದಾನೆಂದು ಡೈರೆಕ್ಟರ್ ರಾಮ್‌ಗೋಪಾಲ್ ವರ್ಮ ಪ್ರಶ್ನಿಸುತ್ತಿದ್ದಲ್ಲಿಯೂ ವಿನಾಯಕ ಪುರಾಣವನ್ನು ನಂಬಿದ ನಾವು ವಿಚಕ್ಷಣ ಇಲ್ಲದವರಾಗಿ, ಕೊನೆಗೆ ಪ್ರಶ್ನಿಸಿದ ರಾಮ್‌ಗೋಪಾಲ್ ವರ್ಮನನ್ನೇ ಹುಚ್ಚನೆನ್ನುತ್ತಿದ್ದೇವೆ. ವಾಸ್ತವವಾಗಿ ರಾಮ್‌ಗೋಪಾಲ್ ವರ್ಮ ಕೇಳಿರುವುದು ಸತ್ಯ ಮತ್ತು ಉತ್ತರವಿಲ್ಲದ ಪ್ರಶ್ನೆಯೇ. ವಾಸ್ತವವಾಗಿ ವಿನಾಯಕನು ಹುಟ್ಟಲೂ ಇಲ್ಲ, ಪಾರ್ವತಿ ಹುಟ್ಟಿಸಲೂ ಇಲ್ಲ. ಶಿವನು ತನ್ನ ಮಗನೆಂದು ಒಪ್ಪಿಕೊಳ್ಳಲೂ ಇಲ್ಲ.

ದ್ವಾಪರಯುಗದಲ್ಲಿ ಸಾಟಿಯಿಲ್ಲದ ರಚನಕಾರನಾಗಿ ಇರುವ ವ್ಯಾಸನು ತನ್ನ ಲೇಖನಿಯಿಂದ ಸೃಷ್ಠಿಸಿದಾಗ ತಯಾರಾದವನೇ ವಿನಾಯಕನು. ವ್ಯಾಸನು ಏಕೆ ಹಾಗೆ ಮಾಡಿದ್ದಾನೆ ಎಂದರೇ! ಅಂದಿನ ಕುರುಡು ಸಮಾಜಕ್ಕೆ ಕಣ್ತೆರೆಸಿ ಅಧಿಕಾರ ಬಲವಿರುವವನು ಹೀಗಿರುತ್ತಾನೆಂದು ತೋರಿಸುವುದಕ್ಕೇ ಹಾಗೆ ಮಾಡಿದ್ದಾನೆ. ಆ ಸಮಯದಲ್ಲಿ ಪೂರ್ತಿ ಆಧ್ಯಾತ್ಮಿಕವನ್ನು ತಿಳಿಯದವನಾಗಿದ್ದರೂ, ತಾತ್ವಿಕ ಚಿಂತನೆ ಮೇಲೆ ವ್ಯಾಸನು ಆಸಕ್ತಿ ಹೊಂದಿದ್ದನು. ಆ ದಿನ ಸಾಮಾಜಿಕ ನ್ಯಾಯಕ್ಕಾಗಿ, ಸಮಾಜ ಶ್ರೇಯಸ್ಸಿಗಾಗಿ ಧನವಂತನಿಗೆ ಚಿಹ್ನೆಯಾದ ಭೈರವನನ್ನು, ಧನಬಲಕ್ಕು ಅಧಿಕಾರಬಲಕ್ಕು ಚಿಹ್ನೆಯಾಗಿರುವ ವಿನಾಯಕನನ್ನು ವ್ಯಾಸನೇ ತಯಾರಿ ಮಾಡಿ ತೋರಿಸಿದ್ದಾನೆ. ಭೈರವನಿಗೆ ನಾಲ್ಕು ಕೈಗಳು ಮಾತ್ರವಿರುವಾಗ, ವಿನಾಯಕನಿಗೆ ನಾಲ್ಕು ಕೈಗಳು ಆ ಕೈಗಳಿಗಿಂತಲೂ ಬಲವಾದ ಸೊಂಡಿಲು ಇರುವಹಾಗೆ ಮಾಡಿದ್ದಾನೆ. ಅದರಿಂದ ಧನವಂತನಿಗಿಂತ ಅಧಿಕಾರ ಬಲ ಇರುವವನೇ ದೊಡ್ಡವನೆಂದು ತಿಳಿಯುತ್ತಿದೆ. ಈ ಎರಡು ವಿಧಗಳ ಬೊಂಬೆಗಳು

ಸಹಜವಾಗಿ ಹುಟ್ಟಿರುವವು ಅಲ್ಲದಿದ್ದರೂ, ಪ್ರತ್ಯೇಕ ಉದ್ದೇಶದಿಂದ ಮಾಡಿರುವವೆಂದು ತಿಳಿಯುತ್ತಿದೆ.

ದ್ವಾಪರಯುಗದಲ್ಲಿ ಸಾಮಾಜಿಕ ಶ್ರೇಯಸ್ಸು ಕೋರಿದ ವ್ಯಾಸನು ಭೈರವನ ಮೆರವಣಿಗೆಯನ್ನು ವರ್ಷಕ್ಕೊಂದು ಸಲ ಮಾಡಿಸುತ್ತಿದ್ದನು. ಹಾಗೆಯೇ ವರ್ಷಕ್ಕೊಂದು ಸಲ ವಿನಾಯಕ ಮೆರವಣಿಗೆಯನ್ನು ಮಾಡಿಸುತ್ತಿದ್ದನು. ಹಾಗೆ ಮಾಡಿಸುತ್ತಾ ಅದರಲ್ಲಿನ ಉದ್ದೇಶವನ್ನು ಪ್ರಜೆಗಳಿಗೆ ತಿಳಿಸುವ ಸಲುವಾಗಿ ಒಬ್ಬ ಜ್ಞಾನಿಯನ್ನು ಮೆರವಣಿಗೆಯಲ್ಲಿಟ್ಟು ಆತನಿಂದ ಊರೆಲ್ಲರಿಗೂ ತನ್ನ ಉದ್ದೇಶವನ್ನು ತಿಳಿಸುತ್ತಿದ್ದನು.  ಆ ವಿಧವಾಗಿ ಸಾಮಾಜಿಕ ದುರ್ಮಾರ್ಗವನ್ನು ಇಲ್ಲದಹಾಗೆ ಮಾಡಬೇಕೆಂದು ಪ್ರಯತ್ನ ಮಾಡಿದ್ದಾರೆ. ಆಗ ಅದು ಫಲಿಸಿದೆ. ಆದ್ದರಿಂದ ಧನವಂತರೊಂದಿಗಾಗಲಿ, ಅಧಿಕಾರವಿರುವ ರಾಜಕೀಯ ನಾಯಕರೊಂದಿಗಾಗಲಿ ಪ್ರಜೆಗಳು ಅಪ್ರಮತ್ತವಾಗಿದ್ದು, ಅವರ ಕೈಗೆ ಸಿಕ್ಕಿಕೊಳ್ಳದೆ ತಪ್ಪಿಸಿಕೊಳ್ಳುತ್ತಿದ್ದರು. ದ್ವಾಪರ ಯುಗದಿಂದ ಕಲಿಯುಗಕ್ಕೆ ಕಾಲ ಬದಲಾಗಿದೆ. ಕಾಲದೊಂದಿಗೆ ಮನುಷ್ಯರಲ್ಲಿ ಅಜ್ಞಾನ ಬೆಳೆದಿದೆ. ಆ ದಿನ ಜ್ಞಾನಿಗಳು ತಿಳಿಸಿದ ಭಾವನೆಗಳು ಈಗಿನ ಅಜ್ಞಾನ ಪ್ರಪಂಚದಲ್ಲಿ ಇಲ್ಲದಹಾಗೆ ಹೋಗಿವೆ. ಈ ದಿನ ನಾವು ಜ್ಞಾನಿಗಳು, ನಾವು ಹಿಂದೂ ಧರ್ಮ ರಕ್ಷಕರು ಎನ್ನುವವರೇ ವಿನಾಯಕ ಚವತಿಯನ್ನು ಹತ್ತಿರವಿದ್ದು ಮಾಡುತ್ತಾ ವಿನಾಯಕನನ್ನು ದೇವರೆಂದು ಪೂಜಿಸುತ್ತಿದ್ದಾರೆ. ಅಂದಿಗೂ ಇಂದಿಗೂ ಭಾವನೆ ಬದಲಾದರೂ ನಾನು ಹೇಳಿರುವುದು ಸತ್ಯ ಎನ್ನುವಂತೆ ಕೆಲವು ಆಚರಣೆಗಳು ಇಂದಿಗೂ ಉಳಿದಿವೆ. ನನ್ನ ವಾದನೆಗೆ ಇಂದಿಗೂ ಬಲ ಕೈಗೂಡಿಸುವುದು ವಿನಾಯಕ ನಿಮಜ್ಜನ ಕಾರ್ಯ.

ಆ ದಿನ ಧನವಂತನ ಚಿಹ್ನೆಯಾದ ಭೈರವನನ್ನು, ಧನ ಅಧಿಕಾರ ಬಲಕ್ಕೆ ಚಿಹ್ನೆಯಾದ ವಿನಾಯಕನನ್ನು ತೋರಿಸಿ, ಇಂತಹ ದುರ್ಮಾರ್ಗರು ಸಮಾಜದಲ್ಲಿ ಇರಬಾರದೆಂದು ತಿಳಿಸುವ ಸಲುವಾಗಿ ಮೆರವಣಿಗೆ ಮಾಡಿ ಕೊನೆಯಲ್ಲಿ ಆ ಬೊಂಬೆಗಳನ್ನು ಚೂರುಚೂರಾಗುವಂತೆ ಹೊಡೆದುಹಾಕಿ, ನಾಮ ರೂಪಗಳು ತಿಳಿಯದಂತೆ ನೀರಿನಲ್ಲಿ ಬೆರೆಸಿ ನಿಮಜ್ಜನ ಎಂದು ಹೇಳುತ್ತಿದ್ದರು.

ನಿಮಜ್ಜನ ಎಂದರೇ ಇಲ್ಲದಹಾಗೆ ಮಾಡುವುದೆಂದು ಅರ್ಥ. ಪೂರ್ವದಂತೆ ಇಂದೂ ಕೂಡಾ ನಾಲ್ಕು ಕೈಗಳು, ಆನೆ ಸೊಂಡಿಲನ್ನಿಟ್ಟು ಮೆರವಣಿಗೆ ಮಾಡುವುದು ನಡೆಯುತ್ತಿದೆ. ಎಲ್ಲಾ ಪೂರ್ವದಲ್ಲಿ ನಡೆದಹಾಗೇ ನಡೆಯುತ್ತಿವೆ. ಆದರೂ ಆಗ ವಿನಾಯಕ ಆಕಾರವನ್ನು ಧನ, ಅಧಿಕಾರ ಬಲದಿಂದ ತುಂಬಿ ಪ್ರಜೆಗಳನ್ನು ಪೀಡಿಸುವ ದುಷ್ಟರನ್ನಾಗಿ ಲೆಕ್ಕಿಸುತ್ತಿದ್ದರು. ಈಗ ಅದು ಹೋಗಿ ವಿನಾಯಕನನ್ನು ದೇವರನ್ನಾಗಿ ಭಾವಿಸಿದ್ದಾರೆ. ಅಂದಿಗೂ ಇಂದಿಗೂ ಭಾವನೆ ಬದಲಾದರೂ, ಆಚರಣೆ ಮಾತ್ರ ಬದಲಾಗದಂತೆ ಪೂರ್ವದ ಹಾಗೆ ಎಲ್ಲಾ ಇವೆ. ಕೊನೆಯಲ್ಲಿ ದುಷ್ಟನು ಇರಬಾರದೆಂಬ ಉದ್ದೇಶದಿಂದ ವಿನಾಯಕನನ್ನು ಹೊಡೆದುಹಾಕಿ ನೀರಿನಲ್ಲಿ ಬೆರೆಸುವುದು, ನಾಮ ರೂಪಗಳು ಇಲ್ಲದಹಾಗೆ ಮಾಡುವುದು ಇಂದಿಗೂ ಇದೆ. ಎಲ್ಲರೂ ಅದೇ ಕೆಲಸವನ್ನು ಮಾಡುತ್ತಿದ್ದಾರೆ. ಆಚರಣೆ ಎಲ್ಲಾ ನಾನು ಹೇಳಿರುವುದಕ್ಕೆ ಸರಿಹೋಗುತ್ತಾ ಇದೆ. ಆದರೆ ಮಧ್ಯದಲ್ಲಿ ದೇವರು ಎಂದು ಬಂದಿರುವ ಭಾವ ಸರಿಹೋಗಲಿಲ್ಲ. ಆದ್ದರಿಂದ ನಾನು ಕೆಲವರನ್ನು ಪ್ರಶ್ನಿಸಿ ನೋಡಿದ್ದೇನೆ. ವಿನಾಯಕನು ದೇವರೆಂದು ಭಾವಿಸಿ ವಾರ ಅಥವಾ ಹತ್ತು ದಿನಗಳು ಅನೇಕವಾಗಿ ಪೂಜೆ ಮಾಡುತ್ತಿದ್ದಾರೆ. ಅದನ್ನು ಕೂಡಾ ನಾವು ಒಪ್ಪಿಕೊಳ್ಳುತ್ತೇವೆ. ಅಷ್ಟಾಗಿ ಹಣ ಖರ್ಚುಮಾಡಿ ಎಷ್ಟೋ ವಿಜೃಂಭಣೆಯಾಗಿ ಪೂಜೆಗಳು ಮಾಡಿ, ಕೊನೆಯದಿನ ಕೆಲವರು ಕೊಳಚೆ ನೀರಿನಲ್ಲಿ ಮುಳುಗಿಸುತ್ತಿದ್ದಾರೆ. ದೇವರೆಂದು ಭಾವಿಸಿದ ನಂತರ ಆ ವಿಗ್ರಹವನ್ನು ಹಾಗೇ ಇಟ್ಟುಕೊಂಡು, ನಿತ್ಯ ಪೂಜೆಗಳು ಮಾಡಬಹುದು ಅಲ್ಲವೇ! ಅಷ್ಟೇಅಲ್ಲದೆ ಅದೇ ಬೊಂಬೆಯನ್ನು ನಂತರ ಬರುವ ವರ್ಷಕ್ಕು ಕೂಡಾ ಇಟ್ಟು ಪೂಜಿಸ ಬಹುದಲ್ಲವೆ! ಹಾಗಲ್ಲದೆ ನೀರು ಇಲ್ಲದಕಡೆ ಕೊಳಚೆ ನೀರಿನಲ್ಲಿ ಕೂಡಾ ಹಾಕುವುದು ನಡೆಯುತ್ತಿದೆ. ದೇವರೆಂದು ಪೂಜಿಸಿದ ನಂತರ, ವಿನಾಯಕನ ಮೇಲೆ ಭಕ್ತಿ ಭಾವನೆಗಳಿದ್ದಾಗ ಆ ಭಕ್ತಿಯನ್ನು ಹಾಗೇ ಬೆಳೆಸಿಕೊಳ್ಳುವುದು ಚೆನ್ನಾಗಿರುತ್ತದೆ. ಆದರೆ ಹಾಗೆ ಬಿಸಾಕಿ ಬರುವುದು ಭಕ್ತಿ ಭಾವನೆಗೆ ಸ್ವಲ್ಪವೂ ಸರಿಹೋಗುವುದಿಲ್ಲ. ಹಾಗೆ ಏಕೆ ಮಾಡುತ್ತಿದ್ದಾರೆಂದು ಕೇಳಿದರೆ ಹಾಗೆ ಮಾಡುವುದು ಸಾಂಪ್ರದಾಯ, ಸನಾತನ ಧರ್ಮ ಎನ್ನುತ್ತಿದ್ದಾರೆ. ಆದರೆ ಆ ಸಾಂಪ್ರದಾಯವನ್ನು ನಮ್ಮ ಹಿರಿಯರು ಏಕೆ ಇಟ್ಟಿದ್ದಾರೆಂದು

ಸ್ವಲ್ಪವೂ ಆಲೋಚಿಸುತ್ತಿಲ್ಲ. ಒಬ್ಬನು ಒಂದು ಕೆಲಸವನ್ನು ಮಾಡಿದರೆ ಆ ಕೆಲಸವನ್ನು ಏಕೆ ಮಾಡಿದ್ದಾನೆ, ಏಕೆ ಮಾಡಬೇಕು? ಎಂಬ ವಿಚಕ್ಷಣ ಸ್ವಲ್ಪವಾದರೂ ಇಲ್ಲದಹಾಗೆ ಕುರಿದಾಟಿನಂತೆ ಆಲೋಚನೆ ಇಲ್ಲದಹಾಗೆ ಮಾಡುವುದು ಮೂರ್ಖತ್ವ ಎಂದು ಹೇಳಬಹುದು.

ನಿಮಜ್ಜನ ಎನ್ನುವ ಪದದಲ್ಲಿ "ಜ" ಇದೆ ಆದ್ದರಿಂದ ಜನನ ಎಂದರೇ ಹುಟ್ಟುವುದೆಂದು ಅರ್ಥ. ಮಜ್ಜನ ಎಂದರೇ ಮತ್ತೆ ಹುಟ್ಟುವುದು ಎಂದು ಅರ್ಥ. 'ನಿ' ಎಂದರೇ ಇಲ್ಲದಹಾಗೆ ಮಾಡುವುದು ಎಂದು ಅರ್ಥ ಇದೆ. ಅದರ ಪ್ರಕಾರ ಪುನಃ ಹುಟ್ಟಬಾರದೆಂಬ ಅರ್ಥ ಬರುವಂತೆ ನಿಮಜ್ಜನ ಎಂದು ಕರೆದಿದ್ದಾರೆ. ವಿನಾಯಕ ನಿಮಜ್ಜನ ಎಂದರೆ ವಿನಾಯಕನು ಪ್ರಜೆಗಳನ್ನು ಪೀಡಿಸುವ ದುರ್ಮಾರ್ಗನಾದ್ದರಿಂದ ಆತನನ್ನು ಪುನಃ ಹುಟ್ಟಬಾರದೆನ್ನುವ ಉದ್ದೇಶದಿಂದ ಬೊಂಬೆಯನ್ನು ಹೊಡೆದುಹಾಕಿ ನೀರಿನಲ್ಲಿ ಹಾಕುತ್ತಿದ್ದೇವೆ. ಪೂರ್ವದಂತೆ ಕೊನೆಯ ದಿನ ನಿಮಜ್ಜನ ಇದೆ. ದ್ವಾಪರಯುಗದಲ್ಲಿ ನಮ್ಮ ಹಿರಿಯರಾದ ವ್ಯಾಸನು ಮುಂತಾದವರು ಏರ್ಪಾಟು ಮಾಡಿದ ಆಚರಣೆ ಎಲ್ಲವೂ ಇದೆ. ಆದರೆ ಅಂದಿನ ಭಾವನೆ ಇಲ್ಲದಹಾಗೆ ಹೋಗಿದೆ. ಈ ದಿನ ನಾವು ವಿನಾಯಕ ಹಬ್ಬವನ್ನು ಕುರಿತು ಇರುವ ವಾಸ್ತವವನ್ನು ಹೇಳಿದರೆ ಗ್ರಹಿಸಿಕೊಳ್ಳದ ಕೆಲವರು ನಮ್ಮನ್ನು ನಾನಾ ವಿಧಗಳಾಗಿ ದೂಷಿಸುವುದೇ ಅಲ್ಲದೆ ಪರಮತದವನ ಕೆಳಗೆ ಲೆಕ್ಕಹಾಕಿ ಹೇಳುತ್ತಿದ್ದಾರೆ. ನಾನು ಹೇಳುವ ಸತ್ಯವನ್ನು ನೀವು ಗ್ರಹಿಸಿಕೊಳ್ಳದೆ ನನ್ನನ್ನು ದೂಷಿಸುವುದಕ್ಕಿಂತ ಆ ಆಚರಣೆಗಳು ಏಕೆ ಇವೆಯೆಂದು ಸ್ವಲ್ಪವಾದರೂ ಆಲೋಚಿಸಬಹುದು ಅಲ್ಲವೇ! ವಿಚಕ್ಷಣ ಇಲ್ಲದೆ ಒಬ್ಬನು ನನ್ನನ್ನು ದೂಷಿಸಿದರೆ ಉಳಿದವರು ಸ್ವಲ್ಪವಾದರೂ ಆಲೋಚಿಸದಿರುವುದು, ನಾವು ಕೂಡಾ ದೂಷಿಸುತ್ತೇವೆಂದು ದೂಷಿಸುವುದು ನೋಡಿದರೆ ನಿಮ್ಮನ್ನು ನೋಡಿ ನಗಬೇಕೋ, ಅಳಬೇಕೋ ನನಗೇ ಅರ್ಥವಾಗಲಿಲ್ಲ. ನಾನು ಹಿಂದೂಮತದಲ್ಲಿ ಹುಟ್ಟಿದ್ದಕ್ಕೆ, ಹಿಂದೂ ಮತದಲ್ಲಿ ವಿಚಕ್ಷಣ ಇಲ್ಲದೆ, ಕುರುಡರಂತೆ ಅರ್ಥ ತಿಳಿಯದಹಾಗೆ ಪ್ರವರ್ತಿಸುವವರನ್ನು ನೋಡಿ ಇವರಾ ಹಿಂದೂಗಳು ಅನಿಸುತ್ತಿದೆ. ಎಲ್ಲರೂ ಅಧರ್ಮ ಭಾವನೆಗಳನ್ನು ಹೊಂದಿದ್ದು, ಕುರುಡರಂತೆ ಪ್ರವರ್ತಿಸುತ್ತಿರುವುದಕ್ಕೆ

ಹಿಂದೂ ಸಮಾಜ ಅಭಿವೃದ್ಧಿಯಾಗುತ್ತದಾ ಎಂದು ಅನುಮಾನ ಬರುತ್ತಿದೆ. ಈ ಒಂದು ವಿಷಯದಲ್ಲಿಯೇ ಅಲ್ಲದೇ ಭಕ್ತಿ ಎಂಬ ಎಲ್ಲಾ ಮಾರ್ಗಗಳಲ್ಲಿ ಮೂರ್ಖರಾಗಿ ಪ್ರವರ್ತಿಸುತ್ತಿದ್ದಾರೆ.

ಹಿಂದೂಗಳಿಗೆ ಆಧ್ಯಾತ್ಮಿಕ ವಿದ್ಯೆಯಲ್ಲಿ ಪ್ರಮಾಣ ಗ್ರಂಥ ಬ್ರಹ್ಮವಿದ್ಯಾ ಶಾಸ್ತ್ರವಾದ ಭಗವದ್ಗೀತೆ. ಭಗವದ್ಗೀತೆಯಲ್ಲಿ ಮೊದಲಿನಿಂದ ಕೊನೆಯವರೆಗು ನೋಡಿದರೂ ವಿನಾಯಕ ಹಬ್ಬವನ್ನು ಕುರಿತಾಗಲಿ, ಭೈರವನ ಮೆರವಣಿಗೆಯನ್ನು ಕುರಿತಾಗಲಿ ಹೇಳಿದ್ದಾರಾ ಇಲ್ಲ. ಹಾಗಿರುವಾಗ ನಮ್ಮ ಗ್ರಂಥವನ್ನು ನಾವು ಓದಿ, ಅದರಲ್ಲಿ ಜ್ಞಾನವನ್ನು ತಿಳಿದುಕೊಳ್ಳದೆ ಇಂತಹ ಹಬ್ಬದ ಹಿಂದೆಬಿದ್ದು ಕಾಲವನ್ನು, ಹಣವನ್ನು ವ್ಯರ್ಥ ಮಾಡಿಕೊಳ್ಳಬಾರದೆಂದು ಹಿತ ಹೇಳುತ್ತಿದ್ದೇವೆ. ಇಂತಹ **ಅರ್ಥವಿಲ್ಲದ, ಅರ್ಥ ತಿಳಿಯದ ಆಚರಣೆಗಳನ್ನು ಸಾವಿರ ಮಾಡುವುದಕ್ಕಿಂತ ಭಗವದ್ಗೀತೆಯಲ್ಲಿ ದೇವರು ಹೇಳಿದ ಒಂದು ಜ್ಞಾನ ಸೂತ್ರವನ್ನು ಆಚರಿಸುವುದು ಒಳ್ಳೆಯದು.** ಹಿಂದೂಗಳು ಪರಮತಗಳ ಮುಂದೆ ಅಜ್ಞಾನಿಗಳಾಗಿ ಅಲ್ಲದೆ ಜ್ಞಾನಿಗಳಾಗಿ ನಿಲ್ಲಬೇಕೆಂಬ ಕೋರಿಕೆಯಿಂದ ಮತ್ತು ಪೂರ್ವದಲ್ಲಿ ನಮಗು, ನಮ್ಮ ದೇಶಕ್ಕು ಇದ್ದ **'ಜ್ಞಾನಿಗಳ ದೇಶ'** ಎಂಬ ಹೆಸರನ್ನು ಸ್ಥಿರಸ್ಥಾಯಿಯಾಗಿ ಇರುವಹಾಗೆ ಮಾಡಿರೆಂದು ಕೋರುತ್ತಿದ್ದೇನೆ.

**ಪ್ರಶ್ನೆ :– ನೀವು ಎಷ್ಟು ಹೇಳಿದರೂ ನಾವು ಕೇಳುವುದಿಲ್ಲವೆಂದರೆ ಕೇಳುವುದಿಲ್ಲ. ಏಕೆಂದರೇ ನೀವು ಸ್ವಚ್ಛವಾದ ಹಿಂದೂವು ಅಲ್ಲ. ಪರಮತ ಭಾವನೆಗಳು ನಿಮ್ಮಲ್ಲಿ ಬಹಳ ಇವೆ. ಆದ್ದರಿಂದ ಎಲ್ಲರೂ ದೇವರೆನ್ನುತ್ತಿರುವ ರಾಮನನ್ನು ದೇವರು ಅಲ್ಲವೆಂದು ಹೇಳಿದ್ದೀರ, ಕಿರಾಯಿ ಹಂತಕನು ಎಂದು ಹೇಳಿದ್ದೀರ. ಅಲ್ಲಿಗೆ ಸುಮ್ಮನಾಗದೆ ಅಸುರ ರಾಜನಾದ ರಾವಣಾಸುರನನ್ನು ಭಗವಂತನ ಅವತಾರವೆಂದಿದ್ದೀರ. ರಾಮನಿಗೆ ವಿರುದ್ಧವಾದ ರಾವಣನು ನಿನಗೆ ದೇವರಾದರೇ ನಾವು ಹೇಗೆ ಒಪ್ಪಿ**

**ಕೊಳ್ಳುತ್ತೇವೆ? ರಾಮನನ್ನು ದೇವರು ಅಲ್ಲವೆನ್ನುವ ನೀವು ಹಿಂದೂಗಳೇ ಅಲ್ಲವೆಂದು ಹೇಳುತ್ತಿದ್ದೇವೆ ಎಂದು ಕೆಲ ವರನ್ನುತ್ತಿದ್ದಾರೆ. ಇದಕ್ಕೆ ನೀವೇನು ಹೇಳುತ್ತೀರಾ?**

**ಉತ್ತರ :–** ನಾನು ಹೇಳುವುದೆಲ್ಲಾ ನೀವು ಕೇಳಬೇಕೆಂದು ನಾನು ಹೇಳಲಿಲ್ಲ. ಅರ್ಥವಾದವರು ಕೇಳುತ್ತಾರೆ, ಅರ್ಥ ಆಗದವರು ಕೇಳುವುದಿಲ್ಲವೆಂದು ನನಗೆ ತಿಳಿದಿದೆ. ಮತ ಎನ್ನುವುದು ಅಜ್ಞಾನದಿಂದ ಕೂಡಿಕೊಂಡಿದೆಯೆಂದು, ಮತವೆಂಬ ಮಾಯೆಯಲ್ಲಿ ಬೀಳಬೇಡವೆಂದು ಹೇಳುತ್ತಿರುವ ನಾವು ಪರಮತ ಮುಸುಗಿನಲ್ಲಿ ಇದ್ದೇವೆನ್ನುವುದು ಅರ್ಥವಿಲ್ಲದ ಮಾತು. ಭಗವದ್ಗೀತೆಯಲ್ಲಾಗಲೀ, ಬೈಬಲ್‌ನಲ್ಲಾಗಲೀ ಖುರ್‌ಆನ್‌ನಲ್ಲಾಗಲೀ ಮತ ಎಂಬ ಹೆಸರೇ ಇಲ್ಲ. ಮೂರು ದೈವ ಗ್ರಂಥಗಳು ಒಂದೇ ಜ್ಞಾನವನ್ನು ಬೋಧಿಸುತ್ತಿವೆ. ಮೂರು ಗ್ರಂಥಗಳಲ್ಲಿಯೂ **"ಸಮಸ್ತ ಪ್ರಜೆಗಳಿಗೆ"** ಎಂದು ಹೇಳಿ ಹಿತಬೋಧನೆ ಮಾಡಿದ್ದಾರೆ ಹೊರತು ಇದು ಇಂತಹ ಮತದವರಿಗೆ ಎಂದು ಹೇಳಲಿಲ್ಲ. ಭಗವದ್ಗೀತೆಯಲ್ಲಿ ಎಲ್ಲಿಯಾದರೂ ಈ ಜ್ಞಾನ ಹಿಂದೂಗಳಿಗೆ ಎಂದು ಹೇಳಿದ್ದಾರಾ? ಹಾಗೇ ಇದಕ್ಕುಮುನ್ನ ಖುರ್‌ಆನ್ 5ನೇ ಸೂರಾದಲ್ಲಿನ (4) ವಾಕ್ಯಗಳನ್ನು ಹೇಳಿದ್ದೇನೆ. ಆ ವಾಕ್ಯಗಳಿಂದ ಮೂರು ಗ್ರಂಥಗಳಲ್ಲಿ ಒಂದೇ ಜ್ಞಾನವಿದೆಯೆಂದು ತಿಳಿಯುತ್ತಿದೆ ಹೊರತು, ಅಲ್ಲಿ ಏನಾದರೂ ಇತರೆ ಮತಗಳನ್ನು ದೂಷಿಸಿದಂತಿದೆಯಾ? ಉಳಿದ ಎರಡು ದೈವಗ್ರಂಥಗಳು ಭಗವದ್ಗೀತೆಯನ್ನೇ ಧೃಢೀಕರಿಸುತ್ತಿವೆಯೆಂದು ಹೇಳಿವೆ ಅಲ್ಲವೇ! ಉಳಿದ ಎರಡು ಮತ ಗ್ರಂಥಗಳು ಓದಿ ಭಗವದ್ಗೀತೆ ಓದದಿದ್ದರೆ ಆತನು ಯಾವ ಧರ್ಮದಲ್ಲಿ ಇಲ್ಲದಹಾಗೆಯೇ ಎಂದು ಹೇಳಲಿಲ್ಲವಾ? ಈ ವಿಷಯಗಳನ್ನು ಸ್ವಲ್ಪವಾದರೂ ತಿಳಿಯದೆ ನಮ್ಮಲ್ಲಿ ಪರಮತ ಭಾವನೆಗಳಿವೆಯೆಂದು ಹೇಳುವುದು ತಪ್ಪು ಅಲ್ಲವೇ! ನಾನು ಯಾವೊಂದು ಮತವನ್ನೂ ಸಮರ್ಥಿಸಲಿಲ್ಲ, ಎಲ್ಲಾ ಮತಗಳ ಗ್ರಂಥಗಳಲ್ಲಿ ಒಂದೇ ಜ್ಞಾನವಿದೆಯೆಂದು ಹೇಳುತ್ತಿದ್ದೇವೆ. ಭಗವದ್ಗೀತೆ, ಬೈಬಲ್, ಖುರ್‌ಆನ್ ಮೂರು ಗ್ರಂಥಗಳು ಓದದೆ ಹೋದರೆ ನೀವು ಯಾವ ಧರ್ಮದಲ್ಲಿಯೂ ಇಲ್ಲದಹಾಗೆ ಎಂದು 5ನೇ ಸೂರಾ, 68ನೇ ಆಯತ್‌ನಲ್ಲಿ ಹೇಳಲಿಲ್ಲವಾ, ಖುರ್‌ಆನ್‌ನಲ್ಲಿ

ಇಷ್ಟು ಒಳ್ಳೆಯ ವಾಕ್ಯ ಇದೆಯೆಂದು ತಿಳಿಯದೆ ಅದು ಮುಸ್ಲೀಮ್ ಗ್ರಂಥವೆಂದು ಹೇಳುವುದು ತಪ್ಪು ಅಲ್ಲವೇ! ಭಗವದ್ಗೀತೆಯಾಗಲೀ, ಬೈಬಲ್‌ಲಾಗಲೀ, ಖುರ್‌ಆನ್‌ನಾಗಲೀ ಯಾವುದೂ ಯಾವ ಮತ ಗ್ರಂಥವಲ್ಲ! ಆಯಾ ಮತಗಳು ಇವು ನಮ್ಮ ಗ್ರಂಥ ಎಂದು ಹೇಳಿಕೊಳ್ಳುತ್ತಿವೆ. ಮತಗಳಲ್ಲಿನ ಮನುಷ್ಯರು ದೈವ ಗ್ರಂಥಗಳಿಗೆ ಮತಗಳನ್ನು ಅಂಟಿಸಿ, ಅವುಗಳನ್ನು ಮತ ಗ್ರಂಥಗಳೆಂದು ಹೇಳುತ್ತಿದ್ದಾರೆ. ಆದರೆ ಅವು ದೈವ ಗ್ರಂಥಗಳೇ ಹೊರತು ಮತ ಗ್ರಂಥಗಳು ಅಲ್ಲ.

ನಾನು ರಾಮನನ್ನು ದೇವರಲ್ಲ ಎಂದಿದ್ದೇನೆಂದು ಅನ್ನುತ್ತಿದ್ದಾರೆ. ಹಾಗೆ ಹೇಳಬೇಕಾದ ಸಂದರ್ಭ ಬರಲಿಲ್ಲ. ನಾನು ರಾಮನು ದೇವರಾ! ಅಲ್ಲವಾ! ಎನ್ನುವ ವಿಷಯವನ್ನು ಎಲ್ಲಿಯೂ ಹೇಳಲಿಲ್ಲ. ಒಂದು ಸಂದರ್ಭದಲ್ಲಿ **"ದ್ರಾವಿಡ ಬ್ರಾಹ್ಮಣ"** ಎಂಬ ಗ್ರಂಥದಲ್ಲಿ ರಾಮನು ವಾಲಿಯನ್ನು ಸಾಯಿಸಿ ಕಿರಾಯಿ ಹಂತಕನೆಂದು ಹೆಸರು ತಂದುಕೊಂಡಿದ್ದಾನೆಂದು ಹೇಳಿದ್ದೇವೆ. ಅಲ್ಲಿ ವಿಷಯವನ್ನು ಪರಿಶೀಲಿಸಿ ನೋಡಿದರೆ ರಾಮನು ವಾಲಿಯನ್ನು ಹತ್ಯೆ ಮಾಡಿದರೆ ಸೀತೆಯನ್ನು ಹುಡುಕುವುದರಲ್ಲಿ ತನಗೆ ಸಹಾಯ ಮಾಡಬೇಕೆಂದು ಮೊದಲೇ ಒಪ್ಪಂದ ಮಾಡಿಕೊಂಡಿದ್ದಾನಾ ಇಲ್ಲವಾ ನೀವೇ ಹೇಳಿರಿ. ಹಾಗೆ ಮಾತನಾಡಿಕೊಂಡು ನಂತರ ಹತ್ಯೆ ಮಾಡುವುದನ್ನು ಕಿರಾಯಿ ಹತ್ಯೆ ಎನ್ನದೆ ಏನನ್ನಬೇಕು? ನೀವೇ ಹೇಳಿರಿ. ಅದು ಮುಮ್ಮಾತಿಗೂ ಕಿರಾಯಿ ಹತ್ಯೆಯೇ ಆದ್ದರಿಂದ ನಾವು ಒಬ್ಬ ಗುರುವಾಗಿ ಸತ್ಯ ಹೇಳಬೇಕಾ, ಅಸತ್ಯವನ್ನು ಹೇಳಬೇಕಾ? ಎಂದು ಕೇಳುತ್ತಿದ್ದೇನೆ. ಆತನಲ್ಲಿ ಜ್ಞಾನ ಎಷ್ಟಿದೆಯೋ ನೋಡಿ, ಅದರಿಂದ ಆತನು ದೇವರೋ ಅಲ್ಲವೋ ಹೇಳಬಹುದು. ಆದರೆ ಭೂಮಿ ಮೇಲಕ್ಕೆ ಬಂದಿರುವ ದೇವರನ್ನು ಗುರುತಿಸುವುದು ಬಹಳ ಕಷ್ಟವೆಂದು **"ಗುರು"** ಎಂಬ ಗ್ರಂಥದಲ್ಲಿ ಬರೆದಿದ್ದೇವೆ. ರಾಮನು ದೇವರಾ! ಅಲ್ಲವಾ! ಎಂದು ನೋಡಬೇಕಾದ ಅಗತ್ಯ ಏರ್ಪಡಲಿಲ್ಲ. ಆದ್ದರಿಂದ ದೇವರು ಹೌದಾ ಅಲ್ಲವಾ! ಎಂಬ ವಿಷಯವನ್ನು ನಾನು ಹೇಳಲಿಲ್ಲ.

ತ್ರೇತಾಯುಗದಲ್ಲಿ ರಾವಣಬ್ರಹ್ಮ ಯಾರು? ಎಂಬ ವಿಷಯ ಯಾರಿಗೂ ತಿಳಿದಿಲ್ಲ. ದ್ವಾಪರಯುಗದಲ್ಲಿ ಕೃಷ್ಣನು ಭಗವದ್ಗೀತೆಯನ್ನು ಹೇಳಿದ ನಂತರ,

ಅದರಲ್ಲಿ ಜ್ಞಾನ ತಿಳಿದ ನಂತರ ರಾವಣಬ್ರಹ್ಮನ ಮೇಲೆ ಒಂದು ನಿರ್ಣಯಕ್ಕೆ ಬಂದು ಆತನನ್ನು ಭಗವಂತನ ಜನ್ಮವಾಗಿ ಹೇಳಬೇಕಾಗಿ ಬಂದಿದೆ. ಭಗವದ್ಗೀತೆಯಲ್ಲಿನ ಧರ್ಮಗಳ ಪ್ರಕಾರ ರಾಮನ ಜೀವನವಿದ್ದರೇ ಆತನನ್ನು ಕೂಡಾ ದೇವರೆಂದು ಹೇಳದೆ ತಪ್ಪುವುದಿಲ್ಲ. ಆದರೆ ಅಂತಹ ಹೋಲಿಕೆಗಳು ರಾಮನ ಜೀವನದಲ್ಲಿ ಇಲ್ಲ. ರಾವಣನ ಜೀವನದಲ್ಲಿ ಕಾಣಿಸಿವೆ, ಆದ್ದರಿಂದ ರಾವಣಬ್ರಹ್ಮನನ್ನು ಭಗವಂತನ ಅವತಾರ ಎಂದು ಹೇಳಬೇಕಾಗಿ ಬಂದಿದೆ. ಏನಾದರೂ ಒಂದು ನಿರ್ಣಯ ಮಾಡಿ ಹೇಳುವುದಕ್ಕೆ ಅದಕ್ಕೆ ತಕ್ಕ ಪ್ರಮಾಣಗಳು ಅಗತ್ಯ. ಶಾಸ್ತ್ರಪ್ರಮಾಣ ಇಲ್ಲದೇ ಏನನ್ನೂ ನಿರ್ಧಾರಣೆ ಮಾಡಿ ಹೇಳಲಾರೆವು. **ಭಗವದ್ಗೀತೆಯಲ್ಲಿ ದೇವರು ಮೂರು ಧರ್ಮಗಳನ್ನು ಕುರಿತು, ನಾಲ್ಕು ಅಧರ್ಮಗಳನ್ನು ಕುರಿತು ಹೇಳುವುದು ನಡೆದಿದೆ.** ದೇವರು ಮನುಷ್ಯನಾಗಿ ಭಗವಂತನ ಅವತಾರದಿಂದ ಯಾವಾಗ ಬಂದರೂ ನಾಲ್ಕು ಅಧರ್ಮಗಳನ್ನು ಇಲ್ಲದಹಾಗೆ ಮಾಡಬೇಕೆಂದು ನೋಡುತ್ತಾನೆ. ಹಾಗೆಯೇ ಮೂರು ಧರ್ಮಗಳನ್ನು ನೆಲೆಗೊಳಿಸಬೇಕೆಂದು ನೋಡುತ್ತಾನೆ. ಅಂತಹ ಆಚರಣೆ ಭಗವಂತನಲ್ಲಿ ಇರುತ್ತದೆಂದು ಕೃಷ್ಣನ ಅವತಾರದ ನಂತರ ತಿಳಿದಿದೆ.

ಮನುಷ್ಯರು ಎಷ್ಟೋ ಜನ್ಮಗಳು ಎತ್ತುತ್ತಿದ್ದರೂ ಅವನು ಕರ್ಮ ಬದ್ಧನಾಗಿದ್ದು, ಕರ್ಮ ಪ್ರಕಾರ ಆಡಿಸಲ್ಪಡುತ್ತಿರುತ್ತಾನೆ. ಕರ್ಮ ಎನ್ನುವುದು ಮನುಷ್ಯನ ಜೀವನಕ್ಕೆ ಕಾರಣವಾಗಿದ್ದು, ಕರ್ಮಪ್ರಕಾರ ಆಡಿಸುವವನು ಮನುಷ್ಯನ ಶರೀರದೊಳಗಿನ ಆತ್ಮವೇ ಎಂದು ತಿಳಿಯಬೇಕು. **ಮನುಷ್ಯ ದೈವಜ್ಞಾನವನ್ನು ತಿಳಿದು ಜ್ಞಾನಿಯಾದರೆ ಧರ್ಮಗಳನ್ನು ಆಚರಿಸಬೇಕೆಂದು ಪ್ರಯತ್ನ ಮಾಡುತ್ತಾನೆ ಹೊರತು ಅಧರ್ಮಗಳನ್ನು ಇಲ್ಲದಹಾಗೆ ಮಾಡಬೇಕೆಂಬ ಪ್ರಯತ್ನ ಮಾಡುವುದಿಲ್ಲ. ಅದೇ ಮನುಷ್ಯನಿಗೆ ದೇವರ ಅವತಾರವಾದ ಭಗವಂತನಿಗೆ ಇರುವ ವ್ಯತ್ಯಾಸವೆಂದು ಹೇಳಬಹುದು.** ಭಗವಂತನು ತಾನು ಧರ್ಮಗಳನ್ನು ಆಚರಿಸಬೇಕೆಂದು ನೋಡುವುದಿಲ್ಲ ಆದರೆ, ಅಧರ್ಮಗಳನ್ನು ಇಲ್ಲದಹಾಗೆ ಮಾಡಬೇಕೆಂದು ನೋಡುತ್ತಾನೆ. ಆದ್ದರಿಂದ ಈ ಒಂದು ಕಾರ್ಯವನ್ನು ಆಧಾರ ಮಾಡಿಕೊಂಡು ಮನುಷ್ಯರಲ್ಲಿ ಭಗವಂತನು ಯಾರು ಎಂದು ಕಂಡುಕೊಳ್ಳಬಹುದು ಈ ಒಂದು ಆಧಾರ ಹೊರತುಪಡಿಸಿ ಇತರೆ ಏನೂ ಇಲ್ಲ. ಆದರೂ ಭಗವಂತನು ಭೂಮಿ

ಮೇಲಕ್ಕೆ ಬಂದರೆ ಆತನನ್ನು ಗುರುತಿಸುವುದು ಬಹಳ ಕಷ್ಟ. ಏಕೆಂದರೇ! ಅವರು ಅಧರ್ಮಗಳನ್ನು ಇಲ್ಲದಹಾಗೆ ಮಾಡುತ್ತಿದ್ದಾರೆಂದು ಕೂಡಾ ಹೊರಗೆ ತಿಳಿಯದಹಾಗೆ ಪ್ರವರ್ತಿಸುತ್ತಿರುತ್ತಾರೆ.

ನನಗೆ ತಿಳಿದು ರಾವಣಬ್ರಹ್ಮನದ್ದು ಮೊದಲ ಭಗವಂತನ ಜನ್ಮವೆಂದು ಗಂಟಾ ಘೋಷವಾಗಿ ಹೇಳುತ್ತಿದ್ದೇನೆ. ಆದ್ದರಿಂದ ಇತರರು ತನ್ನನ್ನು ಭಗವಂತನೆಂದು ಗುರುತಿಸುತ್ತಾರೇನೊ ಎಂದು ಆತನು ಅಂದುಕೊಳ್ಳಲಿಲ್ಲ. ಆದ್ದರಿಂದ ಅಧರ್ಮಗಳನ್ನು ಬಹಿರಂಗವಾಗಿ ಖಂಡಿಸಿದ್ದಾನೆ. ಎರಡು ಅಧರ್ಮಗಳನ್ನು ಅಡಗಿಸಿ ಹಾಕುವುದರಲ್ಲಿ ಪೂರ್ತಿ ಹೊರಬಿದ್ದು ಹೋಗಿದ್ದಾನೆ. ಯಾವಾಗಾದರೇ ವೇದಪಠಣ ಶಬ್ದಗಳನ್ನು ಇಲ್ಲದಹಾಗೆ ಮಾಡುವುದಕ್ಕೆ, ಯಜ್ಞಗಳನ್ನು ಭಂಗ ಮಾಡುವುದಕ್ಕೆ, ಲಂಕದಿಂದ ಭಾರತದೇಶಕ್ಕೆ ಬಂದು ವೇದಪಠಣ ಮಾಡುವ ವರನ್ನು, ಯಜ್ಞಗಳನ್ನು ಮಾಡುವವರನ್ನು ಗುರುತಿಸಿ ಅವರನ್ನು ಭಯಪಡಿಸುವುದು, ನಡೆಯುವ ಯಜ್ಞಗಳನ್ನು ಧ್ವಂಸ ಮಾಡಿದ್ದಾನೋ, ಆಗ ಈತನು ಭಗವಂತನೆಂದು ಈ ದಿನ ತಿಳಿದುಕೊಂಡಿದ್ದೇವೆ. ರಾವಣಬ್ರಹ್ಮ ಇದ್ದ ದಿನಗಳಲ್ಲಿ ಬ್ರಹ್ಮವಿದ್ಯಾ ಶಾಸ್ತ್ರ ಗ್ರಂಥರೂಪದಲ್ಲಿ ಹೊರಗೆ ಬರಲಿಲ್ಲ. ಆದ್ದರಿಂದ ಯಾವುವು ಧರ್ಮಗಳೋ, ಯಾವುವು ಅಧರ್ಮಗಳೋ ಯಾರಿಗೂ ತಿಳಿದಿಲ್ಲ. ಆದ್ದರಿಂದ ಇವುಗಳನ್ನು ಅನುಸರಿಸಿ ಭಗವಂತನನ್ನು ತಿಳಿಯಲಾರದೆ ಹೋಗಿದ್ದಾರೆ. ಈ ದಿನ ಪ್ರಥಮ ದೈವಗ್ರಂಥವಾದ ಭಗವದ್ಗೀತೆ ಮುಖಾಂತರ ಮೂರು ಧರ್ಮಗಳು, ನಾಲ್ಕು ಅಧರ್ಮಗಳನ್ನು ತಿಳಿದುಕೊಂಡಿದ್ದೇವೆ. ಆದ್ದರಿಂದ ನಾನು ಕಲಿಯುಗದಲ್ಲಿ ತ್ರೈತಾಯುಗದಲ್ಲಿ ಹುಟ್ಟಿದ ರಾವಣಬ್ರಹ್ಮನನ್ನು ಭಗವಂತನೆಂದು ಹೇಳುತ್ತಿದ್ದೇನೆ.

**ಅಸತ್ಯವನ್ನು ಸಾವಿರಜನ ಹೇಳಿದರೂ ಅದು ಸತ್ಯವಾಗುವುದಿಲ್ಲ.**

**ಸತ್ಯವನ್ನು ಸಾವಿರಜನ ಅಲ್ಲಗಳೆದರೂ ಅದು ಅಸತ್ಯವಾಗುವುದಿಲ್ಲ.**

ಎಂಬ ಸೂತ್ರದ ಪ್ರಕಾರ ಎಲ್ಲರೂ ರಾಮನು ದೇವರೆಂದರೇ, ದೇವರೆಂದು ನಾನೂ ಅನ್ನುವುದು, ಹಾಗೇ ಇನ್ನೊಬ್ಬರನ್ನು ದೇವರು ಅಲ್ಲವೆಂದರೇ

ನಾನು ಕೂಡಾ ಅಲ್ಲಗಳೆಯುವುದು ಮಾಡಿದರೆ ಅದು ಕುರಿದಾಟು ಆಗುತ್ತದೆ. ಯಾವುದಕ್ಕಾದರೂ ವಿಚಕ್ಷಣ ಅಗತ್ಯ. ಶಾಸ್ತ್ರ ಪ್ರಮಾಣ ಅಗತ್ಯ. ಶಾಸ್ತ್ರ ಪ್ರಮಾಣ ಇಲ್ಲದ್ದು ಎಲ್ಲರೂ ಹೇಳುತ್ತಿದ್ದಾರೆಂದು ಹೇಳಬಾರದು. ಆದ್ದರಿಂದ ನಿಮ್ಮ ಮಾತುಗಳನ್ನು ಅನುಸರಿಸಿ ರಾಮನು ದೇವರಾ! ಅಲ್ಲವಾ! ಎಂದು ನೋಡಬೇಕಾಗಿದ್ದರೂ, ಅದರಿಂದ ನಮಗೆ ಎಂತಹ ಪ್ರಯೋಜನೆಯೂ ಇಲ್ಲ. ರಾಮನ ಜೀವನ ತೆರೆದ ಪುಸ್ತಕದಂತಾದ್ದು. ಆತನು ಪ್ರಪಂಚದಲ್ಲಿ ಹೇಗೆ ಜೀವಿಸಿದ್ದಾನೆ, ಆತನ ಜೀವನದ ಬಗ್ಗೆ ರಾಮಾಯಣ ಗ್ರಂಥದ ಮೂಲಕ ತಿಳಿಯುತ್ತಿದೆ. ಆತನು ಧರ್ಮ ಪ್ರಕಾರ ನಡೆದುಕೊಳ್ಳಬೇಕೆಂದು ಪ್ರಯತ್ನ ಮಾಡಿದ್ದಾನೆ ಆದರೆ, ಅಧರ್ಮಗಳನ್ನು ಇಲ್ಲದಹಾಗೆ ಮಾಡಬೇಕೆಂದು ಅಂದುಕೊಳ್ಳಲಿಲ್ಲ. ಹಾಗೆ ಅಂದುಕೊಳ್ಳುವುದಕ್ಕೆ ಆತನ ಜೀವನದಲ್ಲಿ ಅವಕಾಶವೇ ಇಲ್ಲದೆ ಹೆಚ್ಚುಕಾಲ ಕಷ್ಟಗಳನ್ನೇ ಅನುಭವಿಸಿದ್ದಾನೆ. ಆದರೂ ಆತನ ಬಗ್ಗೆ ಈಗ ಚರ್ಚಿಸಬೇಕಾದ ಅಗತ್ಯವಿಲ್ಲ. ರಾಮನು ತಾನೂ ಕಷ್ಟಪಟ್ಟಿದ್ದಾನೆ ಆದರೆ, ಇತರರಿಗೆ ಕಷ್ಟ ಕೊಡಬೇಕೆಂದು ಎಂದಿಗೂ ಅಂದುಕೊಳ್ಳಲಿಲ್ಲ. ಆತನು ಪ್ರಪಂಚ ಲಾಭಕ್ಕಾಗಿ ವಾಲಿಯನ್ನು ಸಾಯಿಸಿದರೂ, ತಾನು ತಪ್ಪು ಮಾಡಿದ್ದೇನೆಂದು ಅಂದುಕೊಳ್ಳುತ್ತಿದ್ದನು. ಅದೇ ಆತನಲ್ಲಿದ್ದ ದೊಡ್ಡತನ. ವಾಸ್ತವವಾಗಿ ರಾಮನಿಗೆ ಆ ದಿನ ಧರ್ಮಗಳು ತಿಳಿದಿಲ್ಲ, ಅಧರ್ಮಗಳು ತಿಳಿದಿಲ್ಲವೆಂದು ಹೇಳಬಹುದು. ಆದ್ದರಿಂದ ಆತನು ದೇವರಾ! ಅಲ್ಲವಾ! ಎಂದು ನೋಡಬೇಕಾದ ಅಗತ್ಯವಿಲ್ಲ. ಆದರೂ ಆತನು ಹುಟ್ಟಿದ ಜಾತಕ ಬಲವನ್ನನುಸರಿಸಿ ಭಾರತದೇಶದಲ್ಲಿ ರಾಮನು ದೇವರೆಂದು ಬಹಳಜನ ಹೇಳುತ್ತಿದ್ದಾರೆ. ನಾನು ಇಲ್ಲಿಯವರೆಗು ಏನೂ ಹೇಳಲಿಲ್ಲ. ರಾಮನನ್ನು ದೇವರೆಂದರೇ ಅವರು ಹಿಂದೂಗಳೆಂದು, ರಾಮನು ದೇವರು ಅಲ್ಲವೆಂದರೇ ಅವರನ್ನು ಹಿಂದೂಗಳು ಅಲ್ಲವೆಂದು ನೀವು ಹೇಳುತ್ತಿದ್ದೀರ. ಆ ಲೆಕ್ಕಪ್ರಕಾರ ನನ್ನನ್ನು ಕೂಡಾ ನೀವು ಹಿಂದೂವಲ್ಲ ಎನ್ನುತ್ತಿದ್ದೀರ.

ಈಗಲೇ ಹಿಂದೂಮತ ಕ್ಷೀಣಿಸಿ ಈ ದಿನ ಉಳಿದ ಎರಡು ಮತಗಳ ಮುಂದೆ ಬಹಳ ಕಡಿಮೆ ಸಂಖ್ಯೆಯಾಗಿದೆ. ಅಂತಹ ಸಮಯದಲ್ಲಿ ನೀವು ರಾಮನು ದೇವರಲ್ಲ ಅನ್ನುವವರೆಲ್ಲಾ ಹಿಂದೂಗಳಲ್ಲ ಎಂದರೇ ಈ ದಿನ ಇರುವ ಹಿಂದೂಗಳಲ್ಲಿ ನಾಲ್ಕರಷ್ಟು ಭಾಗ ಸಂಖ್ಯೆಯನ್ನು ಕಳೆದುಕೊಳ್ಳ

ಬೇಕಾಗಿರುತ್ತದೆ. ಹಾಗಿರುವಾಗ ಹಿಂದೂಮತವನ್ನು ಕ್ಷೀಣಿಸುವಂತೆ ಮಾಡಿದವರಾಗುತ್ತೇವೆ ಹೊರತು ಅಭಿವೃದ್ಧಿ ಮಾಡಿದವರಲ್ಲ. ಈ ದಿನ ಇರುವ ಹಿಂದೂರಕ್ಷಣಾ ಸಂಸ್ಥೆಗಳೆಲ್ಲಾ ಪೂರ್ವದಿಂದ ತಮಗೆ ಸರಿಹೋಗದವರನ್ನು ಹಿಂದೂಗಳಲ್ಲ ಎಂದು ಹೇಳುವುದರಿಂದ ಹಿಂದೂಮತ ಕ್ಷೀಣಿಸುತ್ತಾ ಬರುತ್ತಿದೆ. ಈ ದಿನ ನನ್ನನ್ನು ಹಿಂದೂವಲ್ಲ ಎಂದರೇ ನಾನು, ನನ್ನನ್ನು, ನನ್ನ ಜ್ಞಾನವನ್ನು ಅನುಸರಿಸುವ ಮೂರು ಲಕ್ಷಮಂದಿ ಹಿಂದುಗಳನ್ನು ಒಂದೇಸಲ ಕಳೆದು ಕೊಳ್ಳಬೇಕಾಗಿ ಬರುತ್ತದೆ. ಇತರೆ ಮತಗಳಿಂದ ಒಬ್ಬ ಹಿಂದೂವನ್ನು ತಯಾರಿಮಾಡಲಾರದ ನೀವು, ಹಿಂದೂ ಮತವನ್ನು ರಕ್ಷಿಸುತ್ತೇವೆಂದು ಹೇಳುತ್ತಾ ಕೊನೆಗೆ ನೀವೇ ಹಿಂದೂ ಮತವನ್ನು ನಾಶ ಮಾಡುತ್ತಿದ್ದೀರೆಂದು ಹೇಳದೆ ತಪ್ಪುವುದಿಲ್ಲ.

ನೀವು ನನ್ನನ್ನು ಹಿಂದೂ ಎಂದರೂ ಹಿಂದೂವೇ, ಹಿಂದೂ ಅಲ್ಲವೆಂದರೂ ಹಿಂದೂವೇ. ಯಾರಾದರೇ ದೇವರ ಜ್ಞಾನವನ್ನು ತಿಳಿಯುತ್ತಾನೊ ಅವನು ಇಂದೂವೇ ಆಗುತ್ತಾನೆ. ಇತರೆ ಮತಗಳಲ್ಲಿ ಕೂಡಾ ಜ್ಞಾನಿಗಳಿದ್ದಾರೆ. ಆದ್ದರಿಂದ ಅವರು ಕೂಡಾ ಇಂದೂಗಳೇ ಆಗುತ್ತಾರೆ. ಆ ಲೆಕ್ಕಪ್ರಕಾರ ಇಂದೂ ಸಂಖ್ಯೆ ಎಲ್ಲದಕ್ಕಿಂತಲೂ ಹೆಚ್ಚಾಗಿದೆಯೆಂದು ಹೇಳಬಹುದು. ನಿಮ್ಮ ಲೆಕ್ಕ ಪ್ರಕಾರವಾದರೇ ಹಿಂದೂಗಳು ಇತರ ಮತಗಳ ಮುಂದೆ ಬಹಳ ಕಡಿಮೆ ಸಂಖ್ಯೆಯಲ್ಲಿ ಇದ್ದಾರೆಂದು ಹೇಳಬಹುದು. ಈಗ ಹೇಳಿರಿ ನನ್ನನ್ನು ಹಿಂದೂವಾಗಿ ಒಪ್ಪಿಕೊಂಡು ಹಿಂದೂ ಮತ ಸಂಖ್ಯೆಯನ್ನು ಬೆಳೆಸುತ್ತೀರೋ, ಒಪ್ಪಿಕೊಳ್ಳದೇ ಹೋಗಿ ಹಿಂದೂ ಮತ ಸಂಖ್ಯೆಯನ್ನು ಕ್ಷೀಣಿಸುವಂತೆ ಮಾಡುತ್ತೀರೋ ನೀವೇ ಆಲೋಚಿಸಿಕೊಳ್ಳಿ. ಜ್ಞಾನ ಅಂತರಂಗದಲ್ಲಿರುತ್ತದೆ ಆದರೆ ಹೊರಗೆ ಕಾಣಿ ಸುವಂತಾದ್ದಲ್ಲ. ಆದ್ದರಿಂದ ಯಾರು ಜ್ಞಾನಿಯೋ ಯಾರು ಅಜ್ಞಾನಿಯೋ ಗುರುತಿಸುವುದು ಕಷ್ಟ. ಮೂರು ಮತಗಳಿಗು ಗುರುವಾಗಿ ಇರುವ ನನ್ನನ್ನು ಹಿಂದೂ ಎಂದರೂ ಎನ್ನದಿದ್ದರೂ ನನಗೆ ಏನೂ ಫರವಾಗಿಲ್ಲ.

**ಪ್ರಶ್ನೆ :– ಸೀತೆಯನ್ನು ಅಪಹರಿಸಿಕೊಂಡು ಹೋದ ರಾವಣನು**

**ನಿನಗೆ ಒಳ್ಳೆಯವನು ಹೇಗಾಗಿದ್ದಾನೆ. ಭಗವಂತನ ಅವತಾರದಲ್ಲಿ ಹಾಗೆ ಮಾಡುವುದು ಒಳ್ಳೆಯದಾ?**

**ಉತ್ತರ :–** ಸೀತೆಯನ್ನು ಅಪಹರಿಸಿದ್ದಾನೆಂದು ನೀವೇಕೆ ಅಂದುಕೊಳ್ಳಬೇಕು? ಸೀತೆ ರಾವಣಬ್ರಹ್ಮನಿಗೆ ಹುಟ್ಟಿದ ಶಿಶುವಾಗಿ ಇದ್ದಾಗಲೇ ಸಿಕ್ಕಿದ್ದಾಳೆ. ಸೀತೆಗೆ ರಾವಣಬ್ರಹ್ಮ ಸಾಕು ತಂದೆಯಾಗಿ ಇದ್ದಾನೆ. ತನ್ನ ಮಗಳ ಸುಳಿವು ತಿಳಿದ ನಂತರ ಬಂದು ಸೀತೆಯನ್ನು ಕರೆದುಕೊಂಡು ಹೋಗಿದ್ದಾನೆ. ರಾವಣನು ತನ್ನ ತಂದೆಯೆಂದು ಸೀತೆಗೆ ತಿಳಿದಿತ್ತು. ಸೀತೆಗೆ ಐದು ವರ್ಷಗಳ ವಯಸ್ಸಿನಲ್ಲಿ ಜನಕ ಮಹಾರಾಜ ರಾವಣನ ಹತ್ತಿರದಿಂದ ದತ್ತುಪುತ್ರಿಯನ್ನಾಗಿ ಸ್ವೀಕರಿಸಿ, ಪೋಷಿಸಿ ದೊಡ್ಡವಳಾದ ನಂತರ ರಾಮನೊಂದಿಗೆ ವಿವಾಹ ಮಾಡಿದ್ದಾನೆ. ರಾವಣನು ಚಿಕ್ಕಂದಿನಲ್ಲಿ ತಂದೆಯಾದಾಗ, ಜನಕನು ಬೆಳೆಸಿದ ತಂದೆಯಾಗಿ ಇದ್ದಾನೆ. ರಾವಣ ಬ್ರಹ್ಮನಿಗೆ ಸಿಕ್ಕಿರುವ ಮಗುವೆಂದು 'ಜೈನ ರಾಮಾಯಣ'ದಲ್ಲಿ ಬರೆದಿಟ್ಟಿದ್ದಾರೆ ನೋಡಿರಿ.

**ಪ್ರಶ್ನೆ :– ರಾವಣ ಬ್ರಹ್ಮ ಸೀತೆಯನ್ನು ಮದುವೆ ಯಾಗಬೇಕೆಂಬ ಉದ್ದೇಶದಿಂದ ಸೀತೆ ಸ್ವಯಂವರಕ್ಕೆ ಹೋಗಿದ್ದಾನಲ್ಲವೆ! ಇದಕ್ಕೇನು ಹೇಳುತ್ತೀರಾ?**

**ಉತ್ತರ :–** ನಿಮ್ಮ ತಲೆ ಕೆಟ್ಟು ಹೋಗಿದೆ ಎನ್ನುತ್ತೇನೆ. ರಾವಣಬ್ರಹ್ಮನಿಗೆ ಸೀತೆ ಸ್ವಯಂವರವನ್ನು ಕುರಿತು ಲಂಕೆಗೆ ಸಮಾಚಾರವೇ ಕಳುಹಿಸಲಿಲ್ಲ. ಸಮಾಚಾರವೇ ತಿಳಿಯದಿರುವಾಗ ಹೇಗೆ ಹೋಗುತ್ತಾನೆ? ಒಂದುವೇಳೆ ಹೋದರೂ ಮಗಳ ಮದುವೆಗೆ ಹೋಗುತ್ತಾನೆ ಹೊರತು, ಸೀತೆಯನ್ನು ಮದುವೆ ಮಾಡಿಕೊಳ್ಳುವುದಕ್ಕೆ ಎಂದು ಹೇಳುವುದು ತಪ್ಪಲ್ಲವೆ! ರಾವಣಬ್ರಹ್ಮ ತ್ರಿಕಾಲ ಜ್ಞಾನಿ ಎಂದು ಹೆಸರು ಪಡೆದ ವ್ಯಕ್ತಿಯನ್ನು ಹೀಯಾಳಿಸಿ ಮಾತನಾಡುವುದು ಒಳ್ಳೆಯದಲ್ಲ.

**ಪ್ರಶ್ನೆ :– ಸೀತೆ ಅಡವಿಯಲ್ಲಿ ಇರುವಾಗ ಮಾರೀಚನನ್ನು ಬಂಗಾರದ ಜಿಂಕೆಯಂತೆ ಕಳುಹಿಸಿ ರಾಮನನ್ನು ಜಿಂಕೆ ಹಿಂದೆ**

**ದೂರವಾಗಿ ಹೋಗುವಂತೆ ಮಾಡಿ ಸೀತೆಯನ್ನು ಅಪಹರಿಸಿರುವುದು ವಾಸ್ತವವಲ್ಲವಾ?**

**ಉತ್ತರ :–** ಭೂಮಿಮೇಲೆ ಬಂಗಾರದ ಜಿಂಕೆಗಳು ಇಲ್ಲ. ಸೀತೆಯನ್ನು ರಾವಣಬ್ರಹ್ಮ ಅಪಹರಿಸಿದ್ದಾನೆ ಎನ್ನುವುದೇ ತಪ್ಪು. ಆತನು ಭಗವಂತನ ಅವತಾರ ಎಂದು ತಿಳಿಯದೆ ಹಾಗೆ ಮಾತನಾಡುತ್ತಿದ್ದಾರೆ.

**ಪ್ರಶ್ನೆ :– ಭೂಮಿ ಮೇಲೆ ಜ್ಞಾನಿಗಳು ಇರಬಹುದು, ಆತ್ಮ ಜ್ಞಾನಿಗಳು ಇರಬಹುದು. ರಾವಣ ಬ್ರಹ್ಮನನ್ನು 'ತ್ರಿಕಾಲ ಜ್ಞಾನಿ' ಎಂದು ಕರೆಯುತ್ತಿದ್ದಾರೆ. ತ್ರಿಕಾಲ ಜ್ಞಾನಿ ಅಂದರೇ ಅರ್ಥ ಏನು ಇದೆ?**

**ಉತ್ತರ :–** 'ಕಾಲ' ಎಂದರೆ 'ಕಪ್ಪನೆಯ' 'ತಿಳಿಯದ' ಎಂದು ಅರ್ಥವಿದೆ. 'ತ್ರಿ' ಎಂದರೆ 'ಮೂರು' ಎಂದು ಅರ್ಥ. ನಮ್ಮಲ್ಲಿರುವ ಮೂರು ಆತ್ಮಗಳನ್ನು ತ್ರಿಕಾಲ ಎಂದು ಹೇಳಿದ್ದಾನೆ. ತ್ರಿಕಾಲ ಎನ್ನುವ ಪದವನ್ನು ಖುರ್‌ಆನ್‌ನಲ್ಲಿ "ತೌರಾತ್" ಎಂದು ಹೇಳಿದ್ದಾರೆ. ಮೂರು ಆತ್ಮಗಳನ್ನು ತಿಳಿದವನು ರಾವಣಬ್ರಹ್ಮ ಆಗಿರುವುದರಿಂದ ಆತನನ್ನು ತ್ರಿಕಾಲ ಜ್ಞಾನಿ ಎಂದು ಕರೆಯಲಾಗಿದೆ. ರಾವಣಬ್ರಹ್ಮ ಸಾಧಾರಣವಾದ ಮನುಷ್ಯ ಅಲ್ಲವೆಂದು, ಆತನು ಭಗವಂತನೇಯೆಂದು ಹೇಳುವುದಕ್ಕೆ ಆಧಾರಗಳಿದ್ದರೂ, ಅವುಗಳನ್ನು ಗುರುತಿಸದೆ ಅನವಶ್ಯಕವಾಗಿ ಕೆಟ್ಟ ಕಾರ್ಯಗಳನ್ನು ಸೃಷ್ಠಿಸಿ ಆತನ ಮೇಲೆ ಹಾಕುವುದು ಒಳ್ಳೆಯದಲ್ಲ. ರಾವಣ ಬ್ರಹ್ಮನವೊಂದು ಪೂರ್ತಿ ಸಮಾಚಾರ ಬೇಕೆಂದರೆ ನಾವು ಬರೆದ **"ರಾವಣಬ್ರಹ್ಮ"** ಗ್ರಂಥವನ್ನು ಓದಿರಿ. ಹಾಗೇ **"ದ್ರಾವಿಡ ಬ್ರಾಹ್ಮಣ"** ಎನ್ನುವ ಗ್ರಂಥ ಕೂಡಾ ಓದಿರಿ.

**ಪ್ರಶ್ನೆ :– ರಾವಣಬ್ರಹ್ಮ ದೇವರ ಅವತಾರವಾದ ಭಗವಂತನಾದರೇ ರಾಮನ ಕೈಯ್ಯಲ್ಲಿ ಏಕೆ ಮರಣಿಸಿದ್ದಾನೆ?**

**ಉತ್ತರ :–** ಸಾವು ಹುಟ್ಟುಗಳು, ಜೀವನೋಪಾಯಗಳು ಸಾಧಾರಣ ಮನುಷ್ಯನಿಗೆ ಇದ್ದಂತೇ ಭಗವಂತನಿಗೂ ಸಹ ಇರುವುದು ಸಹಜವೇ. ಭಗವಂತನು ಹೀಗೇ ಬದುಕುತ್ತಾನೆಯೆಂದಾಗಲೀ, ಹೀಗೇ ಮರಣಿಸುತ್ತಾನೆಂದಾಗಲೀ ಏನೂ ನಿರ್ಧಾರಣೆ ಇರುವುದಿಲ್ಲ. ಆತನು ಮರಣಿಸಿರುವುದನ್ನು ಅನುಸರಿಸಿಯಾಗಲೀ, ಆತನು ಬದುಕಿರುವುದನ್ನು ಅನುಸರಿಸಿಯಾಗಲೀ ಈತನು ಭಗವಂತನೆಂದು ಹೇಳುವುದಕ್ಕೆ ಅವಕಾಶವಿಲ್ಲ. ಆದ್ದರಿಂದ ಭಗವಂತನ ವಿಷಯದಲ್ಲಿ ಅಂತಹ ವಿಷಯಗಳನ್ನು ನೋಡಬಾರದು. **ನೋಡಬೇಕಾಗಿರುವುದು ಧರ್ಮಗಳನ್ನು, ಅಧರ್ಮಗಳನ್ನು ಮಾತ್ರವೇ. ಧರ್ಮಾಧರ್ಮಗಳನ್ನು ಅನುಸರಿಸಿ ಮಾತ್ರವೇ ಭಗವಂತನನ್ನು ಗುರುತಿಸಬಹುದು. ಭಗವಂತನು ಧರ್ಮಗಳನ್ನು ಆಚರಿಸ ಬಹುದು. ಆಚರಿಸದೆ ಹೋಗಬಹುದು. ಆದರೇ ಆತನು ಅಧರ್ಮಗಳನ್ನು ಮಾತ್ರ ಇಲ್ಲದಂತೆ ಮಾಡಬೇಕೆಂದು ನೋಡುತ್ತಿರುತ್ತಾನೆ. ಅದೇ ಭಗವಂತನ ಗುರುತು.**

**ಪ್ರಶ್ನೆ :– ರಾವಣಬ್ರಹ್ಮ ಮೊದಲು ಜನ್ಮಿಸಿದ ಭಗವಂತನು ಎಂದು ನೀವು ಆಗಾಗ ಹೇಳಿದ್ದನ್ನು ಕೇಳಿದ್ದೇವೆ. ಆತನು ಬಂದು ಹೋಗಿದ್ದಾನೆ ಆತನು ಭೂಮಿ ಮೇಲೆ ಯಾವ ಧರ್ಮಗಳನ್ನು ಪ್ರತಿಷ್ಠಿಸಿದ್ದಾನೆ? ಧರ್ಮ ಸಂಸ್ಥಾಪನೆಗಾಗಿಯೇ ದೇವರು ಭಗವಂತನಾಗಿ ಹುಟ್ಟುವನು ಎಂದು ಹೇಳುತ್ತಿದ್ದೀರಲ್ಲವೆ! ಆತನು ಭಗವಂತನೆಂದು ನೀವು ಒಬ್ಬರೇ ಹೇಳುತ್ತಿದ್ದೀರ. ನೀವು ಹೇಳದೆ ಹೋದರೆ ಆತನು ಭಗವಂತನೆನ್ನುವ ಊಹೆ ಕೂಡಾ ಯಾರಿಗೂ ಬರುವುದಿಲ್ಲ. ಆತನು ಭಗವಂತನಾಗಿ ತಿಳಿಯದಿದ್ದರೂ ಆತನ ಗುರುತಿಗಾಗಿ ಭೂಮಿ ಮೇಲೆ ಏನಾದರೂ ಉಳಿದಿದೆಯಾ?**

**ಉತ್ತರ :–** ದೇವರು ಭಗವಂತನಾಗಿ ಭೂಮಿ ಮೇಲಕ್ಕೆ ಬಂದು ಹೋದರೇ ಹೊಸ ಧರ್ಮಗಳನ್ನು ಯಾವನ್ನೂ ಹೇಳುವುದಿಲ್ಲ ಆದರೆ, ಇರುವ ಧರ್ಮಗಳನ್ನು ಪುನಃ ಜ್ಞಾಪಕ ಮಾಡುವನು. ಹಾಗೆ ಜ್ಞಾಪಕ ಮಾಡುವುದೇ ಧರ್ಮಪ್ರತಿಷ್ಠಾಪನೆ

ಮಾಡಿದಂತಾಗುತ್ತದೆ. ದೇವರು ಭಗವಂತನಾಗಿ ಶರೀರವನ್ನು ಧರಿಸಿ ಬಂದರೇ ಆತನು ಅಂದಿಗಾದರೂ ಅಥವಾ ಎಂದಿಗಾದರೂ ಗುರುತಿಸಲ್ಪಡಬಹುದು ಅಥವಾ ಗುರುತಿಸಲ್ಪಡದೇ ಹೋಗಬಹುದು. ಗುರುತಿಗೂ ಆತನ ಜನ್ಮಕ್ಕೂ ಯಾವ ಸಂಬಂಧ ಇಲ್ಲ. ಭಗವದ್ಗೀತೆಯ ಪ್ರಕಾರ ಆತನು ಅನೇಕ ಬಾರಿ ಬಂದು ಹೋಗಿದ್ದಾನೆಂದು ಜ್ಞಾನಯೋಗದಲ್ಲಿ ಐದನೆ ಶ್ಲೋಕದ ಪ್ರಕಾರ ತಿಳಿಯುತ್ತಿದೆ. ಆದರೇ ನಮಗೆ ಆ ಜನ್ಮಗಳೆಲ್ಲವೂ ಎಲ್ಲೂ ಗುರುತಿಗೆ ಬರಲಿಲ್ಲ. ನಮಗೆ ಈಗ ತಿಳಿದಿರುವವು ಕೇವಲ ಮೂರು ಜನ್ಮಗಳು ಮಾತ್ರವೇ. ಆ ಮೂರು ಜನ್ಮಗಳನ್ನು ಕೂಡಾ ನಾನು ಮಾತ್ರವೇ ಹೇಳುತ್ತಿದ್ದೇನೆ. ನಾನು ಹೇಳಿದ ಜನ್ಮಗಳನ್ನು ಉಳಿದ ಮತದವರು ಯಾರೂ ಒಪ್ಪಿಕೊಳ್ಳುತ್ತಿಲ್ಲ. ಹಿಂದೂ ಮತದಲ್ಲಿ ಕೂಡಾ ಎಲ್ಲರೂ ಒಪ್ಪಿಕೊಳ್ಳುತ್ತಿಲ್ಲ. ಭೂಮಿಮೇಲೆ ತನ್ನ ಅಗತ್ಯ ಬಂದಾಗ ದೇವರು ಭಗವಂತನಾಗಿ ಬರುತ್ತಾನೆ, ಹೋಗುತ್ತಾನೆ. ಆತನು ಬಂದು ಹೋದಂತೆ ಯಾರೂ ಗುರುತಿಸುವುದಕ್ಕೆ ಅವಕಾಶ ಇಲ್ಲದಂತೆ ಮಾಡುತ್ತಾನೆ. ತನ್ನ ಜನ್ಮವನ್ನು ಕುರಿತು ತಿಳಿಯಬೇಕಾದ ಅಗತ್ಯ ಇಲ್ಲ ಆದರೆ, ತನ್ನ ಜ್ಞಾನವನ್ನು ಗುರುತಾಗಿ ತಿಳಿಯಬೇಕೆಂದು ಅಂದುಕೊಳ್ಳುತ್ತಾನೆ. ಪ್ರಸ್ತುತ ಕಾಲದಲ್ಲಿ ಭಗವಂತನು ಭೂಮಿಮೇಲೆ ಇದ್ದಾನೆಂದು ನಾನು ನಂಬುತ್ತಿದ್ದೇನೆ ನೀವು ನಂಬುತ್ತೀರಾ?

**ಪ್ರಶ್ನ :– ಭಾರತ್ ಟುಡೇ ಚಾನಲ್‌ನಲ್ಲಿ ಪ್ರತ್ಯೇಕಿಸಿ "ಪ್ರಬೋಧ ಉನ್ಮಾದಮ್" "ಧರ್ಮಪೀಠಮ್" ಎನ್ನುವ ಹೆಸರಿನಿಂದ ಒಂದು ಚರ್ಚೆ ನಡೆದಿದೆ. ಅದು ಸುಮಾರು ಒಂದು ಗಂಟೆ ಸಮಯ ನಡೆದ ಚರ್ಚೆಯಲ್ಲಿ ನಿಮ್ಮನ್ನು ಎಲ್ಲಾ ವಿಧಗಳಲ್ಲಿ ವಿಮರ್ಶಿಸುವುದು ನಡೆದಿದೆ. ಅದರಲ್ಲಿ ಭಾಗವಹಿಸಿದ ಜ್ಯೋತಿಷ್ಯ ಶಾಸ್ತ್ರಜ್ಞನು ತೇಜಶ್ವಿಶರ್ಮರವರು, ಆಧ್ಯಾತ್ಮಿಕ ಪರಿಶೋಧಕರು ಭಾಸ್ಕರ್ ರಾಜುರವರು ನಿಮ್ಮನ್ನು ಪ್ರತಿ ವಿಷಯದಲ್ಲೂ ವಿಮರ್ಶಿಸುವುದು ನಡೆದಿದೆ. ಇದಕ್ಕೆ ನೀವೇನನ್ನುತ್ತೀರಾ?**

**ಉತ್ತರ :–** ಅವರು ಮಾತನಾಡಿದ ಪ್ರತಿ ಮಾತನ್ನು ಕೇಳಿದ್ದೇನೆ. ಅವರು ನನಗಿಂತಲೂ ಎಷ್ಟೋ ಹಿಂದೆ ಹುಟ್ಟಿದವರು. ನಾನು ಸುಮಾರು 45 ವರ್ಷಗಳಿಂದ ಜ್ಞಾನವನ್ನು ಬೋಧಿಸುತ್ತಿದ್ದೇನೆ. ನನಗಿರುವ ಅನುಭವದಷ್ಟು ಕೂಡಾ ಅವರ ವಯಸ್ಸು ಇಲ್ಲ. ಜ್ಯೋತಿಷ್ಯ ಶಾಸ್ತ್ರಜ್ಞನಿಗೆ ಒಟ್ಟಾರೆ ಗ್ರಹಗಳೆಷ್ಟೋ ತಿಳಿದಿಲ್ಲ. ಪೂರ್ವದಿಂದ ಎಲ್ಲರೂ ಹಾಡಿದ ಹಾಡೇ ಹಾಡುತ್ತಾ ಗ್ರಹಗಳು ಒಂಭತ್ತೇಯೆಂದು ಹೇಳುತ್ತಿದ್ದಾನೆ. ನಾನು ಜ್ಯೋತಿಷ್ಯ ಶಾಸ್ತ್ರಕ್ಕೆ ಸಂಬಂಧಿಸಿ **"ಜ್ಯೋತಿಷ್ಯವು ಶಾಸ್ತ್ರವಾ?, ಅಶಾಸ್ತ್ರವಾ?"** ಎನ್ನುವ ಗ್ರಂಥವನ್ನು ಬರೆದಿದ್ದೇವೆ. ಅದರಲ್ಲಿ 12 ಗ್ರಹಗಳಿವೆಯೆಂದು ತಿಳಿಸಿದ್ದೇವೆ. ಶರ್ಮರವರಿಗೆ ಒಂಭತ್ತು ಮಾತ್ರವೇ ತಿಳಿದಿದೆ. ಆತನು ಕೂಡಾ ನನ್ನನ್ನು ವಿಮರ್ಶಿಸುವವನೇ. ಇನ್ನು ಆಧ್ಯಾತ್ಮಿಕ ಪರಿಶೋಧಕನು ಭಾಸ್ಕರ್ ರಾಜು ಇನ್ನೂ ಪರಿಶೋಧನೆಯಲ್ಲಿಯೇ ಇದ್ದಾನೆ. ಆತನು ಜೀವಾತ್ಮ, ಪರಮಾತ್ಮವನ್ನು ಕುರಿತೇ ಮಾತನಾಡುವನು ಆದರೇ ಆತ್ಮ ಎಂದರೆ ಏನೋ ತಿಳಿದಿಲ್ಲ. ನಾನು ಆಧ್ಯಾತ್ಮಿಕದಲ್ಲಿ ನಾಲ್ಕನೇ ಸಿದ್ಧಾಂತಕರ್ತನೆಂದು ಸಹ ತಿಳಿದಿಲ್ಲ. ಬಾಯಿ ಇದೆ ಅಲ್ಲವೇ! ಯಾವುದೋ ಒಂದು ಮಾತನಾಡುವುದು ಅವರಿಗೆ ತಿಳಿದಿದೆ. ಆಧ್ಯಾತ್ಮಿಕ ವಿದ್ಯೆಯಲ್ಲಿ ನಾನು ನೂರಕ್ಕೂ ಮೇಲ್ಪಟ್ಟು ಗ್ರಂಥಗಳನ್ನು ಬರೆದಿದ್ದೇನೆಂದು, ನನ್ನ ಗ್ರಂಥಗಳು ಎಷ್ಟೋ ಮಂದಿ ಪ್ರಮುಖರಿಂದ ಪ್ರಶಂಸಿಸಲ್ಪಡುತ್ತಿವೆಯೆಂದು ತಿಳಿದಿಲ್ಲ.

ಇವರ ಮಾತುಗಳಲ್ಲಿ ಅಸೂಯೆ ಹೊರತು ನನಗೆ ಏನೂ ಕಾಣಿಸಲಿಲ್ಲ. ಈ ದಿನ ಸಮಾಜದಲ್ಲಿ ಬಹಳ ಕಾಲದಿಂದ ನಾನು ನೋಡುತ್ತಿದ್ದೇನೆ. ಎಲ್ಲಿ ಗುರುಗಳಾಗಿ, ಸ್ವಾಮಿಗಳಾಗಿ, ಬೋಧಕರಾಗಿ ಇದ್ದರೂ ಒಬ್ಬ ಬ್ರಾಹ್ಮಣರೇ ಇರಬೇಕೆಂದು ಉಳಿದವರು ಇರಬಾರದೆಂಬ ಅಸೂಯೆ ಅವರಲ್ಲಿ ನನಗೆ ಕಾಣಿಸುತ್ತಲೇ ಇದೆ. ನಾನು ಸ್ಥಾಪಿಸಿದ 'ದ್ರಾವಿಡ ಬ್ರಾಹ್ಮಣ ಸಂಘದಲ್ಲಿ' ಎಷ್ಟೋ ಬ್ರಾಹ್ಮಣರಿದ್ದಾರೆ. ಅವರೆಲ್ಲರೂ ನನ್ನ ಬೋಧನೆಗಳು ಓದಿ ನನ್ನನ್ನು ಎಷ್ಟೋ ಪ್ರಶಂಸಿಸುತ್ತಿದ್ದಾರೆ. ಆದರೂ ಸ್ವಲ್ಪ ಮಟ್ಟಿನ ಜನರಿಗೆ ನನ್ನ ಬೆಲೆ, ನನ್ನ ಜ್ಞಾನ ತಿಳಿದಿಲ್ಲ. ಆದ್ದರಿಂದ ಅವರು ನಾವು ಹೊರತು ಇತರೆ ಕುಲದವರು ಗುರುಗಳಾಗಿ ಚಲಾವಣೆ ಆಗಬಾರದು ಎನ್ನುವ ಅಸೂಯೆಯನ್ನು ಹೊರಹಾಕುತ್ತಿದ್ದಾರೆ. ಪ್ರಸ್ತುತ ಕಾಲದಲ್ಲಿ ಬ್ರಾಹ್ಮಣೇತರರು ಬೋಧಕರಾಗಿ ಎಲ್ಲಾದರೂ ಇದ್ದರೂ

ಅವರು ಹೆಸರಿಗೆ ಬಂದಿಲ್ಲ ಆದರೆ, ಈ ದಿನ ಚೆನ್ನಾಗಿ ಪ್ರಚಾರವಾದವರು ವಿಶಾಖದಲ್ಲಿ ರಮಣಾನಂದ ಮಹರ್ಷಿಯವರು, ಪ್ರಬೋಧಾನಂದ ಯೋಗೀಶ್ವರರು. ಎಲ್ಲಿ ನೋಡಿದರೂ ಈ ಎರಡು ಹೆಸರುಗಳ ಮೇಲೆಯೇ ಈ ದಿನ ಇರುವ ಸ್ವಾಮಿಗಳೆಲ್ಲರೂ ಅಸೂಯೆಯಿಂದ ಮಾತನಾಡುತ್ತಿರುವರು. ರಮಣಾನಂದ ಮಹರ್ಷಿಯವರು ಷಿರಿಡಿ ಸಾಯಿಬಾಬಾ ರವರ ಭಕ್ತನು, ಆತನು ಬಾಬಾ ರವರನ್ನು ಕುರಿತೇ ಮಾತನಾಡುತ್ತಿರುತ್ತಾನೆ. ಆತನು ವಾಲ್ಮೀಕಿ ಕುಲಕ್ಕೆ ಸೇರಿದವನು. ನಾನು ಚೌದರೀ ಕುಲಕ್ಕೆ ಸೇರಿದವನು. ಆದರೂ ನಾನು ಯೋಗಿಯಾಗಿ ಇದ್ದೂ ಯಾವ ದೇವರನ್ನೂ ಆರಾಧಿಸದೇ ಆತ್ಮ, ಪರಮಾತ್ಮರನ್ನು ಕುರಿತೇ ಹೇಳುತ್ತಿದ್ದೇನೆ. ಒಟ್ಟಾರೆ ಬ್ರಾಹ್ಮಣ ಕುಲದವರೇ ಸ್ವಾಮಿಗಳಾಗಿ, ಬೋಧಕರಾಗಿ, ಗುರುಗಳಾಗಿ ಇರಬೇಕು. ಇತರೆ ಕುಲದವರು ಇರಬಾರದು ಎನ್ನುವ ಉದ್ದೇಶ ಚರ್ಚಾವೇದಿಕೆಗಳಲ್ಲಿ ಭಾಗವಹಿಸುವವರಲ್ಲಿ ಚೆನ್ನಾಗಿ ಕಾಣಿಸುತ್ತಿದೆ.

ಪೂರ್ವದಿಂದ ಇತರ ಕುಲದವರನ್ನು ಬೆಳೆಯದಂತೆ ತುಳಿದು ಹಾಕುವುದು ನಡೆಯುತ್ತಲೇ ಇದೆ. ಸರ್ವಸಾಧಾರಣವಾಗಿ ಇತರ ಕುಲದವರು ಅಪರೂಪವಾಗಿ ಭಕ್ತಿ ಭಾವದಲ್ಲಿದ್ದರೂ, ಇತರರಿಗೆ ಬೋಧಿಸುವ ಸಾಮರ್ಥ್ಯ ಬಹಳ ಕಡಿಮೆ ಇರುತ್ತದೆ. ಆದ್ದರಿಂದ ಬೋಧಕರಾದ ಸ್ವಾಮಿಗಳಾಗಿ, ಗುರುಗಳಾಗಿ ಚಲಾವಣೆ ಆದವರು ಅಪರೂಪವಾಗಿ ಎಲ್ಲಾದರೂ ಇದ್ದರೂ, ಅವರನ್ನು ಸಮಾಜದಲ್ಲಿ ಸ್ವಾಮಿಗಳಾಗಿ ಬೇರೂರಿಕೊಂಡು ಹೋಗಿರುವ ಒಂದೇ ಕುಲದವರು (ಬ್ರಾಹ್ಮಣರು) ಅಣಗಿ ತುಳಿದು ಮೇಲಕ್ಕೆ ಬೆಳೆಯದಂತೆ ಮಾಡಿದ್ದಾರೆ. ಗತದಲ್ಲಿ ದೊಡ್ಡ ಆಧ್ಯಾತ್ಮಿಕವೇತ್ತರಾದ ವೇಮನಯೋಗಿಯವರನ್ನು ಹಾಗೇ ಮಾಡಿ, ಆತನನ್ನು ಹುಚ್ಚನ ಕೆಳಗೆ ಸೇರಿಸಿ ಮಾತನಾಡಿದ್ದಾರೆ. ನಾನು ವೇಮನ ಯೋಗಿ ಪದ್ಯವನ್ನು ವಿವರಿಸಿ ಹೇಳಿದರೇ ಈ ಚರ್ಚೆಯಲ್ಲಿ ವೇಮನನನ್ನು ಅಸೂಯೆ ಯಿಂದ ಮಾತನಾಡುತ್ತಾ 'ಆತನು ಹೇಳಿರುವುದು ಭಗವದ್ಗೀತೇನಾ! ಅದನ್ನು ಕುರಿತು ಹೇಳಿಕೊಳ್ಳುವುದಕ್ಕೆ' ಎಂದು ಮಾತನಾಡಿದ್ದಾರೆ. ವಾಸ್ತವವಾಗಿ ವೇಮನಯೋಗಿ ಹೇಳಿದ ಚಿಕ್ಕ ಪದ್ಯದಲ್ಲಿ ಒಂದು ದೊಡ್ಡ ಗ್ರಂಥದಲ್ಲಿ ಹೇಳಿದ

ಸಾರಾಂಶವಿರುತ್ತದೆ. ಈ ಮಧ್ಯ ಕಾಲದಲ್ಲಿ ನಾನು ಹೇಳಿದ ಪ್ರವಚನದಲ್ಲಿ "ಜಲಂ" ಎನ್ನುವ ಅಂಶವನ್ನು ಮಾತನಾಡುತ್ತಾ ವೇಮನ ಪದ್ಯವನ್ನು ವಿವರಿಸಿ ಒಂದು ಗಂಟೆ ಸಮಯ ಹೇಳಿದ್ದೇನೆ. ಮೂರು ತುಣುಕುಗಳ ಚಿಕ್ಕ ಪದ್ಯವನ್ನು ವಿವರಿಸುವುದಕ್ಕೇ ಗಂಟೆ ಕಾಲ ಹಿಡಿದಿದೆಯೆಂದರೇ ಕೆಲವು ಪದ್ಯಗಳು ಒಂದೊಂದು ಒಂದು ಗ್ರಂಥ ಆಗಬಲ್ಲದು. ಅಷ್ಟು ದೊಡ್ಡದಾಗಿ ಆಧ್ಯಾತ್ಮಿಕವನ್ನು ಹೇಳಿದವನು ಸಾವಿರ ವರ್ಷಗಳಿಂದ ಎಲ್ಲೂ ಇಲ್ಲವೆಂದು ಹೇಳಬಹುದು. ಅಂತಹವನನ್ನು ಕೂಡಾ ಆತನು ಹೇಳಿರುವುದು ಜ್ಞಾನವೇ ಅಲ್ಲ ಎಂದು ಹೇಳನವಾಗಿ ಮಾತನಾಡುತ್ತಿದ್ದಾರೆಂದರೇ, ಅದಕ್ಕೆ ಕಾರಣ ಆತನು ಬ್ರಾಹ್ಮಣನು ಅಲ್ಲ. ವೇಮನ 'ರೆಡ್ಡಿ' ಕುಲಕ್ಕೆ ಸೇರಿದವನು.

ವೇಮನ ನಂತರ ಹೆಸರು ಗಳಿಸಿದವನು ಪೋತುಲೂರಿ ವೀರಬ್ರಹ್ಮಯ್ಯನ ವರು. ಆತನು ಮನುಷ್ಯರಿಗೆ ಅಲ್ಲದೆ ನಡೆಯುವ ಕಾಲಕ್ಕೆ ಜ್ಯೋತಿಷ್ಯವನ್ನು ಕಾಲಜ್ಞಾನ ಎನ್ನುವ ಹೆಸರಿನಿಂದ ಹೇಳಿದ್ದಾನೆ. ಈ ಮಧ್ಯೆ ಕಾಲದಲ್ಲಿ ವೇಮನನಂತಹ ಯೋಗಿ, ಬ್ರಹ್ಮಯ್ಯನವರಂತಹ ಗುರುವು ಇಲ್ಲವೆಂಬ ಹೆಸರು ಕೂಡಾ ಬಂದಿದೆ. ಆದರೂ ಅಂತಹವರನ್ನೂ ಸಹ ಅಜ್ಞಾನಿಗಳಾಗಿ ಚಿತ್ರಿಸಿ, ಇವರು ಮಾತನಾಡಿದ ಚರ್ಚೆಯಲ್ಲೇ ಮಾತನಾಡಿದ್ದಾರೆ. ಅವರ ಪದ್ಯವನ್ನು ಹೇಳಿದವನು ನನ್ನನ್ನು ಸಹ ಅಜ್ಞಾನಿಯೇ ಎನ್ನುವಂತೆ ಮಾತನಾಡಿದ್ದಾರೆ. ಇದೆಲ್ಲಾ ನೋಡಿದರೇ ಇತರ ಕುಲಗಳವರು ಜ್ಞಾನಿಗಳಾಗಿ ಚಲಾವಣೆ ಆಗಬಾರದೆಂದು, ಹಾಗಾದ್ರೆ ಅವರಿಗೆ ಪೈಪೋಟಿಯಾಗಿ ಬರುತ್ತಾರೆನ್ನುವ ಭಯದಿಂದ ಮಾತನಾಡುತ್ತಿದ್ದಾರೆ. ವೇಮನನನ್ನು, ಬ್ರಹ್ಮಯ್ಯನವರನ್ನೇ ಇವರು ಕಡೆಗಾಣಿಸಿ ಮಾತನಾಡಿದರೇ ನನ್ನನ್ನು ಅಸೂಯೆದಿಂದ ಮಾತನಾಡದೆ ಬಿಡುವುದಿಲ್ಲ ಅಲ್ಲವೆ! ಆದರೇ ನಾನು ಸ್ವಾಮಿ ಅಲ್ಲ, ಮುಂದೆ ಆಗುವ ಸ್ವಾಮಿಗಳಿಗೇ ಮಾರ್ಗದರ್ಶನವನ್ನು ಕೊಡುವ ಸಿದ್ಧಾಂತಕರ್ತನೆಂದು ಅವರಿಗೆ ತಿಳಿದಿಲ್ಲ. ತಿಳಿದರೂ ನನ್ನನ್ನು ಮೇಲಕ್ಕೆ ಬಾರದಂತೆ ಮಾಡಬೇಕೆನ್ನುವುದೇ ಇವರ ಉದ್ದೇಶ. ಇತರೆ ಕುಲಗಳ ಮೇಲೆ ಆಧಾರಪಟ್ಟು ಬದುಕುತ್ತಿರುವುದು ಅವರೇ ಆದರೂ ಇತರೆ ಕುಲಗಳ ಮೇಲೆ ವಿಷವನ್ನು ಕಕ್ಕುತ್ತಿದ್ದಾರೆಂದು ಇತ್ತೀಚೆಗೆ

ಎಲ್ಲ ಕುಲದವರು ತಿಳಿದುಕೊಳ್ಳುತ್ತಿದ್ದಾರೆಂದು, ಭವಿಷ್ಯತ್ತಿನಲ್ಲಿ ಅವರಿಗೆ ಮರ್ಯಾದೆ ಇಲ್ಲದಂತೆ ಹೋಗುತ್ತದೆಂದು ತಿಳಿದುಕೊಳ್ಳಲಾರದೆ ಹೋಗುತ್ತಿದ್ದಾರೆ.

**ಪ್ರಶ್ನೆ :– T.V ಗಳಲ್ಲಿ ನಡೆಯುವ ಬಹಳ ಚರ್ಚಾವೇದಿಕೆಗಳಲ್ಲಿ ನಾವು ಚೆನ್ನಾಗಿ ಗಮನಿಸಿದರೇ ನಿಮ್ಮನ್ನು ಪ್ರಜೆಗಳಿಗೆ ದೂರ ಮಾಡಬೇಕೆನ್ನುವ ಭಾವನೆಯಿಂದ ನೀವು ಹೆಚ್ಚಾಗಿ ದೇವತೆಗಳನ್ನು ದೂಷಿಸುತ್ತಿದ್ದೀರೆಂದು ಹೇಳಿ ಕೆಟ್ಟದಾಗಿ ಪ್ರಚಾರ ಮಾಡುತ್ತಿದ್ದಾರೆ. ನಿಮ್ಮ ಮೇಲೆ ಅವರಿಗೆ ದೊಡ್ಡದಾಗಿ ಸಿಕ್ಕಿರುವ ಆರೋಪಣೆ ಅದೇ. ಅದನ್ನು ಆಯುಧವಾಗಿ ಉಪಯೋಗಿಸುವಂತೆ ಉಪಯೋಗಿಸುತ್ತಾ, ನಿಮ್ಮನ್ನು ಪ್ರತಿಯೊಂದು ಕಡೆ ವಿಮರ್ಶಿಸುತ್ತಾ ರಾಮನನ್ನು ದೂಷಿಸಿದ್ದಾನೆಂದೂ, ದೇವತೆಗಳನ್ನು ನಿಂದಿಸಿದ್ದಾನೆಂದು, ಇತರ ಮತ ಬೋಧನೆಗಳು ಹೇಳುತ್ತಿದ್ದಾನೆಂದು ಹೇಳುತ್ತಿದ್ದಾರೆ. ನಿಮ್ಮ ವಿಷಯ ತಿಳಿದವರು, ನಿಮ್ಮ ಗ್ರಂಥಗಳು ಓದಿದವರು ಅವರ ಮಾತುಗಳನ್ನು ಲೆಕ್ಕ ಮಾಡುತ್ತಿಲ್ಲ. ಅವರು ಅಸೂಯೆಯಿಂದ ಮಾತನಾಡುತ್ತಿದ್ದಾರೆಂದು ಹೇಳುತ್ತಾ ಅವರ ಮೇಲೆ ಎದುರು ದಾಳಿ ಮಾಡಿದಂತೆ ಮಾತನಾಡುತ್ತಿದ್ದಾರೆ. ಪ್ರಬೋಧಾನಂದ ಸ್ವಾಮಿ ಹೇಳಿದ ಜ್ಞಾನದಲ್ಲಿ ಸ್ವಲ್ಪ ಮಟ್ಟಿನ ಜ್ಞಾನ ಕೂಡಾ ನಿಮ್ಮ ಹತ್ತಿರ ಇಲ್ಲವೆಂದು, ನೀವು ಮಾತನಾಡುವ ಮಾತುಗಳೆಲ್ಲವೂ ಪ್ರಬೋಧಾನಂದ ಸ್ವಾಮಿಯನ್ನು ಅಸೂಯೆದಿಂದ ಮಾತನಾಡುವುದು ಹೊರತು ಏನೂ ಇಲ್ಲವೆಂದು ಅನ್ನುತ್ತಿದ್ದಾರೆ. ನಿಮ್ಮ ಜ್ಞಾನದಲ್ಲಿ ಒಂದು ಗ್ರಂಥವನ್ನು ಓದಿದವರಾಗಲೀ, ಒಂದು**

ಪ್ರವಚನವನ್ನು ಕೇಳಿದವರಾಗಲೀ ಅವರ ಮಾತುಗ ಳನ್ನು ಲೆಕ್ಕ ಮಾಡದೇ ಎದುರು ತಿರುಗಿ ಮಾತನಾಡುತ್ತಿದ್ದಾರೆ. ನಿಮ್ಮ ಜ್ಞಾನದಿಂದ ಜೈಲಿನಲ್ಲಿರುವ ಖೈದೀಗಳು ಸಹಿತ ಬದಲಾವಣೆ ಹೊಂದುತ್ತಿದ್ದಾರೆಂದು, ಕೆಟ್ಟ ಮಾರ್ಗದಲ್ಲಿ ಹೋಗುವವರು ಒಳ್ಳೆಯ ಮಾರ್ಗದೊಳಗೆ ಬರುತ್ತಿದ್ದಾರೆಂದು ಈ ದಿನ ಬಹಳ ಜನರಿಗೆ ತಿಳಿದುಹೋಗಿದೆ. ಒಂದು ವಿಧವಾಗಿ ಹೇಳಿದರೇ ನೀವು ಟಿ.ವಿಗಳಲ್ಲಿ ಉಪನ್ಯಾಸಗಳು ಕೊಡದಿದ್ದರೂ, ಹೊರಗೆ ಬಂದು ಪ್ರಚಾರ ಮಾಡದಿದ್ದರೂ, ಎಲ್ಲೋ ಯಾರಿಗೂ ಕಾಣಿಸದಂತಿದ್ದು, ಗ್ರಂಥಗಳ ಮೂಲಕವೇ ಜ್ಞಾನವನ್ನು ಪ್ರಚಾರ ಮಾಡಿದರೂ, ನಿಮ್ಮ ಜ್ಞಾನ ಗತ ಚರಿತ್ರೆಯಲ್ಲಿ ಎಂದೂ ಯಾವ ಜ್ಞಾನ ಹರಡದಷ್ಟು ವೇಗವಾಗಿ ಹರಡಿಹೋಗಿದೆ.

ಅಷ್ಟೇ ಅಲ್ಲದೆ ನಿಮ್ಮ ಜ್ಞಾನಕ್ಕೆ ಎಲ್ಲಾ ಕುಲದವರೂ ಆಕರ್ಷಿತರಾಗುತ್ತಿದ್ದಾರೆ. ಎಂದಿಗೂ ಜ್ಞಾನವೆಂದರೆ ಏನೋ ತಿಳಿಯದ ಶೂದ್ರರು, ಶೂದ್ರರಲ್ಲಿ ಕಡಿಮೆ ಕುಲದವರೆಂದು ಅನ್ನುತ್ತಿರುವ ಹರಿಜನರು ಮೊದಲುಗೊಂಡು ಜ್ಞಾನವನ್ನು ಕುರಿತು ನಾವು ಜ್ಞಾನಿಗಳು ಎಂದುಕೊಂಡ ಬ್ರಾಹ್ಮಣರನ್ನು ಎದುರಿಸಿ ಮಾತನಾಡುತ್ತಿದ್ದಾರೆ. ಶೂದ್ರರೇ ಅಲ್ಲದೆ ಎಲ್ಲರಿಗಿಂತಲೂ ನಾವು ದೊಡ್ಡ ಕುಲದವರೆನ್ನುವ ಬ್ರಾಹ್ಮಣರು ಸಹಿತ ತಮ್ಮಲ್ಲಿನ ಅಹಂ ಅನ್ನು ಇಲ್ಲದಂತೆ ಮಾಡಿಕೊಂಡು, ಪ್ರಬೋಧಾನಂದ ಸ್ವಾಮಿಯೇ ನಮಗೆ ನಿಜವಾದ ಗುರುವು ಎನ್ನುತ್ತಿದ್ದಾರೆ. ಕೆಲವರು

ಬ್ರಾಹ್ಮಣರು ಹಾಗೆ ಮಾತನಾಡುವುದು ತಾವು ತಯಾರು ಮಾಡಿದ "ದ್ರಾವಿಡ ಬ್ರಾಹ್ಮಣ ಸಂಘ" ದಲ್ಲಿ ಸದಸ್ಯರಾಗಿ ಸೇರಿ, ಸಂಘವನ್ನು ನಡೆಸುವುದನ್ನು ನೋಡಿದ ಇನ್ನೂ ಕೆಲವರು ಬ್ರಾಹ್ಮಣರಿಗೆ ಸ್ವಲ್ಪವೂ ಸರಿಹೋಗಲಿಲ್ಲ. ಅದರಿಂದ ಅವರು ನಿಮ್ಮನ್ನು ಕೆಟ್ಟದಾಗಿ ಪ್ರಚಾರ ಮಾಡಬೇಕೆಂದುಕೊಂಡು, ಹಾಗೆ ಕೂಡಾ ಬೇರೆ ದಾರಿ ಸಿಗದೆ ನೀವು ದೇವತೆಗಳನ್ನು ದೂಷಿಸಿದ್ದೀರೆಂದು, ರಾಮನನ್ನು ದೇವರಲ್ಲ ಎಂದಿದ್ದೀರೆಂದು ಹೇಳುವುದು ಶುರು ಮಾಡಿದ್ದಾರೆ. ಇವರ ಪ್ರಚಾರದಲ್ಲಿ ಭಾಗವಾಗಿ ಕೆಲವರನ್ನು ಹಿಂದೂಗಳನ್ನು ಸಹ ಬೆರೆಸಿಕೊಂಡು, ಅವರಿಂದ ಪ್ರಬೋಧಾನಂದನಿಗೆ ವಿರುದ್ಧವಾಗಿ ಮಲ್ಟಿ ಮೀಡಿಯಾದಲ್ಲಿ, ಯೂಟ್ಯೂಬ್‌ಗಳ ಮೂಲಕ, ವಾಟ್ಸಾಪ್ ಮೆಸೇಜ್‌ಗಳ ಮೂಲಕ ಕೆಟ್ಟದಾಗಿ ಹೇಳಿಸುತ್ತಿದ್ದಾರೆ. ಕೆಲವರು ಹೊತ್ತು ಕಳೆಯದವರು, ಕೆಲಸವಿಲ್ಲದೆ ಬದುಕಲಾರದವರು ಅವರ ಹೊಟ್ಟೆ ಪಾಡಿಗಾಗಿ ಹಣವನ್ನು ತೆಗೆದುಕೊಂಡು ನಿಮ್ಮನ್ನು ದೂಷಿಸುವುದು ಸಹ ನಮಗೆ ತಿಳಿದಿದೆ. ನಮಗೇ ಅಲ್ಲದೆ ಆ ವಿಷಯ ಬಹಳ ಜನರಿಗೂ ಸಹ ತಿಳಿದಿದೆ. ಆದ್ದರಿಂದ ಅವರ ದುಷ್ ಪ್ರಚಾರ ನಿಮ್ಮ ಜ್ಞಾನದ ಮುಂದೆ ನಿಲ್ಲಲಾರದೆ ಹೋಗುತ್ತಿದೆ. ಪ್ರತಿ ದಿನ ನೂರು ಮಂದಿ ಪ್ರಕಾರ ಪ್ರತಿ ತಿಂಗಳು ಮೂರು ಸಾವಿರ ಮಂದಿ ನಿಮ್ಮ ಭಕ್ತರಾಗಿ ಬದಲಾಗುತ್ತಿದ್ದಾರೆ.

ನೀವು ಏನು ಹೇಳಿದರೂ ಸತ್ಯವೇ ಹೇಳುವರೆನ್ನುವ ನಂಬಿಕೆ ಈ ದಿನ ಎಲ್ಲರಲ್ಲಿ ಇದೆ. ಒಂದು ಸಮಯದಲ್ಲಿ ನಾವು ಕೂಡಾ ನಿಮ್ಮನ್ನು ಕೆಟ್ಟದಾಗಿ ಅಂದುಕೊಂಡಿದ್ದೇವೆ. ನಂತರ ನೀವು ಏನು ಹೇಳುತ್ತಿದ್ದೀರೋ ನೋಡಬೇಕೆಂದು ಗ್ರಂಥಗಳನ್ನು ಓದಿದ್ದೇವೆ. ಅಂದಿನಿಂದ ನಾವೂ ಸಹ ಬದಲಾವಣೆ ಹೊಂದಿ ಇತರರಿಗೆ ಜ್ಞಾನವನ್ನು ಹೇಳುವ ಸಾಮರ್ಥ್ಯ ಹೊಂದಿದ್ದೇವೆ. ನಾವೇ ಅಲ್ಲ ನಿಮ್ಮ ಜ್ಞಾನ ತಿಳಿದ ಜ್ಞಾನಿಗಳೊಂದಿಗೆ ತೆಲಂಗಾಣಾ ರಾಷ್ಟ್ರದಲ್ಲಿ ಭೇಟಿಮಾಡಿದ್ದೇವೆ. ನಾವು ಭೇಟಿಮಾಡಿರುವುದು ಟೀಚರ್ ಆಗಿ ಕೆಲಸ ಮಾಡುತ್ತಿರುವ ಮುಸ್ಲೀಮ್ ರೊಂದಿಗೆ. ಆತನು ನಾವು ಕೇಳಿದ ಪ್ರಶ್ನೆಗಳಿಗೆ ತನ್ನ ಹತ್ತಿರ ಇರುವ ಎಂಟು ವರ್ಷಗಳ ವಯಸ್ಸಿರುವ ಹುಡುಗನಿಂದ ಸಮಾಧಾನವನ್ನು ಹೇಳಿಸಿದ್ದಾನೆ. ಅಷ್ಟು ಚಿಕ್ಕ ವಯಸ್ಸಿರುವ ಹುಡುಗ ನಿಮ್ಮ ಜ್ಞಾನವನ್ನು ತಡವರಿಸದೆ ಹೇಳುವುದು ನಮಗೆ ಆಶ್ಚರ್ಯ ವೆನಿಸಿತು. ಆಗ ನಮಗೆ ಜ್ಞಾನೋದಯವಾದಂತೆ ನಿಮ್ಮ ಜ್ಞಾನ ಎಷ್ಟು ದೊಡ್ಡದೋ ಅರ್ಥವಾಯಿತು. ಆದರೂ ಈ ದಿನ ಬಹಳ ಜನ ಬ್ರಾಹ್ಮಣರಾಗಿರುವ ಸ್ವಾಮೀಜೀಯರು, ಗುರುಗಳು, ಆಧ್ಯಾತ್ಮಿಕವೇತ್ತರೆನ್ನುವವರು ನಿಮ್ಮನ್ನು ಕುರಿತು ಮಾಡುವ ದುಷ್ ಪ್ರಚಾರವನ್ನು ಕುರಿತು ನೀವು ಏನು ಹೇಳುತ್ತೀರೋ ಕೇಳಬೇಕೆಂಬ ಕೋರಿಕೆ ಇದೆ. ಮುಖ್ಯವಾಗಿ ನಿಮಗೆ ದೇವತೆಗಳೆಂದರೇ ಸರಿಹೋಗುವುದಿಲ್ಲ ಎನ್ನುತ್ತಿದ್ದಾರೆ. ಈ ದಿನ ಸಮಾಜದಲ್ಲಿ ಎಲ್ಲರೂ ಅಂದರೆ ಹಿಂದುಗಳೆಲ್ಲರೂ ದೇವತೆಗ

**ಳನ್ನು ಯಾವುದೋ ಒಂದು ರೂಪವಾಗಿ ಆರಾಧಿಸುತ್ತಿದ್ದಾರೆ. ಅಂತಹವರು ನಿಮ್ಮನ್ನು ಕೆಟ್ಟದಾಗಿ ಅರ್ಥಮಾಡಿಕೊಳ್ಳುವ ಅವಕಾಶ ಇದೆ. ಆದ್ದರಿಂದ ಇದಕ್ಕೆ ಏನು ಉತ್ತರ ಹೇಳಬೇಕೆಂದುಕೊಂಡಿದ್ದೀರ?**

**ಉತ್ತರ :–** ಈ ದಿನ ಸಮಾಜದಲ್ಲಿ ಬ್ರಾಹ್ಮಣರು ಬೋಧಕರಾಗಿ, ಸ್ವಾಮೀಜೀಗಳಾಗಿ, ಗುರುಗಳಾಗಿ, ಅನೇಕ ದೇವಾಲಯಗಳಲ್ಲಿ ಪೂಜಾರಿಗಳಾಗಿ ಇದ್ದೂ, ಅವರ ಆದಾಯಕ್ಕೆ ನಾವು ಅಡ್ಡಿ ಆಗುವಂತೆ, ಅವರ ಮರ್ಯಾದೆಗೆ ಧಕ್ಕೆ ಉಂಟಾಗುವಂತೆ, ಸಮಾಜದಲ್ಲಿ ಅವರಿಗಿರುವ ಸ್ಥಾನ ಹೋಗುತ್ತದೇನೋ ಎನ್ನುವಂತೆ ಭಯಪಟ್ಟು ಕೊನೆಗೆ ಏನೂ ಮಾಡದೇ ಅವರ ಕೈಲಾಗಿದ್ದು ದುಷ್ಪ್ರಚಾರವೇ ಆಗಿರುವುದರಿಂದ ಎಲ್ಲರೂ ಒಗ್ಗೂಡಿ ಮಾತನಾಡಿಕೊಂಡು, ನನ್ನನ್ನು ಕೆಟ್ಟದಾಗಿ ತೋರಿಸಬೇಕೆಂದು ಎಷ್ಟೋ ಪ್ರಯತ್ನಗಳು ಮಾಡುತ್ತಿದ್ದಾರೆ. ಅವರ ಲೆಕ್ಕದಲ್ಲಿ ನನ್ನನ್ನು ಶೂದ್ರನನ್ನಾಗಿ ತಿಳಿದು ಕ್ಷುದ್ರವಾದವರು ಶೂದ್ರರೆಂದು ಅಂದರೆ ನೀಚವಾದವರು ಶೂದ್ರರೆಂದು ಅವರಿಗೆ ಜ್ಞಾನ ಇರುವುದಿಲ್ಲವೆನ್ನುವಂತೆ ಮಾತನಾಡುತ್ತಿದ್ದಾರೆ. ಇಂದಿನ ವಿಷಯವೇ ಅಲ್ಲದೆ ಪೂರ್ವದಿಂದ ಇವರು ಹೇಗೆ ಪ್ರವರ್ತಿಸುತ್ತಿದ್ದಾರೋ ವಿವರವಾಗಿ ಹೇಳುವೆನು ಕೇಳಿರಿ. ಗತದಲ್ಲಿ ಮನುಷ್ಯರನ್ನು ನಾಲ್ಕು ಭಾಗಗಳಾಗಿ ವಿಭಜಿಸಿ, ಅದರಲ್ಲಿ ಮೊದಲ ವಿಧದವರಾಗಿ, ಉನ್ನತರಾಗಿ, ಬ್ರಹ್ಮ ಜ್ಞಾನ ತಿಳಿದ ಬ್ರಾಹ್ಮಣರಾಗಿ ತಮ್ಮನ್ನು ತಾವು ಹೇಳಿಕೊಂಡಿದ್ದಾರೆ. ಎರಡನೇ ಸ್ಥಾನದಲ್ಲಿ ಸ್ವಲ್ಪ ಬುದ್ಧಿವಂತರಾದವರನ್ನಿಟ್ಟು ಅವರನ್ನು ವೈಶ್ಯರನ್ನಾಗಿ ಹೇಳಿದ್ದಾರೆ. ಮೂರನೇ ಸ್ಥಾನದಲ್ಲಿ ಕೆಲವರನ್ನು ಕ್ಷತ್ರಿಯರನ್ನಾಗಿ ಆಯ್ಕೆ ಮಾಡಿಕೊಂಡಿದ್ದಾರೆ. ಅಂದಿನ ಕಾಲ ಸ್ಥಿತಿ ಗತಿಗಳನ್ನು ಅನುಸರಿಸಿ ಹಾಗೆ ಮೊದಲು ಮೂರು ವಿಧದವರನ್ನು ತಯಾರು ಮಾಡುವುದು ನಡೆದಿದೆ.

ಪೂರ್ವದಲ್ಲಿ ಪ್ರಜೆಗಳು ಪಾಲಕರು ಎನ್ನುವ ಎರಡು ವಿಧಗಳು ಇರುತ್ತಿದ್ದರು. ಪಾಲಕರಲ್ಲಿ ಇವರು ಮುಖ್ಯರು, ಇವರು ಸ್ವಲ್ಪ ಮುಖ್ಯರು

ಎಂದು ಮೂರು ವರ್ಗಗಳಾಗಿ ಇರುತ್ತಿದ್ದರು. ಇವರಲ್ಲಿ ಮೂರನೇ ವಿಧವಾದ ಕ್ಷತ್ರಿಯರನ್ನು ರಾಜನಾಗಿ ತಯಾರು ಮಾಡಿದ್ದಾರೆ. ನಂತರ ಎರಡನೆ ವಿಧದವರಾದ ವೈಶ್ಯರನ್ನು ರಾಜನ ನಂತರ ಮಂತ್ರಿಯನ್ನಾಗಿ ತಯಾರು ಮಾಡಿದ್ದಾರೆ. ಆ ನಂತರ ಮೊದಲ ವಿಧವಾದ ತಮ್ಮನ್ನು ರಾಜ ಗುರುಗಳಾಗಿ ಹೇಳಿಕೊಂಡಿದ್ದಾರೆ. ಮೇಲ್ನೋಟಕ್ಕೆ ರಾಜ ದೊಡ್ಡವನು ಎನ್ನುವಂತೆ ಕಾಣಿಸಿದರೂ, ಮಂತ್ರಿ ಸಲಹೆ ತೆಗೆದುಕೊಂಡೇ ರಾಜ ಕೆಲಸ ಮಾಡುವನು. ಆದ್ದರಿಂದ ರಾಜನಿಗಿಂತಲೂ ಮಂತ್ರಿಯೇ ಮುಖ್ಯ. ರಾಜ, ಮಂತ್ರಿ ರಾಜಗುರುವಿನ ಸಲಹೆ ತೆಗೆದುಕೊಂಡೇ ಕೆಲಸ ಮಾಡುವರು. ಆದ್ದರಿಂದ ಮೇಲ್ನೋಟಕ್ಕೆ ಕೊನೆಯದವರಾಗಿ (ಮೂರನೆ ಯವರಾಗಿ) ಬ್ರಾಹ್ಮಣರು ಇದ್ದರೂ ಕಾಣಿಸದಂತೆ ಮೊದಲನೆಯದವ ರಾಗಿ ಬ್ರಾಹ್ಮಣರಿರುವಂತೆ ಮಾಡಿಕೊಂಡಿದ್ದಾರೆ. ನೋಡಿರಿ ಅಂದಿನ ಕಾಲದಲ್ಲೇ ಎಷ್ಟು ಬುದ್ಧಿಯನ್ನು ಉಪಯೋಗಿಸಿದ್ದಾರೋ? ಮೇಲ್ನೋಟಕ್ಕೆ ಕಾಣಿಸುವಂತೆ ಮೊದಲನೆಯವನು ರಾಜ, ಎರಡನೆಯವನು ಮಂತ್ರಿ, ಮೂರನೆಯವನು ಗುರುವು ಎನ್ನುವಂತಿದ್ದರೂ, ಕಾಣಿಸದಂತೆ ತತಂಗವನ್ನು ನಡೆಸುವವರು ಮೊದಲನೆಯವನಾದ ಗುರುವು, ಎರಡನೆಯವನು ಮಂತ್ರಿ, ಮೂರನೆಯವನು ರಾಜನಾಗಿ ಇದ್ದಾನೆ. ಈ ಮೂರು ಪದವಿಗಳು ಕಾಣಿಸುವ ವಿಧವಾಗಿ ಒಂದು ರೀತಿ, ಕಾಣಿಸದ ವಿಧವಾಗಿ ಮತ್ತೊಂದು ರೀತಿಯಾಗಿ ಇರುವಂತೆ ತಿಳಿದುಹೋ ಗುತ್ತಿದೆ. ಇವರು ಮೂವರು ಹೇಗಿದ್ದರೂ ಇವರೇ ಪಾಲಿಸುವವರು. ಪಾಲಿ ಸಲ್ಪಡುವ ಪ್ರಜೆಗಳೆಲ್ಲರೂ ಅನೇಕ ಕುಲಗಳಾಗಿ ಇರುವಂತೆ ಬ್ರಾಹ್ಮಣರೇ ಸೀಳಿಸಿದ್ದಾರೆ. ಕುಲಗಳನ್ನು ಅವುಗಳ ವೃತ್ತಿಗಳನ್ನು ಬ್ರಾಹ್ಮಣರೇ ನಿರ್ಣಯಿಸಿದ್ದಾರೆ. ಪಾಲಿಸುವವರು ಪವಿತ್ರರೆಂದು, ಉನ್ನತರೆಂದು ಹೇಳುತ್ತಾ, ಪಾಲಿಸಲ್ಪಡುವ ಪ್ರಜೆಗಳು ಶೂದ್ರರೆಂದು, ನೀಚರೆಂದು ಹೇಳಿದ್ದಾರೆ. ಶೂದ್ರರು ಎಂದರೇ ಕಡಿಮೆ ಜಾತಿಯವರೆಂದು ಹೇಳುತ್ತಾ, ಅವರಲ್ಲಿ ಕೂಡಾ ಅನೇಕ ಕುಲಗಳನ್ನು ಕಲ್ಪಿಸಿದ್ದಾರೆ. ಕೊನೆಗೆ ಪಂಚಮರೆಂದು ಅಂದರೆ ಐದನೆಯವರೆಂದು ಅದೇ ಮಾದಿಗ ಕುಲವೆಂದು ಕೂಡಾ ಹೆಸರು ಇಟ್ಟಿದ್ದಾರೆ. ಮೊದಲು ಬ್ರಾಹ್ಮಣ, ವೈಶ್ಯ, ಕ್ಷತ್ರಿಯ, ಶೂದ್ರ ಎಂದು ನಾಲ್ಕು ಭಾಗಗಳಾಗಿ ಮನುಷ್ಯರನ್ನು ವಿಭಜಿಸಿ ನಂತರ ಶೂದ್ರರಲ್ಲಿ ನೀಚಾತಿ ನೀಚರೆನ್ನುವಂತೆ ಒಂದು ಕುಲವನ್ನು ಪ್ರಕಟಿಸಿದ್ದಾರೆ. ಈ ವಿಧವಾಗಿ

ತಾವು ಉನ್ನತ ಸ್ಥಾನದಲ್ಲಿ ಇದ್ದೂ ಉಳಿದ ವೈಶ್ಯ, ಕ್ಷತ್ರಿಯರನ್ನು ಕೂಡಾ ಸ್ವಲ್ಪ ಬೆಲೆ ಕೊಟ್ಟು ಕೊನೆಯ ಸ್ಥಾನದಲ್ಲಿ ಶೂದ್ರರನ್ನು ತಯಾರು ಮಾಡಿದ್ದಾರೆ. ಅಂದರೆ ದೇವರು ಸಮಾನವಾಗಿ ಹುಟ್ಟಿಸಿದ ಪ್ರಜೆಗಳನ್ನು ಈ ವಿಧವಾಗಿ ಬ್ರಾಹ್ಮಣರು ಸೀಳಿಸಿಹಾಕಿದ್ದಾರೆ.

ಈ ವಿಷಯಗಳು ಇಂದಿನ ಕಾಲದಲ್ಲಿ ಪ್ರಜೆಗಳಿಗೆ ತಿಳಿದಿಲ್ಲ. ಅಂದಿನ ಕಾಲದಲ್ಲಿ ಅಂದರೆ ಪೂರ್ವದಲ್ಲಿ ರಾಜರ ವ್ಯವಸ್ಥೆ ಇದ್ದರೂ ಕೆಲವು ಪ್ರಾಂತಗಳಿಗೆ ಒಬ್ಬ ರಾಜ ಇರುತ್ತಿದ್ದನು. ರಾಜನಿಗೆ ಗುರುವಾಗಿ ಒಬ್ಬ ಬ್ರಾಹ್ಮಣನು ಇರುತ್ತಿದ್ದನು. ಹಾಗೇ ಮಂತ್ರಿಯಾಗಿ ಒಬ್ಬ ವೈಶ್ಯನು ಇರುತ್ತಿದ್ದನು. ಉಳಿದ ವೈಶ್ಯರೆಲ್ಲರೂ ಸುಲಭವಾಗಿ ಬದುಕುವ ವ್ಯಾಪಾರ ವ್ಯವಸ್ಥೆಯನ್ನು ಆರಿಸಿಕೊಂಡು, ಅವರಿಗಿಂತ ಸುಲಭವಾಗಿ ಬದುಕುವುದಕ್ಕೆ ಪುರೋಹಿತರು, ಪೂಜಾರಿಗಳಾಗಿ ಉಳಿದ ಬ್ರಾಹ್ಮಣರು ಇರುತ್ತಿದ್ದರು. ಉಳಿದ ಶೂದ್ರರೆಲ್ಲರೂ ಎಲ್ಲ ಕೆಲಸಗಳನ್ನು ಮಾಡುತ್ತಾ, ಜೀವನ ವ್ಯವಸ್ಥೆ ಎಲ್ಲರಿಗೂ ಸಮವಾಗಿ ನಡೆಯುವಂತೆ ನೋಡುತ್ತಿದ್ದರು. ಉಳಿದ ಜೀವನ ವ್ಯವಸ್ಥೆಯಲ್ಲಿ ಕಮ್ಮಾರ, ಕುಂಬಾರ, ಅಗಸ, ಕ್ಷೌರಿಕ ಎನ್ನುವ ಅನೇಕ ಕೆಲಸಗಳು ಮಾಡುವುದೇ ಅಲ್ಲದೆ ಕೆಲವು ಕುಲಗಳನ್ನು ರೈತರನ್ನಾಗಿ ಭೂಮಿಯಲ್ಲಿ ಬೆಳೆಗಳನ್ನು ಬೆಳೆಸುವವರನ್ನಾಗಿ ನೇಮಿಸಿದ್ದಾರೆ. ವೈಶ್ಯರ ಹತ್ತಿರಕ್ಕೆ ನಿತ್ಯಾವಸರ ವಸ್ತುಗಳಿಗೆ ಪ್ರಜೆಗಳು ಹೋಗುತ್ತಾರೆ ಆದ್ದರಿಂದ ಅವರು ಸುಲಭವಾಗಿ ಬದುಕಬಲ್ಲರು. ಉಳಿದ ಪೂಜಾರಿಗಳು ಬದುಕಬೇಕೆಂದರೆ ಅನೇಕವಾದ ಗುಡಿಗಳನ್ನು, ಅದರಲ್ಲಿ ಅನೇಕ ದೇವತೆಗಳನ್ನು ತಯಾರಿ ಮಾಡಿಟ್ಟು ಪ್ರಜೆಗಳನ್ನು ಆಯಾ ದೇವತಾ ಭಕ್ತರನ್ನಾಗಿ ಬೇರ್ಪಡಿಸಿದ್ದಾರೆ. ಆ ಕೆಲಸದಲ್ಲಿನ ಭಾಗವಾಗಿ ಮನೆ ದೇವರು, ಕುಲ ದೇವರು ಎಂದು ಎಲ್ಲರಿಗೂ ಕಲ್ಪಿಸಿದ್ದಾರೆ. ಪ್ರಜೆಗಳು ವರ್ಷವೆಲ್ಲಾ ಯಾವ ಕೆಲಸ ಮಾಡಿ ಬದುಕಿದರೂ ತಪ್ಪದೆ ಸ್ವಲ್ಪ ಮುಡುಪನ್ನು (ಹಣದ ರೂಪದಲ್ಲಿ) ಸ್ವಲ್ಪ ಧಾನ್ಯದಲ್ಲಿ ಸಂವತ್ಸರಕ್ಕೆ ಒಂದು ಬಾರಿ ಕೊಡುವಂತೆ ಏರ್ಪಾಟನ್ನು ಮಾಡಿದ್ದಾರೆ. ಆ ವಿಧಾನ ಇಂದಿಗೂ ಇದೆ. ಪೂಜಾರಿಗಳಾಗಿ ಇರುವ ತಮ್ಮವರಾದ ಬ್ರಾಹ್ಮಣರು ಗುಡಿಗೆ ಭಕ್ತಿ ರೂಪದಲ್ಲಿ ಬಂದಿರುವ ಧನ, ಧಾನ್ಯಗಳಿಂದ ಸುಲಭವಾಗಿ ಬದುಕುವಂತೆ ಮಾಡಿದ್ದಾರೆ. ತಮ್ಮ ಜೀವನೋಪಾಯಕ್ಕಾಗಿ ಏರ್ಪಾಟು ಮಾಡಿದ ದೇವತಾ ವ್ಯವಸ್ಥೆ ಇಂದಿಗೂ

ಇದೆ. ಹಾಗೇ ವ್ಯಾಪಾರ ವ್ಯವಸ್ಥೆ ಸಹ ಇಂದಿಗೂ ಇದೆ. ರಾಜರು, ರಾಜ್ಯ ವ್ಯವಸ್ಥೆ ಪೂರ್ತಿ ರೂಪ ಬದಲಾಗಿ ಹೋಗಿದೆ. ರಾಜವಂಶಸ್ಥರು ಈ ದಿನ ಬಜಾರುಗಳಲ್ಲಿ ಮೂಟೆಗಳನ್ನು ಹೊರುತ್ತಾ, ಅನೇಕ ಕಷ್ಟಗಳನ್ನು ಪಡುತ್ತಾ, ಸಿಕ್ಕಿರುವ ಕೆಲಸವನ್ನು ಮಾಡುತ್ತಾ ಬದುಕುತ್ತಿದ್ದಾರೆ. ಕ್ಷತ್ರಿಯ ವಂಶ, ರಾಜರು ಎನ್ನುವ ಹೆಸರಿನಿಂದ ಇಂದಿಗೂ ಇದೆ ಆದರೆ, ಅವರಿಗೆ ರಾಜ್ಯಗಳು ಇಲ್ಲ. ಬ್ರಾಹ್ಮಣರ ಕುತಂತ್ರದಲ್ಲಿ ಮೊದಲನೆಯವರಾಗಿ ಕಾಣಿಸಿದ ರಾಜರು ಈ ದಿನ ಶೂದ್ರರೊಳಗೆ ಬೆರೆತು ಹೋಗಿದ್ದಾರೆಂದು ಹೇಳಬಹುದು.

ಬ್ರಾಹ್ಮಣರು ಮೊದಲು ಅವರ ಜೀವನೋಪಾಯಕ್ಕಾಗಿ ರಾಜರ ಕಾಲದಲ್ಲಿಯೇ ರಾಜರಿಂದ ಅನೇಕ ಗುಡಿಗಳು ಗೋಪುರಗಳನ್ನು ಕಟ್ಟಿಸಿ, ಅದರಲ್ಲಿ ಅನೇಕವಾದ ದೇವತೆಗಳನ್ನು ಇಡಿಸಿದ್ದಾರೆ. ಇದೆಲ್ಲಾ ಅವರ ಹೊಟ್ಟೆಪಾಡಿ ಗಾಗಿ ಮಾಡಿಸುತ್ತಿರುವ ಕಾರ್ಯಗಳೆಂದು ಆ ದಿನದ ಕ್ಷತ್ರಿಯರಿಗೆ ತಿಳಿದಿಲ್ಲ. ಕೃಷ್ಣದೇವರಾಯರ ಕಾಲದಲ್ಲಿ ಅನೇಕವಾಗಿ ಗುಡಿಗಳು ತಯಾರಾದಂತೆ ಚರಿತ್ರೆ ಹೇಳುತ್ತಿದೆ. ರಾಜರ ಕಾಲದಲ್ಲಿ ಎಷ್ಟೋ ಯುದ್ಧಗಳು ನಡೆದರೂ ತಾವು ಎರಡನೆಯವರು, ಮೂರನೆಯವರು ಎನ್ನುವಂತೆ ಗುರುಗಳು ಮಂತ್ರಿಗಳು ಯುದ್ಧವನ್ನು ಮಾಡುತ್ತಿರಲಿಲ್ಲ. ರಾಜರು, ರಾಜರ ಕೆಳಗಿರುವ ಸೈನ್ಯ ಯುದ್ಧ ಮಾಡುತ್ತಿತ್ತು. ಅತ್ತ ಕಡೆಯಾಗಲೀ ಇತ್ತ ಕಡೆಯಾಗಲೀ ರಾಜರು, ಸೈನ್ಯ ಸಾಯುತ್ತಿದ್ದರು. ರಾಜ ಗುರುಗಳು, ಮಂತ್ರಿ ಮರಣಿಸುತ್ತಿರಲಿಲ್ಲ. ಹೀಗೆ ಎಷ್ಟೋ ಬುದ್ಧಿವಂತಿಕೆಯಿಂದ ಒಂದು ವ್ಯೂಹವನ್ನು ತಯಾರಿಸಿಕೊಂಡು ಆ ವ್ಯೂಹದ ಪ್ರಕಾರ ತಾವು ಕ್ಷೇಮವಾಗಿ ಇದ್ದೂ ತಮ್ಮವರು ಬದುಕುವುದಕ್ಕೆ ದೇವತಾ ವ್ಯವಸ್ಥೆಯನ್ನು ತಯಾರಿಸಿದ್ದಾರೆ. ಅದರ ಪ್ರಕಾರ ಇಂದಿಗೂ ಪ್ರತಿ ಕುಲದವರಿಗೂ ಮನೆ ದೇವರು ಒಬ್ಬರು, ಕುಲ ದೇವರು ಒಬ್ಬರು ತಪ್ಪದೆ ಇರುತ್ತಾರೆ. ನಮ್ಮ ಹಿರಿಯರು ಪ್ರತಿ ವರ್ಷ ಅಹೋಬಿಲ ನರಸಿಂಹಸ್ವಾಮಿಗೆ ಅಕ್ಕಿ, ಬೇಳೆ, ಸ್ವಲ್ಪ ಹಣವನ್ನು ದಕ್ಷಿಣೆಯಾಗಿ ಸಲ್ಲಿಸಿ ಬರುತ್ತಿದ್ದರು. ಹೀಗೆ ಎಷ್ಟೋ ಜನ ಬಂದು ಅಕ್ಕಿ, ಬೇಳೆ, ಹಣ ಕೊಟ್ಟಾಗ ಅದು ಅವರಿಗೆ ಸುಲಭವಾಗಿ ಬದುಕುವುದಕ್ಕೆ ಉಪಯೋಗಪಡುತ್ತಿತ್ತು. ಈ ವಿಧವಾಗಿ ಅನೇಕ ಕಷ್ಟಗಳಿಗೆ ಸಹಿಸಿಕೊಂಡು ಅಡವಿಗಳಲ್ಲಿ ಇರುವ ದೇವತೆಗಳ ಹತ್ತಿರಕ್ಕೆ ಹೋಗಿ ಪ್ರಜೆಗಳು ಮುಡುಪುಗಳು

ಸಲ್ಲಿಸುತ್ತಿದ್ದರು. ಹೀಗೆ ಪ್ರಜೆಗಳೆಲ್ಲರಿಗೂ ಎಲ್ಲ ಕುಲದವರಿಗೂ ದೇವತೆಗಳನ್ನು ಆರಾಧಿಸುವುದು ತ್ರೇತಾ, ದ್ವಾಪರ ಯುಗಗಳಿಂದ ಶುರುವಾಗಿದೆ. ಕೆಲವು ಕಡೆ ಶಿಥಿಲಾವಸ್ಥೆಯಲ್ಲಿರುವ ಮೊದಲ ಯುಗದ ದೇವಾಲಯಗಳು ಸಹ ಅಲ್ಲಲ್ಲಿ ಕಾಣಿಸುತ್ತಲೆ ಇರುತ್ತವೆ. ಹೀಗೆ ದೇವತಾ ವ್ಯವಸ್ಥೆ ಶುರುವಾಗಿ ಪ್ರಜೆಗಳು ದೇವತಾ ಭಕ್ತರಾಗಿ ಬದಲಾಗಿದ್ದಾರೆ.

ಕೃತಯುಗದಲ್ಲಿ ಎಲ್ಲರೂ ಜ್ಞಾನಿಗಳಾಗಿದ್ದು ಇಂದೂಗಳು ಎಂದು ಹೆಸರು ಪಡೆದ ಪ್ರಜೆಗಳು ಸ್ವಲ್ಪಸ್ವಲ್ಪವಾಗಿ ತಮ್ಮ ಜ್ಞಾನವನ್ನು ಕಳೆದುಕೊಂಡು ಕೊನೆಗೆ ಸೃಷ್ಠಿಕರ್ತನಾದ ಪರಮಾತ್ಮನನ್ನು ಮರೆತುಹೋಗಿ, ತಮ್ಮಲ್ಲಿರುವ ಆತ್ಮವನ್ನು ತಿಳಿಯದೆ ಪೂರ್ತಿ ಮಾಯೆಯಲ್ಲಿ ಬಿದ್ದುಹೋಗಿ ಪ್ರಜೆಗಳೆಲ್ಲರೂ ಅನೇಕ ದೇವತೆಗಳ ಭಕ್ತರಾಗಿ ಇರುವುದು ಈ ದಿನ ನೋಡುತ್ತಲೇ ಇದ್ದೇವೆ. ದ್ವಾಪರ ಯುಗದ ಕೊನೆಯಲ್ಲಿ ನಾಲ್ಕು ಅಧರ್ಮಗಳು ಪೂರ್ತಿಯಾಗಿ ಹೆಚ್ಚಾಗಿ ಮೂವತ್ತು (30) ಕೋಟಿಗಳ ಪ್ರಜೆಗಳಿಗೆ ಮೂರು ಕೋಟಿ ದೇವತೆಗಳು ತಯಾರಾಗಿದ್ದಾರೆ. ಅಂದರೆ ಹತ್ತು ಜನರಿಗೆ ಒಬ್ಬ ದೇವರು ತಯಾರಾಗಿದ್ದಾರೆ. ಹೀಗೆ ದೇವತಾ ವ್ಯವಸ್ಥೆ ತಯಾರಾದಾಗ, ಅದರಲ್ಲಿ ಕೆಲವರು ಮುಖ್ಯವಾದ ದೇವತೆಗಳಾಗಿ ನಿಂತು ಹೋದಾಗ, ಕೆಲವರು ಗ್ರಾಮ ದೇವತೆಗಳಾಗಿ, ಸರಿಹದ್ದು ದೇವತೆಗಳಾಗಿ ಕೆಲವರು ನಿಂತು ಹೋಗಿದ್ದಾರೆ. ಇಷ್ಟು ಮಂದಿ ದೇವತೆಗಳೊಳಗೆ ಸಿಲುಕಿಕೊಂಡ ಪ್ರಜೆಗಳಿಗೆ ತಮ್ಮನ್ನು ಸೃಷ್ಠಿಸಿದ ದೇವರು ಯಾರೋ ತಿಳಿಯದಂತೆ ಹೋಗಿದೆ. ಇಂತಹ ಪರಿಸ್ಥಿತಿ ಏರ್ಪಡುತ್ತದೆಂದು ತಿಳಿದ ದೇವರು ಸೃಷ್ಠಿ ಆದಿಯಲ್ಲಿಯೇ ತನ್ನನ್ನು ಕುರಿತಾದ ಜ್ಞಾನವನ್ನು ಆಕಾಶದ ಮೂಲಕ ಸೂರ್ಯನಿಗೆ ತಿಳಿಸಿದ್ದಾನೆ. ಭೂಮಿ ಮೇಲೆ ಮಾಯಾ ಪ್ರಭಾವದಿಂದ ನಡೆಯುತ್ತಿರುವ ದೇವತೆಗಳ ಅಜ್ಞಾನದಿಂದ ಪ್ರಜೆಗಳನ್ನು ಮರಳಿಸುವುದಕ್ಕೆ, ಸೂರ್ಯನು ಭೂಮಿ ಮೇಲೆ ಇರುವ ಮನುವಿಗೆ ದೇವರ ಜ್ಞಾನವನ್ನು ಮಾತುಗಳ ರೂಪದಲ್ಲಿ ಹೇಳಿಹೋಗಿದ್ದಾನೆ. ಹಾಗೆ ಮಾತುಗಳ ರೂಪದಲ್ಲಿ ಹೇಳಲ್ಪಟ್ಟಿರುವ ದೇವರ ಜ್ಞಾನ **“ಜಪರ”** ಎನ್ನುವ ಹೆಸರಿನಿಂದ ಹಾಗೇ ಇತ್ತು.

ಭೂಮಿ ಮೇಲೆ ದ್ವಾಪರಯುಗದ ಅಂತ್ಯಕ್ಕೆಲ್ಲಾ ನಾಲ್ಕು ಅಧರ್ಮಗಳು ಬೆಳೆದು ಹೋಗಿ ದೇವರ ಇರುವಿಕೆ ತಿಳಿಯದಂತೆ ಹೋಗಿ ದೇವತೆಗಳೇ ಉಳಿದು ಹೋದಾಗ ದೇವರು ಮನುಷ್ಯನ ಹಾಗೆ ಹುಟ್ಟಿ ಭೂಮಿ ಮೇಲೆ ಮೊದಲು ಸೂರ್ಯನು ಹೇಳಿದ ಜ್ಞಾನವನ್ನು ಪುನಃ ಹೇಳಿದ್ದಾನೆ. ಕೃಷ್ಣನ ರೂಪದಲ್ಲಿ ಅರ್ಜುನನಿಗೆ **'ಜಪರ'** ಜ್ಞಾನವನ್ನು ಹೇಳಿದಾಗ, ಆಗ ಅದು ವ್ಯಾಸನ ಮೂಲಕ ಗ್ರಂಥ ರೂಪವಾಗಿ ಭಗವದ್ಗೀತೆ ಎನ್ನುವ ಹೆಸರು ಇಡಲಾಗಿದೆ. ಅದೇ ಭಗವದ್ಗೀತೆ ಕಲಿಯುಗದಲ್ಲಿ ಮೋಷೇ ಪ್ರವಕ್ತಗೆ ಸ್ವಪ್ನದಲ್ಲಿ ಕೃಷ್ಣನೇ ಸ್ವತಃವಾಗಿ ಕೊಟ್ಟಿದ್ದಾನೆ. ಆಗ ಆ ಗ್ರಂಥದ ಹೆಸರು **"ತೌರಾತ್"** ಎಂದು ಹೇಳಿ ಕೊಟ್ಟಿದ್ದಾನೆ. ನಂತರದ ಕಾಲದಲ್ಲಿ ಮೋಷೇ ಪ್ರವಕ್ತ ಮೂಸಾ ಪ್ರವಕ್ತನಾಗಿ ಹೇಳಲ್ಪಟ್ಟಿದ್ದಾನೆ. ಆತನ ಹೆಸರು ಹೇಗೆ ಬದಲಾದರೂ ಮೂಸಾ ಯಿಂದ ಭಗವದ್ಗೀತೆ (ತೌರಾತ್) ಜ್ಞಾನ ಪ್ರಜೆಗಳೊಳಗೆ ಹೋಗಿದೆ. ಅದೇ ಬೈಬಲ್ ಆಗಿ ರೂಪಾಂತರ ಹೊಂದಿದೆ. ಅದೇ ಭಗವದ್ಗೀತಾ ಜ್ಞಾನವನ್ನೇ ಪುನಃ ಎರಡನೇ ಬಾರಿ ಜಿಬ್ರಯೇಲ್ ಎನ್ನುವ ಹೆಸರಿನಿಂದ ಮುಹಮ್ಮದ್ ಪ್ರವಕ್ತರವರಿಗೆ ಹೀರಾ ಗುಹೆಗಳಲ್ಲಿ ಬೋಧಿಸುವುದು ನಡೆದಿದೆ. ಹಾಗೆ ಬೋಧಿಸಿರುವುದೇ ಅಂತಿಮ ದೈವಗ್ರಂಥ ಎನ್ನುವ ಹೆಸರಿನಿಂದ ಖುರಾನ್‌ಆಗಿ ಈ ದಿನ ನಮ್ಮ ಮುಂದೆ ಇದೆ. ಇದೆಲ್ಲಾ ಗಮನಿಸಿದರೆ ಜಪರ ಜ್ಞಾನ ಭಗವದ್ಗೀತೆ (ತೌರಾತ್) ಆಗಿ ಗ್ರಂಥ ರೂಪ ಹೊಂದಿದಾಗ, ಅದೇ ಕಲಿಯುಗದಲ್ಲಿ ಇಂಜೀಲು (ಬೈಬಲ್) ಆಗಿ ತಯಾರಾಗಿದೆ. ನಂತರ ಸ್ವಲ್ಪ ಕಾಲಕ್ಕೆ ಅಂದರೆ ಸುಮಾರು 1400 ವರ್ಷಗಳ ಸಮಯದಲ್ಲಿ ಅಂತಿಮ ದೈವ ಗ್ರಂಥ ಖುರ್‌ಆನ್‌ಆಗಿ ತಯಾರಾಗಿದೆ.

ದೇವರ ಜ್ಞಾನ ಮನುಷ್ಯರಿಗೆ ಮೂರು ಗ್ರಂಥಗಳಾಗಿ ಇಳಿದು ಬಂದಿದೆ. ಮನುಷ್ಯರ ಮೇಲೆ ಪ್ರೇಮದಿಂದ ದೇವರು ತನ್ನ ಜ್ಞಾನವನ್ನು ಮೂರು ಗ್ರಂಥಗಳಾಗಿ ಕೊಟ್ಟಿರುವಾಗ, ಮನುಷ್ಯರು ಮಾಯೆ (ಸಾತಾನ್ ಅಥವಾ ಇಬ್ಲೀಸ್) ಪ್ರಭಾವದಲ್ಲಿ ಸಿಲುಕಿಕೊಂಡು ಒಂದೇ ದೇವರ ಜ್ಞಾನವಿರುವ ಮೂರು ಗ್ರಂಥಗಳನ್ನು ಮೂರು ಮತ ಗ್ರಂಥಗಳಾಗಿ ಹೇಳಿಕೊಳ್ಳುತ್ತಿದ್ದಾರೆ. ನಮ್ಮ ಗ್ರಂಥ ಬೇರೆ, ನಿಮ್ಮ ಗ್ರಂಥ ಬೇರೆಯೆಂದು ಅಂದುಕೊಳ್ಳುವುದು ನಡೆಯುತ್ತಿದೆ. ನಮ್ಮದು ಬೇರೆ ನಿಮ್ಮದು ಬೇರೆ ಎನ್ನುವಂತೆ ಹೇಳಿಕೊಳ್ಳುವುದೇ ಅಲ್ಲದೆ ಒಬ್ಬರ ಮೇಲೆ ಒಬ್ಬರು

ಮತದ್ವೇಷಗಳು ಬೆಳೆಸಿಕೊಂಡಿದ್ದಾರೆ. ಪೂರ್ವದಲ್ಲಿ ದ್ವಾಪರಯುಗದಲ್ಲಿ ಭಗವದ್ಗೀತೆ ಹೇಳಿದಾಗ ಅಧರ್ಮಗಳು ನಾಲ್ಕು ಇರುವಾಗ, ಈ ದಿನ ಮತ ಎನ್ನುವ ಅಧರ್ಮ ಒಂದು ಬೆಳೆದು ಒಟ್ಟಾರೆ ಐದು ಅಧರ್ಮಗಳು ಮನುಷ್ಯನನ್ನು ದೇವರ ಕಡೆ ಹೋಗದಂತೆ ಮಾಡಿವೆ.

ಭಗವದ್ಗೀತೆ ಭಾರತದೇಶದಲ್ಲಿ 5000 ವರ್ಷಗಳ ಪೂರ್ವದಲ್ಲಿ ತಯಾರಾದಾಗ, ಬೈಬಲ್ ಎರಡು ಸಾವಿರ ವರ್ಷಗಳ ಪೂರ್ವದಲ್ಲಿ ತಯಾರಾಗಿದೆ. ಹಾಗೇ ಮೂರನೆ ದೈವಗ್ರಂಥ ಖುರ್‌ಆನ್ 1400 ವರ್ಷಗಳ ಸಮಯದಲ್ಲಿ ತಯಾರಾಗಿದೆಯೆಂದು ಅಂದಾಜಾಗಿ ಹೇಳಬಹುದು. ಬೈಬಲ್ ಗ್ರಂಥ ತಯಾರಾಗಿ ಎರಡು ಸಾವಿರ ವರ್ಷಗಳಾದರೆ, ಅದರ ನಂತರ 600 ವರ್ಷಗಳಿಗೆ ಖುರ್‌ಆನ್ ತಯಾರಾಗಿದೆ. ಹಿಂದೆ ತಯಾರಾದ ಎರಡು ಗ್ರಂಥಗಳಲ್ಲಿನ ಜ್ಞಾನ ತಿಳಿದುಕೊಂಡು ಇತ್ತ ಕ್ರೈಸ್ಥರು, ಅತ್ತ ಮುಸ್ಲೀಮ್‌ರು ದೇವರು ಒಬ್ಬನೇ, ಒಬ್ಬನನ್ನೇ ಆರಾಧಿಸಬೇಕೆನ್ನುವ ಭಾವನೆಯಿಂದ ಇದ್ದು ಇತರ ದೇವತೆಗಳ ಸಹವಾಸಕ್ಕೆ ಯಾರೂ ಹೋಗಲಿಲ್ಲ. ಹಿಂದೆ ತಯಾರಾದ ಎರಡು ಗ್ರಂಥಗಳಿಗಿಂತಲೂ ಮೂರು ಸಾವಿರ ವರ್ಷಗಳ ಹಿಂದೆ ಭಗವದ್ಗೀತೆ ತಯಾರಾದರೂ ಹಿಂದೂಗಳಿಗೆ ದೇವರು ಒಬ್ಬನೇ ಎಂದಾಗಲೀ, ಒಬ್ಬ ದೇವರನ್ನೇ ಆರಾಧಿಸಬೇಕೆಂದಾಗಲೀ ತಿಳಿಯದಂತೆ ಹೋಗಿದೆ. ಹಿಂದೆ ಹುಟ್ಟಿರುವ ಗ್ರಂಥಗಳನ್ನು ಓದಿ ಒಬ್ಬನೇ ದೇವರು, ಒಂದೇ ಆರಾಧನೆ ಎನ್ನುತ್ತಿರುವ ಮುಸ್ಲೀಮ್‌ರನ್ನು ನೋಡಿದರೆ ಅವರಿಗಿಂತ 3600 ವರ್ಷಗಳ ಕೆಳಗೆ ಹುಟ್ಟಿದ ಭಗವದ್ಗೀತೆಯನ್ನು ಓದಿದವರು ಏಕೆ ಒಂದೇ ದೇವರು, ಒಂದೇ ಆರಾಧನೆ ಅನ್ನಲಾರದೆ ಹೋಗುತ್ತಿದ್ದಾರೆಂದರೆ ಸ್ವಲ್ಪ ಹಿಂದಕ್ಕೆ ಹೋಗಿ ಆಲೋಚಿಸಿರಿ.

ಹಿಂದಕ್ಕೆ ಹೋಗಿ ನೋಡಿದರೆ ದ್ವಾಪರ ಯುಗದಲ್ಲಿ ಭಗವದ್ಗೀತೆ ಹುಟ್ಟುವುದಕ್ಕಿಂತ ಮೊದಲೇ ತ್ರೇತಾಯುಗದಿಂದಲೇ ಬ್ರಾಹ್ಮಣರು ಹೂಡಿದ ವ್ಯೂಹದಿಂದ ಭಗವದ್ಗೀತೆ ಬಂದಿದ್ದರೂ ಹಿಂದೂಗಳು ತಿಳಿದುಕೊಳ್ಳಲಾರದೆ ಹೋಗುತ್ತಿದ್ದಾರೆ. ದೇವತೆಗಳನ್ನು ಬಿಡಿಸಿಕೊಂಡು ನಮ್ಮನ್ನು ಸೃಷ್ಟಿಸಿದ ದೇವರು ಯಾರು ಎಂದು ಆಲೋಚಿಸಲಾರದೆ ಹೋಗುತ್ತಿದ್ದಾರೆ. ಎಲ್ಲಾದರೂ ಸತ್ಯವನ್ನು

ಹೇಳುವ ವೇಮನನಂತಹವರು ಬಂದರೆ ಅವರನ್ನು ಮರೆಮಾಚಿ, ಅವರು ಹೇಳಿರುವುದು ಜ್ಞಾನವೇ ಅಲ್ಲ ಎನ್ನುತ್ತಿದ್ದಾರೆ. ವೇಮನನಂತಹವರನ್ನು, ವೀರಬ್ರಹ್ಮಯ್ಯನಂತಹವರನ್ನು ಅಜ್ಞಾನಿಗಳೆಂದು ಪ್ರಚಾರ ಮಾಡಿದರೂ, ವೇಮನ ಕುಲಸ್ಥರಾದ ರೆಡ್ಡಿ ಕುಲದವರು, ವೀರಬ್ರಯ್ಮಯ್ಯನವರ ಕುಲಸ್ಥರಾದ ವಿಶ್ವ ಬ್ರಾಹ್ಮಣರು (ಆಚಾರ್ಯರು) ಬ್ರಾಹ್ಮಣರು ನಮ್ಮ ಹಿರಿಯರನ್ನು, ನಮ್ಮನ್ನು ಅವಮಾನ ಮಾಡಿದ್ದಾರೆಂದು ಗುರುತಿಸಲಾರದೆ ಹೋಗಿದ್ದಾರೆ. ಪುನಃ ಎಲ್ಲ ಕಾರ್ಯಗಳಿಗೂ ಬ್ರಾಹ್ಮಣರನ್ನೇ ಆಶ್ರಯಿಸುತ್ತಿದ್ದಾರೆ. ಅಂತಹವರ ಬಳಿ ಸೇರದೆ, ಅವರು ಮಾಡಿದ ಮೋಸವನ್ನು ಹೊರಗೆ ಇಡುವುದು ಬಿಟ್ಟು ನಿಂಬೆಗೆ ನೀರೆರೆದಂತೆ ಇದ್ದಾರೆ. ಹಾಗಿರುವುದೇ ಅಲ್ಲದೆ ಚರಿತ್ರೆಯಲ್ಲಿ ನಡೆದ ಅನ್ಯಾಯವನ್ನು ಬಟ್ಟೆಬಯಲು ಮಾಡಿದ ನನ್ನನ್ನು ವಿಮರ್ಶಿಸುತ್ತಿದ್ದಾರೆಂದರೆ ಯಾವುದು ತಪ್ಪು, ಯಾವುದು ಒಪ್ಪು ಎಂದು ಗ್ರಹಿಸಲಾರದೆ ಇದ್ದಾರೆಂದು ತಿಳಿಯುತ್ತಿದೆ.

ಇಂತಹ ಪರಿಸ್ಥಿತಿಗಳಲ್ಲಿ ಬ್ರಾಹ್ಮಣರು ತಮ್ಮ ಬುದ್ಧಿಯನ್ನು ಇನ್ನೂ ಹದನ ಮಾಡಿ, ಈ ದಿನ ಅನೇಕ ಶಾಖೆಗಳಲ್ಲಿ ತಮ್ಮವರನ್ನು ಪ್ರವೇಶ ಇಟ್ಟು, ಅವರಿಂದ ರಾಜಕೀಯ ಬಲವನ್ನು ಸಂಪಾದಿಸಿ, ಭವಿಷ್ಯತ್ತಿನಲ್ಲಿ ನಮ್ಮಂತಹವರನ್ನು ಮೇಲಕ್ಕೆ ಬಾರದಂತೆ ಮಾಡಿ, ಪೂರ್ವದಿಂದ ಅವರು ಮಾಡುತ್ತಿರುವ ಕುತಂತ್ರಗಳು ಹೊರಬೀಳದಂತೆ ಮಾಡಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಅಂತಹ ಪ್ರಯತ್ನದಲ್ಲಿ ಭಾಗವಾಗಿ ಈ ದಿನ R.S.Sನಲ್ಲೂ, B.J.Pನಲ್ಲೂ ಸೇರಿರುವುದೇ ಅಲ್ಲದೆ ಇವರಿಂದ ಉಳಿದ ಪ್ರಜೆಗಳನ್ನು ರೊಚ್ಚಗೆಬ್ಬಿಸಿ ನಮ್ಮ ಜ್ಞಾನ ಪ್ರಚಾರವಾಗದಂತೆ ಮಾಡುತ್ತಿದ್ದಾರೆ. ವಿಶ್ವಹಿಂದೂ ಪರಿಷತ್ ಎನ್ನುವ ಸಂಸ್ಥೆಯನ್ನು ಸಹ ತಯಾರಿಸಿ, ಅವರಿಂದ ನಮ್ಮಂತಹವರು ಎಲ್ಲಾದರೂ ತಯಾರಾಗಿ ಅವರ ಬಂಡಾರವನ್ನು ಹೊರಗಿಡದಂತೆ ಅನುಮಾನ ಬಂದವರ ಮೇಲೆ ಭೌತಿಕ ದಾಳಿಗಳು ಮಾಡಿಸುತ್ತಿದ್ದಾರೆ. ಇಂತಹ ತೊಂದರೆಗಳನ್ನು ಸ್ವತಃವಾಗಿ ನಾವು ಎದುರಿಸಿದ್ದೇವೆ. ಇದನ್ನನುಸರಿಸಿ ನಾವು ಅವರಿಗೆ ಕಂಟಕವಾಗಿ ತಯಾರಾಗುತ್ತೇ ವೆಂದು ಗ್ರಹಿಸಿ, ಪ್ರಜೆಗಳಲ್ಲಿ ಅವರ ಗೌರವವನ್ನು ಕಾಪಾಡಿಕೊಳ್ಳುವುದಕ್ಕೆ ನಮ್ಮ ಮೇಲೆ, ನಮ್ಮ ಭಕ್ತರ ಮೇಲೆ ದಾಳಿಗಳಿಗೆ ಪ್ರೇರೇಪಿಸಿ ಕಳುಹಿಸಿದ್ದಾರೆಂದು ಗ್ರಹಿಸಿದ್ದೇವೆ. ಇಷ್ಟು ಕಾರ್ಯಗಳು ಅವರು ಮಾಡುತ್ತಾ ಪ್ರಜೆಗಳನ್ನು ಅಜ್ಞಾನದ

ಕಡೆಗೆ ತಳ್ಳುತ್ತಿದ್ದರೂ, ಇವರು ಏನು ಮಾಡುತ್ತಿದ್ದಾರೆಂದು ಗ್ರಹಿಸದೆ ಕೆಲವರು ಶೂದ್ರರು ಸಹ ಅವರ ವಶವಾಗಿ ಅವರ ಮಾತನ್ನೆ ಮಾತನಾಡುತ್ತಾ ನಮ್ಮ ಮೇಲೆ ದಾಳಿಗೆ ಇಳಿಯುತ್ತಿದ್ದಾರೆ. ಅಮಾಯಕ ಪ್ರಜೆಗಳನ್ನು ರೊಚ್ಚಿಗೆಬ್ಬಿಸಿ ನಮ್ಮನ್ನು, ನಮ್ಮ ಜ್ಞಾನವನ್ನು ಬಾಯಿ ಮುಚ್ಚಿಸಲಾರರೆಂದು ನಾವು ಪದೇ ಪದೇ ಹೇಳುತ್ತಿದ್ದೇವೆ. ಆದರೂ ಅವರ ಆಟ ಅವರು ಆಡುತ್ತಿದ್ದಾರೆ. ನಾನು ಯಾವ ಮಾತ್ರ ಅಧೈರ್ಯ ಪಡದೇ ನನ್ನ ಕೆಲಸವನ್ನು ನಾನು ಮಾಡುತ್ತಿದ್ದೇನೆ. ಯಾವುದು ಹೇಗಾದರೂ ಪ್ರಜೆಗಳು ತಮ್ಮ ಬುದ್ಧಿಯನ್ನುಪ ಯೋಗಿಸಿ ಚರಿತ್ರೆಯಲ್ಲಿ ಏನು ನಡೆದಿದೆ, ಈಗ ಏನು ನಡೆಯುತ್ತಿದೆ ಎಂದು ಆಲೋಚಿಸದೆ ಇರುವವರೆಗು ಸಮಾಜದಲ್ಲಿ ಬದಲಾವಣೆ ಬರುವುದಿಲ್ಲ. ಆದ್ದರಿಂದ ಎಲ್ಲರನ್ನು ಆಲೋಚಿಸೆಂದು ಹೇಳುತ್ತಿದ್ದೇನೆ.

ಎಲ್ಲದಕ್ಕಿಂತ ಹಿಂದೆ ಬಂದಿರುವ ಗ್ರಂಥದಲ್ಲಿ ಅಂದರೆ ಖುರ್‌ಆನ್‌ನಲ್ಲಿ ಭಗವದ್ಗೀತೆಯಲ್ಲಿ ಹೇಳಿದ ಮಾತುಗಳೇ ಇವೆ. ಭಗವದ್ಗೀತೆ ಆಧಾರಿತ ಜ್ಞಾನವೇ ಖುರ್‌ಆನ್‌ನಲ್ಲಿ ಇದೆಯೆಂದು ಸ್ವತಃವಾಗಿ ಖುರ್‌ಆನ್‌ನಲ್ಲಿಯೇ 5ನೇ ಸೂರಾದಲ್ಲಿ ಹೇಳಿದ್ದಾರೆ. ಭಗವದ್ಗೀತೆ ಪ್ರಥಮ ದೈವ ಗ್ರಂಥವಾದಾಗ, ಖುರ್‌ಆನ್ ಅಂತಿಮ ದೈವ ಗ್ರಂಥ. ಕೊನೆಯಲ್ಲಿ ಆಲಸ್ಯವಾಗಿ ಬಂದಿರುವ ಖುರ್‌ಆನ್‌ನನ್ನು ಅನು ಸರಿಸುವ ಮುಸ್ಲೀಮ್‌ರು ಒಂದೇ ದೇವರನ್ನು ಆರಾಧಿಸುತ್ತಿದ್ದಾರೆ. ಈ ವಿಷಯ ಮೊದಲ ದೈವ ಗ್ರಂಥವಾದ ತೌರಾತ್ (ಭಗವದ್ಗೀತೆ) ನಲ್ಲಿ ಇದ್ದರೂ, ಹಿಂದೂಗಳು ಯಾರೂ ಏಕೇಶ್ವರೋಪಾಸನೆ ಮಾಡುತ್ತಿಲ್ಲ. ಅದಕ್ಕೆ ಕಾರಣ ತ್ರೇತಾಯುಗದಿಂದ ಇದೆಯೆಂದು ಹೇಳಿಕೊಂಡಿದ್ದೇವೆ. ಈ ವಿಷಯ ಸ್ವಲ್ಪ ಅರ್ಥವಾಗುವಂತೆ ಒಂದು ಉಪಮಾನವನ್ನು ಹೇಳಿಕೊಳ್ಳೋಣ. ಪೂರ್ವದಲ್ಲಿ ಹಿಂದೂ ಮತದಲ್ಲಿ ಒಂದು ಆಚಾರವಿತ್ತು. ಅದು ನಾನು ಹತ್ತು ವರ್ಷಗಳ ಚಿಕ್ಕ ವಯಸ್ಸಿನಲ್ಲಿ ಸಹ ನೋಡಿದ್ದೇನೆ. ಅಂದರೇ ಸುಮಾರು ಅರವತ್ತು ವರ್ಷಗಳ ಕೆಳಗೆ ಕೂಡಾ ಅಲ್ಲಲ್ಲಿ ಕೆಲವು ಹಳ್ಳಿಗಳಲ್ಲಿ ಆ ಆಚಾರವಿತ್ತು. ಈಗ ಆಂಧ್ರದಲ್ಲಿ ಅದು ಎಲ್ಲೂ ಇಲ್ಲವೆಂದುಕೊಳ್ಳುತ್ತೇನೆ. ಆ ವಿಚಿತ್ರವಾದ ಆಚಾರವನ್ನು ಚಿಕ್ಕಂದಿನಲ್ಲಿ ಹಿರಿಯರನ್ನು ಕೇಳಿ ವಿವರವಾಗಿ ತಿಳಿದುಕೊಂಡಿದ್ದೇನೆ.

ಒಂದು ಊರಿನಲ್ಲಿನ ಒಂದು ಕುಟುಂಬದಲ್ಲಿ ಯುಕ್ತವಯಸ್ಸು ಬಂದಿರುವ ಯುವತಿಯನ್ನು ಮದುವೆ ಮಾಡದಂತೆ ಹಾಗೇ ಬಿಟ್ಟುಬಿಡುತ್ತಾರೆ. ಆಕೆಗೆ ಗಂಡ ಇರುವುದಿಲ್ಲ. ಆಕೆಯನ್ನು ಬಸವಿ ಎಂದು ಕರೆಯುತ್ತಿದ್ದರು. ಆಕೆಯನ್ನು ಹಾಗೆ ಬಿಡುವುದರಿಂದ ಆಕೆ ಹತ್ತಿರಕ್ಕೆ ವಾರಕ್ಕೆ ಒಬ್ಬರು ಊರಿನಲ್ಲಿನ ಗಂಡಸರು ಬಂದು ಆಕೆಯೊಂದಿಗೆ ಕಳೆದು ಹೋಗುತ್ತಿದ್ದರು. ಊರಿನವರೆಲ್ಲರಿಗೂ ಆಕೆ ವೇಶ್ಯಳಂತೆ ಇರುತ್ತಾಳೆ. ಯಾರು ಆಕೆ ಹತ್ತಿರಕ್ಕೆ ಬಂದರೆ ಆ ದಿನ ಆತನನ್ನೇ ಗಂಡನಾಗಿ ಭಾವಿಸುತ್ತಿದ್ದಳು. ಆದರೂ ಆಕೆಯನ್ನು ವೇಶ್ಯ ಎಂದು ಅನ್ನುವುದಿಲ್ಲ. ಆಕೆಯನ್ನು ದೇವರ ಸೇವೆಗೆ ಬಿಟ್ಟಿದ್ದೇವೆಂದು ಆ ಕುಟುಂಬದವರು ಹೇಳುತ್ತಿದ್ದರು. ಈ ಸಾಂಪ್ರದಾಯ ಕರ್ನಾಟಕ ಪ್ರಾಂತದಲ್ಲಿ ಇಂದಿಗೂ ಸಹ ಇದೆಯೆಂದು ಸುದ್ದಿ. ಆಕೆ ಹತ್ತಿರಕ್ಕೆ ಬಂದವರು ಕೊಟ್ಟಿರುವ ಹಣದಿಂದ ಆಕೆ ಕಾಲಕಳೆಯುವುದೇ ಅಲ್ಲದೆ ಉಳಿದ ಹಣದಿಂದ ದೇವರ ಸೇವೆ ಮಾಡುತ್ತಿದ್ದಳೆಂದು ಕೇಳಿದ್ದೇವೆ. ಹೇಗಾದರೂ ಆಕೆ ಜೀವನಕ್ಕೆ ಒಬ್ಬ ಗಂಡ ಎನ್ನುವವನು ಇರುವುದಿಲ್ಲ. ಆಕೆಯನ್ನು ಬಸವಿಯೆಂದು ಅಲ್ಲಿನವರು ಕರೆದರೂ ಮಾಡುವುದು ವೇಶ್ಯ ವೃತ್ತಿಯೇ ಅಲ್ಲವೆ! ಅದೇ ವಿಧವಾಗಿ ಮನುಷ್ಯರು ಸಹ ಭಕ್ತಿ ವಿಧಾನದಲ್ಲಿ ಬಸವಿಯಂತೆ ತಯಾರಾಗಿದ್ದಾರೆ. ಆಕೆಗೆ ಒಬ್ಬ ಗಂಡನಂತೂ ಇರುವುದಿಲ್ಲ. ಹಾಗೇ ಮನುಷ್ಯನಿಗೆ ಒಬ್ಬ ದೇವರಂತೂ ಇರುವುದಿಲ್ಲ. ಬಸವಿ ಹತ್ತಿರಕ್ಕೆ ಬಂದಿರುವವನನ್ನೇ ಆ ದಿನ ಗಂಡನನ್ನಾಗಿ ಭಾವಿಸುತ್ತಾಳೆ. ಹಾಗೇ ಮನುಷ್ಯ ಯಾವ ಗುಡಿಗೆ ಹೋದರೆ ಆ ಗುಡಿಯಲ್ಲಿನ ವಿಗ್ರಹವನ್ನೇ ದೇವರು ಎಂದು ಅಂದುಕೊಳ್ಳುತ್ತಿದ್ದಾನೆ. ಬಸವಿ ಹೋಲಿಕೆಗೆ ಈ ದಿನ ಮನುಷ್ಯರಲ್ಲಿನ ಭಕ್ತಿಗೆ ಹೋಲಿಕೆ ಪೂರ್ತಿ ಸಮಾನವಾಗಿ ಇದ್ದಂತೆ ತಿಳಿಯುತ್ತಿದೆ.

ಈ ದಿನ ಮುಖ್ಯವಾದ ಮೂರು ಮತಗಳಲ್ಲಿ ಒಂದು ಹಿಂದೂ ಮತದಲ್ಲಿಯೇ ಅನೇಕ ದೇವತೆಗಳು, ಅನೇಕ ಪೂಜೆಗಳು, ಅನೇಕ ಆಚಾರಗಳು ಇವೆ. ಈ ವಿಧಾನ ಉಳಿದ ಮತಗಳಿಗಿಂತ ಒಳ್ಳೆಯದಾ ಅಥವಾ ಕೆಟ್ಟದಾ ಎಂದು ಆಲೋಚಿಸಿದರೆ ಅದನ್ನು ನಾವು ಶಾಸ್ತ್ರವನ್ನು ಪ್ರಮಾಣವಾಗಿ ನೋಡಬೇಕಾಗಿದೆ. ಶಾಸ್ತ್ರ ಪ್ರಮಾಣ ಇಲ್ಲದೆ ಹೋದರೆ ಯಾರಿಷ್ಟಕ್ಕೆ ಅವರು ನಮ್ಮದೇ ಒಳ್ಳೆಯ ಪದ್ಧತಿ ಎಂದು ಹೇಳುತ್ತಾರೆ. ಇದು ಭಕ್ತಿ ಮಾರ್ಗ ಆದ್ದರಿಂದ

ಇದಕ್ಕೆ ಬ್ರಹ್ಮವಿದ್ಯಾ ಶಾಸ್ತ್ರವನ್ನೇ ನೋಡಬೇಕಾಗಿದೆ. ಬ್ರಹ್ಮವಿದ್ಯಾ ಶಾಸ್ತ್ರವೆನ್ನುವ ಹೆಸರಿನಿಂದ ಪ್ರತ್ಯೇಕವಾದ ಗ್ರಂಥಗಳು ಯಾವುವೂ ಇಲ್ಲ ಆದರೆ, ದೇವರು ನಮಗೆ ತಿಳಿಸಿದ ಮೂರು ದೈವ ಗ್ರಂಥಗಳು ಬ್ರಹ್ಮವಿದ್ಯಾ ಶಾಸ್ತ್ರಕ್ಕೆ ಸಂಬಂಧ ಪಟ್ಟಿರುವವೇಯೆಂದು ಹೇಳಬಹುದು. ಮೊಟ್ಟ ಮೊದಲು ಪ್ರಥಮ ದೈವ ಗ್ರಂಥವಾಗಿ ಹೆಸರು ಪಡೆದ ಭಗವದ್ಗೀತೆಯನ್ನು (ತೌರಾತ್) ನ್ನು ನೋಡಿದರೆ ಅದರಲ್ಲಿ ದೇವರು ಹೇಳಿದ ಜ್ಞಾನವನ್ನನುಸರಿಸಿ ನಾವು ಮಾಡುವುದು ವೇಶ್ಯಾ ಭಕ್ತಿಯೆಂದು ತಿಳಿಯುತ್ತಿದೆ. ನಾನು ಆ ಮಾತನ್ನು ಹೇಳಿದರೇ ಯಾರೂ ಒಪ್ಪಿಕೊಳ್ಳುವುದಿಲ್ಲ. ನಾವೆಲ್ಲಾ ಸಂಸಾರಿಗಳೇ ಎನ್ನುವಂತೆ ಮಾತನಾಡಿದ್ದಾರೆ. ಧರ್ಮಪೀಠ ಶೀರ್ಷಿಕೆಯಲ್ಲಿ "ಪ್ರಬೋಧ ಉನ್ಮಾದ" ಎಂದು ಹೆಸರಿಟ್ಟು ನನ್ನ ಮೇಲೆ ಚರ್ಚಿಸಿದವರು ನಾನು ಹಿಂದೂ ಸಾಂಪ್ರದಾಯಗಳನ್ನು ಪಾಲಿಸಲಿಲ್ಲ ವೆಂದು, ಹಿಂದೂ ಸಾಂಪ್ರದಾಯಗಳ ಪ್ರಕಾರ ದೇವತೆಗಳನ್ನು ಪೂಜಿಸುತ್ತಿಲ್ಲವೆಂದು ಹೇಳುವುದೇ ಅಲ್ಲದೆ ಉಳಿದ ಸ್ವಾಮಿಗಳು, ಗುರುಗಳು ಎಲ್ಲರೂ ಹಿಂದೂ ದೇವತೆಗಳನ್ನು ಗೌರವಿಸಿ ಪೂಜಿಸುತ್ತಿದ್ದರೆ ಈತನು ದೇವತೆಗಳಿಗೆ ವಿರುದ್ಧವಾಗಿ ಮಾತನಾಡುತ್ತಿದ್ದಾನೆ. ಒಬ್ಬನೇ ದೇವರು ಉಳಿದವರು ದೇವರು ಅಲ್ಲ ಎಂದು ಹೇಳುತ್ತಾನೆ. ಈತನ ಉನ್ಮಾದ ಬಹಳ ಬೆಳೆದು ಹೋಗಿದೆ. ಆತನ ಉನ್ಮಾದವನ್ನು ಎಲ್ಲರಿಗೂ ಅಂಟಿಸುತ್ತಿದ್ದಾನೆ. ತ್ರೈತ ಸಿದ್ಧಾಂತ ಎನ್ನುವ ಹೆಸರಿನಿಂದ ಇತರ ಮತಸ್ಥರ ಹಾಗೆ ಹಿಂದೂ ಸಾಂಪ್ರದಾಯಗಳನ್ನೆಲ್ಲ ಹೋಮಮಾಡುತ್ತಾ, ದೇವತೆಗಳೆಲ್ಲರನ್ನೂ ಅವಮಾನಿಸುತ್ತಿದ್ದಾನೆ ಎಂದು ಆರೋಪಿಸುವುದು ನಡೆದಿದೆ.

ವಾಸ್ತವವೇ! ಅವರು ಹೇಳಿದಂತೆ ನಾನಿರುವುದು ವಾಸ್ತವವೇ. ಆದರೇ ನನ್ನ ದಾರಿಯಲ್ಲಿ ನಾನು ಸಕ್ರಮವಾಗಿ ನಡೆಯುತ್ತಿದ್ದೇನೆ ಎಂದು ನಾನು ಹೇಳುತ್ತಿದ್ದೇನೆ. ಅದಕ್ಕೆ ಅವರು ಪ್ರಬೋಧಾನಂದ ದಾರಿ ಸಕ್ರಮವಾದುದು ಅಲ್ಲ. ನಾವು ಹೇಳಿರುವುದೇ ಸರಿಯಾದ ದಾರಿ ಎಂದು ಅವರು ಹೇಳುತ್ತಿದ್ದಾರೆ. ಯಾರಿಗೆ ಅವರು ನಾನು ಹೋಗುವುದೇ ಸತ್ಯಮಾರ್ಗ ಎಂದರೇ ಯಾರದು ಸತ್ಯ, ಯಾರದು ಅಸತ್ಯ ಎಂದು ತೀರ್ಮಾನಿಸಿ ಹೇಳುವವರು ಯಾರು ಎಂದು ಪ್ರಶ್ನಿಸಿ ನೋಡಿದರೆ, ಸತ್ಯಾಸತ್ಯಗಳನ್ನು ತೀರ್ಮಾನಿಸಬೇಕಾಗಿರುವುದು ದೇವರೇ. ದೇವರು ಮಾತನಾಡುವುದಿಲ್ಲ, ಆದ್ದರಿಂದ ಈ ವಿಷಯಕ್ಕಾಗಿ ಮೊದಲೇ ಆತನು

ಬ್ರಹ್ಮವಿದ್ಯಾ ಶಾಸ್ತ್ರಕ್ಕೆ ಸಂಬಂಧಪಟ್ಟಿರುವ ಗ್ರಂಥಗಳನ್ನು ನಮಗೆ ಕೊಟ್ಟಿದ್ದಾನೆ. ಆ ಮೂರು ಗ್ರಂಥಗಳಲ್ಲಿ ಒಂದೇ ನಿರ್ಣಯ, ಒಂದೇ ಸತ್ಯ ಇದೆ. ಅದನ್ನನುಸರಿಸಿ ನಾವು ಯಾರದು ಸತ್ಯ, ಯಾರದು ಅಸತ್ಯ ಎಂದು ತೀರ್ಮಾನಿಸಿ ಹೇಳಬಹುದು.

ಭಗವದ್ಗೀತೆಯಲ್ಲಿ ಕ್ಷೇತ್ರ ಕ್ಷೇತ್ರಜ್ಞ ವಿಭಾಗ ಯೋಗ ಎನ್ನುವ ಅಧ್ಯಾಯ ದಲ್ಲಿ ಹನ್ನೊಂದನೆಯ ಶ್ಲೋಕ ಈ ವಿಧವಾಗಿ ಇದೆ.

**13–11 ಶ್ಲೋ॥**

## "ಮಯಿ ಚಾನನ್ಯ ಯೋಗೇನ ಭಕ್ತಿರವ್ಯಭಿಚಾರಿಣೀ"

ಈ ಶ್ಲೋಕದಲ್ಲಿ ಹೇಳಿದ ವಿಷಯ ಏನೆಂದರೆ! ಭಕ್ತಿಯಲ್ಲಿ ನೀವು ವ್ಯಭಿಚಾರ ಮಾಡಬೇಡಿ. ಇತರ ಚಿಂತೆ ಇಲ್ಲದಂತೆ, ನನ್ನ ಮೇಲೆಯೇ ಯೋಗವನ್ನು ಆಚರಿಸೆಂದು ಹೇಳಿದ್ದಾನೆ. ಯೋಗ ಎಂದರೆ ಸೇರುವಿಕೆ, ನನ್ನೊಂದಿಗೆ ಸೇರಬೇಕೆಂದು ಇತರ ಧ್ಯಾಸ ಯಾವುದೂ ಇಲ್ಲದಂತೆ ಭಕ್ತಿಯಿಂದ ಇರಬೇಕೆಂದು, ಹಾಗಲ್ಲದೆ ನನ್ನಮೇಲೇ ಅಲ್ಲದೆ ಇತರರ ಮೇಲೆಯೂ ಸಹ ನಿಮಗೆ ಭಕ್ತಿ ಇದ್ದರೇ ನೀವು ಭಕ್ತಿಯಲ್ಲಿ ವ್ಯಭಿಚಾರ ಮಾಡಿದವರಾಗುತ್ತೀರ ಎಂದು ಹೇಳಲಾಗಿದೆ. ಅಷ್ಟೇಅಲ್ಲದೆ ರಾಜವಿದ್ಯಾ ರಾಜಗುಹ್ಯ ಯೋಗದಲ್ಲಿ 23 ನೇ ಶ್ಲೋಕದಲ್ಲಿ ಮತ್ತು 25 ನೇ ಶ್ಲೋಕದಲ್ಲಿ ಹೀಗೆ ಹೇಳುತ್ತಿದ್ದಾರೆ ನೋಡಿರಿ.

**9–23 ಶ್ಲೋ॥ ಏ ಪ್ಯನ್ಯ ದೇವತಾ ಭಕ್ತಾಃ ಯಜನ್ತೇ ಶ್ರದ್ಧಯಾನ್ವಿತಾಃ ।**
**ತೇಪಿ ಮಾಮೇವ ಕೌಂತೇಯ ಯಜ್ಯನ್ತ್ಯ ವಿಧಿ ಪೂರ್ವಕಮ್॥**

**9–25 ಶ್ಲೋ॥**

**ಯಾಂತಿ ದೇವ ವ್ರತಾನ್ ದೇವಾನ್ ಪಿತೃನ್ ಯಾಂತಿ ಪಿತೃವ್ರತಾಃ ।**
**ಭೂತಾನಿ ಯಾಂತಿ ಭೂ ತೇಜ್ಯಾಃ ಯಾಂತಿ ಮದ್ಯಾಜಿನೋಪಿ ಮಾಮ್॥**

ಈ ಎರಡು ಶ್ಲೋಕಗಳಲ್ಲಿ ಹೇಳಿರುವುದು ಏನೆಂದರೆ! ಒಂದು ವೇಳೆ ನೀನು ನನ್ನನ್ನು ಅಲ್ಲಗಳೆದು ಇತರ ದೇವರನ್ನು ಪೂಜಿಸಿದರೇ ನನಗೆ ಏನೂ

ಅಸೂಯೆ ಇಲ್ಲ. ಅದೂ ಸಹ ನನ್ನನ್ನು ಪೂಜಿಸಿದಂತೆಯೇ ನಾನು ಭಾವಿಸುತ್ತೇನೆ ಆದರೂ, ನೀನು ದಾರಿ ತಪ್ಪಿ ನಡೆದವನಾಗುತ್ತೀಯಾ. ಒಂದೇ ದಾರಿಯಲ್ಲಿ ನಡೆಯುವವನನ್ನು ಸಂಸಾರಿ ಎನ್ನುತ್ತೇವೆ. ಒಂದು ದಾರಿಯಲ್ಲಿ ಅಲ್ಲದೆ ಬೇರೆ ದಾರಿಗಳಲ್ಲಿ ನಡೆಯುವವನನ್ನು ವ್ಯಭಿಚಾರಿ ಎನ್ನಬಹುದು ಎಂದು ಹೇಳಿದಂತೆ ಇದೆ. ಅಷ್ಟೇ ಅಲ್ಲದೆ ನೀನು ಆಚರಿಸುವುದನ್ನನುಸರಿಸಿ ನಿನಗೆ ಫಲಿತಾಂಶ ಇರುತ್ತದೆ. **ನೀನು ದೇವತೆಗಳನ್ನು ಮುಗಿದರೆ ದೇವತೆಗಳೊಳಗೇ ಹೋಗುತ್ತೀಯ. ಹಿರಿಯರನ್ನು ಮುಗಿದರೇ ಹಿರಿಯರೊಳಗೇ ಹೋಗುತ್ತೀಯಾ. ಜೀವರಾಶಿಗಳನ್ನು ಮುಗಿದರೇ ಜೀವರಾಶಿಗಳೊಳಗೇ ಹೋಗುತ್ತೀಯ. ನನ್ನನ್ನು ಮುಗಿದವನು ಮಾತ್ರ ನನ್ನ ಹತ್ತಿರಕ್ಕೆ ಬರುತ್ತಾನೆ** ಎಂದು ಹೇಳಿದ್ದಾರೆ. ಈ ವಿಷಯವನ್ನು ವಿವರವಾಗಿ ಹೇಳಿದರೇ ಒಬ್ಬ ಸ್ತ್ರೀ ಬ್ರಾಹ್ಮಣನನ್ನು ಮದುವೆ ಮಾಡಿಕೊಂಡರೆ ಬ್ರಾಹ್ಮಣರ ಮನೆಯೊಳಗೆ ಹೋಗುತ್ತಾಳೆ. ಬ್ರಾಹ್ಮಣರಾಗಿಯೇ ಲೆಕ್ಕಿಸಲ್ಪಡುತ್ತಾಳೆ. ಆ ಸ್ತ್ರೀ ಬ್ರಾಹ್ಮಣನನ್ನು ಮದುವೆ ಮಾಡಿಕೊಳ್ಳದೆ ಒಬ್ಬ ರೆಡ್ಡಿಯನ್ನು ಮದುವೆ ಮಾಡಿಕೊಂಡರೆ ರೆಡ್ಡಿ ಮನೆಗೆ ಸೇರಿ ರೆಡ್ಡಿ ಹೆಣ್ಣುಮಗಳಾಗಿ ಲೆಕ್ಕಿಸಲ್ಪಡುತ್ತಾಳೆ. ಹಾಗಲ್ಲದೆ ಅಕ್ಕಸಾಲಿಗನನ್ನು ಮದುವೆ ಮಾಡಿಕೊಂಡರೆ ಅಕ್ಕಸಾಲಿಯವರೊಳಗೆ ಬೆರೆತು ಹೋಗುತ್ತಾಳೆ. ಈ ವಿಧವಾಗಿ ಯಾರನ್ನು ಮದುವೆ ಮಾಡಿಕೊಂಡರೆ ಅವರ ಮನೆಗೆ ಹೋದಂತೆ, ದೇವತೆಗಳನ್ನು ಪೂಜಿಸುವವನು ದೇವತೆಗಳ ಹತ್ತಿರಕ್ಕೆ ಸೇರುವನು, ಜೀವರಾಶಿಗಳನ್ನು ಪೂಜಿಸುವವನು ಜೀವರಾಶಿಗಳ ಹತ್ತಿರ ಸೇರುವನು. ಹಾಗೇ ದೇವರನ್ನು ಅಂದರೆ ಆತ್ಮವನ್ನು ಪೂಜಿಸುವವನು ಆತ್ಮವನ್ನೇ ಸೇರುವನು, ಇದೇ ವಿಷಯವನ್ನೇ 25 ನೇ ಶ್ಲೋಕದಲ್ಲಿ ಹೇಳಿದ್ದಾರೆ. ನೀನು ಜೀವಾತ್ಮ ಆದ್ದರಿಂದ ಆತ್ಮವನ್ನೇ ಆರಾಧಿಸಿದರೆ ಆತ್ಮನಲ್ಲಿಯೇ ಸೇರಿಹೋಗುತ್ತೀಯಾ. ಹಾಗಲ್ಲದೆ ವ್ಯಭಿಚಾರಿಯಂತೆ ಪ್ರವರ್ತಿಸದೆ, ನೀನು ಆತ್ಮನಾಗಿದ್ದು ಆತ್ಮ ಅಲ್ಲದವರ ಹತ್ತಿರಕ್ಕೆ ಹೋಗದಂತೆ ಆತ್ಮವನ್ನೇ ಸೇರುವುದು ಒಳ್ಳೆಯದು.

ಮುಖ್ಯವಾಗಿ ಭಕ್ತಿ ಎನ್ನುವುದು ಜೀವನದಲ್ಲಿ ಒಂದು ಭಾಗವಾಗಿ ಇದೆ. ಜೀವನದಲ್ಲಿ ಒಂದು ಅಂಶವಾಗಿ ಇರುವ ಭಕ್ತಿಯನ್ನು ಅನೇಕ ದೇವತೆಗಳ ಮೇಲೆ ಇಟ್ಟುಕೊಳ್ಳದೇ ಒಂದೇ ದೇವರ ಮೇಲೆ ಇಟ್ಟುಕೊಂಡರೇ ನೀನು ಒಬ್ಬ

ಗಂಡನೊಂದಿಗೆ ಸಂಸಾರ ಮಾಡಿದ ಸಂಸಾರಿ ಆಗುತ್ತೀಯಾ. ಹಾಗಲ್ಲದೆ ವಾರಕ್ಕೆ ಒಂದು ದೇವರನ್ನು, ತಿಂಗಳಿಗೆ ಒಂದು ದೇವರನ್ನು ಬದಲಾಯಿಸಿ ಆರಾಧಿಸಿದರೆ ಅದು ಭಕ್ತಿಯಲ್ಲಿ ವ್ಯಭಿಚಾರವಾಗುತ್ತದೆಂದು ಭಗವದ್ಗೀತೆಯಲ್ಲಿ ದೇವರು **"ಭಕ್ತಿರವ್ಯಭಿಚಾರಿಣಿ"** ಎಂದು ಹೇಳಿದ್ದಾನೆ. ವಾರದಲ್ಲಿ ಏಳು ದಿನಗಳು ಏಳು ದೇವತೆಗಳನ್ನು ಆರಾಧಿಸಿದರೇ ಅದು ನಿತ್ಯವೂ ವ್ಯಭಿಚಾರ ಮಾಡಿದಂತಾಗುತ್ತದೆ. ಶನಿವಾರ ಒಂದು ದೇವರನ್ನು, ಮಂಗಳವಾರ ಒಂದು ದೇವರನ್ನು, ಗುರುವಾರ ಒಂದು ದೇವರನ್ನು ಭಕ್ತಿಯಿಂದ ಆರಾಧಿಸಿದರೂ, ಅದು ವ್ಯಭಿಚಾರ ಭಕ್ತಿ ಎಂದು ಭಗವದ್ಗೀತೆಯಲ್ಲಿ ಹೇಳಿದ್ದಾರೆ.

ಭಗವದ್ಗೀತೆಯಲ್ಲಿ ಎಷ್ಟೋ ವಿವರವಾಗಿ ಹೇಳಿದ್ದಾರೆ. ಉಳಿದ ಎರಡು ಗ್ರಂಥಗಳಲ್ಲಿ ಇಷ್ಟು ಆಳವಾಗಿ ಹೇಳದಿದ್ದರೂ, ಇತರ ದೇವತೆಗಳನ್ನು ಆರಾಧಿಸಬಾರದು ಎಂದು ಒಂದು ಮಾತು ಹೇಳಿದರೇನೆ, ಆಯಾ ಮತದವರು ಆ ಮಾತಿಗೆ ಕಟ್ಟುಬಿದ್ದು ಯಾವ ಇತರ ದೇವತೆಗಳನ್ನು ಮುಗಿಯದೇ ತಮ್ಮ ದೇವರನ್ನು ಒಬ್ಬನನ್ನೇ ಮುಗಿಯುತ್ತಿದ್ದಾರೆ. ಇದನ್ನನುಸರಿಸಿ ಇತರ ಮತದವರು ಒಬ್ಬನೇ ಗಂಡನನ್ನು ಹೊಂದಿದ ಸಂಸಾರಿಗಳಾಗಿ ಇರುವಾಗ, ಕೇವಲ ಹಿಂದೂ ಮತದವರು ಒಂದು ದೇವರನ್ನಲ್ಲದೆ ನಮ್ಮ ಭಕ್ತಿ ವಿಶಾಲವಾದುದು, ನಾವು ಎಲ್ಲರ ಹತ್ತಿರಕ್ಕೆ ಹೋಗಿ ಮುಗಿಯುತ್ತೇವೆ ಅಂದರೆ ವೇಶ್ಯ ಕೂಡಾ ವಿಶಾಲ ಭಾವನೆಯಿಂದ ವಿಶಾಲವಾಗಿ ಎಲ್ಲರ ಹತ್ತಿರಕ್ಕೆ ಹೋಗುತ್ತಿದ್ದಾಳೆ ಅಲ್ಲವೆ! ಎಂದು ಭಗವದ್ಗೀತೆಯಲ್ಲಿ 'ಭಕ್ತಿಯಲ್ಲಿ ವ್ಯಭಿಚಾರ ಮಾಡಬೇಡವೆಂದು' ಹೇಳುತ್ತಿದ್ದಾರೆ. ಇದೆಲ್ಲವೂ ದೇವತೆಗಳನ್ನು ಮುಗಿಯುವವರ ಮೇಲೆ ಅಸೂಯೆಯಿಂದ ಹೇಳುತ್ತಿಲ್ಲ, ನೀವು ನಿಜವಾದ ಜ್ಞಾನಿಗಳಾಗಿ ಇರಬೇಕೆಂದು ಹಾಗಿದ್ದರೇ ದೇವರು ನಿಮ್ಮನ್ನು ಸಂಸಾರಿಗಳೆನ್ನುತ್ತಾನೆಂದು, ಹಾಗಿಲ್ಲದೇ ಹೋದರೆ ದೇವರು ನಿಮ್ಮನ್ನು ವ್ಯಭಿಚಾರಿಗಳಾಗಿ ಹೇಳುತ್ತಿದ್ದಾನೆಂದು ಜ್ಞಾಪಕ ಮಾಡುತ್ತಿದ್ದೇನೆ. ಇಷ್ಟು ಹೇಳಿದ ನಾನು ಸಂಸಾರಿನಾ, ವ್ಯಭಿಚಾರಿನಾ ಎನ್ನುವುದು ನೀವೇ ನೋಡಿಕೊಳ್ಳಿ.

ಒಬ್ಬ ಸ್ತ್ರೀ ತಾನು ಸಂಸಾರಿಯಾದರೆ ಎಂದಿಗೂ ಒಂದೇ ಪುರುಷನನ್ನು ಪತಿಯಾಗಿ ನಂಬಿಕೊಂಡಿರುತ್ತಾಳೆ. ಹಾಗಲ್ಲದೆ ತಾನು ವ್ಯಭಿಚಾರಿಯಾದರೆ

ಒಂದು ದಿನದಲ್ಲಿ ಒಬ್ಬ ಪುರುಷನೊಂದಿಗಾಗಲೀ, ಇಬ್ಬರೊಂದಿಗಾಗಲಿ, ಮೂವರೊಂದಿಗೆ ಆಗಲಿ, ತನ್ನ ಸಹನೆಯನ್ನನುಸರಿಸಿ ಎಷ್ಟು ಜನರೊಂದಿಗಾದರೂ ಸಂಸಾರ ಮಾಡಬಹುದು. ನಾನು ಒಂದು ಸಮಯದಲ್ಲಿ ಸ್ವಲ್ಪ ಕಾಲ ತಮಿಳನಾಡಿನಲ್ಲಿ ಇದ್ದೆನು. ಆಗ ಒಂದು ಕಡೆ ವೇಶ್ಯ ಮನೆ ಇರುವಾಗ, ಮತ್ತೊಂದು ಕಡೆ ಒಬ್ಬ ಪೂಜಾರಿಯ ಮನೆ ಇತ್ತು. ಪೂಜಾರಿ ಬೆಳಗ್ಗೆ ಎದ್ದ ಕೂಡಲೇ ನಿತ್ಯಕೃತ್ಯಗಳೆಲ್ಲವೂ ಮುಗಿದ ಕೂಡಲೇ ಊರಿನಲ್ಲಿರುವ ವಿಘ್ನೇಶ್ವರನ ಗುಡಿಗೆ ಹೋಗಿ ಮುಗಿದು ಬರುತ್ತಿದ್ದನು. ಅದು ಆರು ಗಂಟೆಗೇ ಮುಗಿದು ಹೋದಾಗ ತಾನು ಶಿವನ ಗುಡಿಯಲ್ಲಿ ಪೂಜಾರಿ ಕೆಲಸ ಮಾಡುತ್ತಿರುವುದರಿಂದ ಕೂಡಲೇ ಪಂಚೆ ಕಟ್ಟಿಕೊಂಡು ಶಿವನ ಗುಡಿಗೆ ಹೋಗಿ ಪೂಜಾ ಕಾರ್ಯ ಕ್ರಮವನ್ನು ಮಾಡುತ್ತಿದ್ದನು. ಶಿವನ ಪೂಜೆ ಮುಗಿದ ಕೂಡಲೆ ಅದೇ ಗುಡಿಯಲ್ಲಿ ಬಲಗಡೆಗೆ ಇರುವ ಆಂಜನೇಯ ಸ್ವಾಮಿಗೆ ಪೂಜಾ ಕಾರ್ಯ ಕ್ರಮವನ್ನು ಮಾಡಿ, ನಂತರ ಎಡಗಡೆಗೆ ಇರುವ ಮಾಧವ ಸ್ವಾಮಿಗೆ ಪೂಜೆ ಮಾಡುತ್ತಿದ್ದನು. ಆ ಗುಡಿಯಲ್ಲಿನ ಮೂವರು ದೇವತೆಗಳ ಪೂಜೆಗಳು ಮುಗಿದ ಕೂಡಲೇ ಅಲ್ಲಿಗೆ ಸ್ವಲ್ಪ ದೂರದಲ್ಲಿರುವ ಹತ್ತಿ ಫ್ಯಾಕ್ಟರೀಗೆ ಹೋಗಿ ಆಫೀಸಿನಲ್ಲಿರುವ ಲಕ್ಷ್ಮಿಗೆ ಪೂಜೆ ಮಾಡಿ ಬರುವನು. ಹೀಗೆ ಬೆಳಗ್ಗೆಯಿಂದ ಕ್ರಮ ತಪ್ಪದಂತೆ ಹತ್ತು ಗಂಟೆಯೊಳಗೆ ಐದು ಮಂದಿಗೆ ಮುಗಿಯುತ್ತಿದ್ದಾನೆ. ಆ ಪೂಜಾರಿಯನ್ನು ಎಲ್ಲರೂ ಗೌರವಿಸುತ್ತಿದ್ದರು. ಒಂದು ಕಡೆ ಪೂಜಾರಿ ಮತ್ತೊಂದು ಕಡೆ ವೇಶ್ಯ ಇಬ್ಬರಿಗೂ ಮಧ್ಯದಲ್ಲಿ ನಾನಿದ್ದೇನೆ.

ಒಂದು ದಿನ ಬಾವಿಯ ಹತ್ತಿರ ಹಗ್ಗದ ವಿಷಯದಲ್ಲಿ ಪೂಜಾರಿಗೂ ಮತ್ತು ವೇಶ್ಯಗೂ ಮಧ್ಯದಲ್ಲಿ ಜಗಳ ಶುರುವಾಯಿತು. ಆಗ ಒಬ್ಬರಿಗೊಬ್ಬರು ಬೈದುಕೊಳ್ಳುವುದು ನಡೆಯಿತು. ಪೂಜಾರಿ ವೇಶ್ಯಯನ್ನು ಬೈಯ್ಯುತ್ತಾ “ದಿನಕ್ಕೆ ಇಬ್ಬರು ಮೂವರ ಹತ್ತಿರಕ್ಕೆ ಹೋಗುವವಳಿಗೆ ನಿನಗೇನು ತಿಳಿಯುತ್ತದೇ ನನ್ನ ಬೆಲೆ” ಎಂದನು. ಆಗ ಆಕೆ “ನಾನು ಇಬ್ಬರ ಹತ್ತಿರಕ್ಕೆ ಹೋದರೇ ನೀನು ಹತ್ತು ಗಂಟೆಯೊಳಗೇ ನಾಲ್ವರ ಹತ್ತಿರಕ್ಕೆ ಹೋಗುತ್ತೀಯಲ್ಲ ಅದು ಚೆನ್ನಾಗಿದೆಯಾ? ಒಂದೊಂದು ದಿನ ನನ್ನ ಹತ್ತಿರಕ್ಕೆ ಒಬ್ಬನು ಸಹ ಬಾರದಿದ್ದರೂ

ನಾನು ನೀತಿಯಾಗಿಯೇ ಬದುಕುತ್ತಿದ್ದೇನೆ, ನೀನು ಪ್ರತಿ ದಿನ ನಾಲ್ವರ ಹತ್ತಿರಕ್ಕೆ ಹೋಗಿ ವ್ಯಭಿಚಾರ ಮಾಡುತ್ತಿದ್ದೀಯಲ್ಲ! ಆದರೂ ನನ್ನಂತೆ ನೀತಿಯಿಂದ ಬದುಕುತ್ತಿದ್ದೀಯಾ ನಿನ್ನ ಹಳೆಯ ಹಗ್ಗವನ್ನು ಇಲ್ಲಿ ಹಾಕಿ ನನ್ನ ಹೊಸ ಹಗ್ಗವನ್ನು ತೆಗೆದುಕೊಂಡು ಹೋಗಿದ್ದೀಯಾ" ಎಂದು ಕೇಳಿದಳು. ಆಗ ಇವರ ಜಗಳ ನನಗೆ ಏನೂ ಅರ್ಥವಾಗಲಿಲ್ಲ. ಈಗ ಭಗವದ್ಗೀತೆಯಲ್ಲಿ "ಭಕ್ತಿರವ್ಯಭಿ ಚಾರಿಣಿ" ಎನ್ನುವ ವಾಕ್ಯವನ್ನು ನೋಡಿದಾಗ ಅರ್ಥವಾಯಿತು.

ಆಕೆಯದು ಅಂದರೆ ವೇಶ್ಯಳದ್ದು ಶಾರೀರಕ ವ್ಯಭಿಚಾರ ಆದಾಗ, ಪೂಜಾರಿಯದ್ದು ಮಾನಸಿಕ ವ್ಯಭಿಚಾರ ಎಂದು ತಿಳಿಯಿತು. ನಂತರ ನಾನು ಸ್ವತಃವಾಗಿ **"ಕರ್ಮಪತ್ರ"** ಎನ್ನುವ ಚಿಕ್ಕ ಗ್ರಂಥದಲ್ಲಿ ಪೂಜಾರಿ ಮಾನಸಿಕ ಪಾಪವನ್ನು ಮಾಡಿ ನರಕಕ್ಕೆ ಹೋಗಿದ್ದಾನೆಂದು, ಹಾಗೇ ವೇಶ್ಯ ಮಾನಸಿಕ ಪುಣ್ಯವನ್ನು ಮಾಡಿ ಸ್ವರ್ಗಕ್ಕೆ ಹೋಗಿದ್ದಾಳೆಂದು ಬರೆದಿದ್ದೇವೆ. ಅಲ್ಲಿ ಆ ಕಥೆಯನ್ನು ಇಲ್ಲಿ ಈ ಜಗಳವನ್ನು ನೋಡಿದ ನಂತರ ಶಾರೀರಕ ವೇಶ್ಯಗಿಂತ ಮಾನಸಿಕ ವೇಶ್ಯರು ಹೆಚ್ಚು ಪಾಪವನ್ನು ಸಂಪಾದಿಸಿಕೊಳ್ಳುತ್ತಾರೆಂದು ಅರ್ಥವಾಯಿತು. ಸಮಾಜದಲ್ಲಿ ಹೆಸರು ಪಡೆದ ದೊಡ್ಡ ಸ್ವಾಮೀಜಿ ಭಗವದ್ಗೀತೆ ಪ್ರವಚನಗಳನ್ನು ಹೇಳುತ್ತಾನೆ, ಬೆಳಗ್ಗೆಯೇ ಅಮ್ಮನವರ ದೇವಸ್ಥಾನಕ್ಕೆ ಹೋಗಿ ಮುಗಿದು ಬರುತ್ತಾನೆ. ಹಾಗೇ ಆತನು ಯಾವ ಊರಿಗೆ ಉಪನ್ಯಾಸಕ್ಕೆ ಹೋದರೂ ಅಲ್ಲಿ ಯಾವ ಗುಡಿ ಇದ್ದರೂ ಅದರಲ್ಲಿ ಯಾವ ದೇವರಿದ್ದರೂ ಅಲ್ಲಿಗೆ ಹೋಗಿ ಮುಗಿದು ಬರುವುದು ಆತನಿಗೆ ರೂಢಿಯಾಗಿ ನಡೆಯುವ ಕೆಲಸ. ದೇಶದಲ್ಲಿ ಎಷ್ಟೋ ದೊಡ್ಡ ಸ್ವಾಮಿ ಎಂದು ಕರೆಸಿಕೊಂಡ ಆತನು ಭಗವದ್ಗೀತೆ ಪ್ರವಚನಗಳನ್ನು ಹೇಳುತ್ತಾ, ಅನ್ಯ ದೇವತೆಗಳಿಗೆ ಮುಗಿಯುತ್ತಿದ್ದಾನೆಂದರೆ ಆತನ ಭಕ್ತಿಯಲ್ಲಿ ವ್ಯಭಿಚಾರವಿದ್ದಂತೇ ಅಲ್ಲವೇ! ಆ ಲೆಕ್ಕ ಪ್ರಕಾರ ನೋಡಿದರೆ ಭೂಮಿ ಮೇಲೆ ಯಾವ ಸ್ವಾಮಿಯಾದರೂ, ಯಾವ ಗುರುವಾದರೂ, ಯಾವ ಬಾಬಾ ಆದರೂ ಒಂದೇ ದೇವರೊಂದಿಗೆ ಸಂಸಾರ ಮಾಡದೆ, ಅನೇಕ ಮಂದಿ ದೇವತೆಗಳೊಂದಿಗೆ ಸಂಸಾರ ಮಾಡುತ್ತಿರುವುದರಿಂದ ವ್ಯಭಿಚಾರಿ ಅಲ್ಲದ ಸ್ವಾಮಿಯೇ ಇಲ್ಲವೆಂದು ಹೇಳಬಹುದು. ಹಿಂದೂ ಮತದಲ್ಲಿ ದೇವತೆಗಳೆಲ್ಲರನ್ನೂ ಮುಗಿಯುವುದು

ಸಾಂಪ್ರದಾಯವೆಂದು ಚರ್ಚಾವೇದಿಕೆಯಲ್ಲಿ ಹೇಳುತ್ತಿದ್ದಾರಲ್ಲವೆ, ನಾನು ಹಾಗೆ ದೇವತೆಗಳನ್ನು ಮುಗಿಯಲಿಲ್ಲವೆಂದು ನನ್ನನ್ನು ಕೆಟ್ಟದಾಗಿ ಮಾತನಾಡುತ್ತಿದ್ದಾರಲ್ಲವೆ ಅದನ್ನು ನೋಡಿದರೆ ನಾವೆಲ್ಲಾ ಕೆಟ್ಟುಹೋದಾಗ ನೀನೇಕೆ ಕೆಟ್ಟುಹೋಗಲಿಲ್ಲ ಎಂದು ಕೇಳಿದಂತಿದೆ. ಕೆಟ್ಟುಹೋಗುವುದೇ ನಮ್ಮ ಸಾಂಪ್ರದಾಯವಾದಾಗ, ನೀನು ಯಾಕೆ ಕೆಟ್ಟುಹೋಗಿಲ್ಲವೆಂದು ಅವರು ನನ್ನನ್ನು ಕೇಳಿದಂತಿದೆ.

ಕೊನೆಯದಾಗಿ ನಾನು ಒಂದೇ ಮಾತನ್ನು ಹೇಳುತ್ತಿದ್ದೇನೆ. **ಹಿಂದೂಗಳಲ್ಲಿ ಭಕ್ತಿಯಲ್ಲಿ ಸಂಸಾರಿಗಳು ಒಬ್ಬರಾದರೂ ಇದ್ದಾರಾ? ಹೇಳಬಲ್ಲಿರಾ?** ಹಾಗೆ ಇಂತಹವನು ಭಕ್ತಿಯಲ್ಲಿ ವ್ಯಭಿಚಾರಿ ಅಲ್ಲ ಎಂದು ತೋರಿಸಿರಿ. ನಾನು ನಡುರಸ್ತೆಯಲ್ಲಿ ಆತನ ಪಾದಗಳಿಗೆ ನಮಸ್ಕಾರವನ್ನು ಮಾಡುತ್ತೇನೆ. ನನಗೆ ತಿಳಿದು ನಾನು ಬ್ರಹ್ಮವಿದ್ಯಾ ಶಾಸ್ತ್ರವಾದ ಭಗವದ್ಗೀತೆಯ ಪ್ರಕಾರ ಸ್ವಚ್ಛವಾದ ಸಂಸಾರಿಯಾಗಿ ಇದ್ದೇನೆ. ಬ್ರಹ್ಮವಿದ್ಯೆಯನ್ನು ಅನುಸರಿಸಿ ಸ್ವಾಮಿಗಳಲ್ಲಿ ಕನಿಷ್ಟ ಒಬ್ಬ ಸ್ವಾಮಿ ಕೂಡಾ ಸಂಸಾರಿಯಾಗಿ ಕಾಣಿಸದೆ ಹೋದರೆ, ಸಾಮಾನ್ಯ ಪ್ರಜೆಗಳ ವಿಷಯ ಬೇರೇ ಹೇಳಬೇಕಾಗಿಲ್ಲ. ಸ್ವಾಮಿಗಳು ಹೇಳಿದಂತೆ ಪ್ರಜೆಗಳು ನಡೆಯುತ್ತಿರುವರು. ಆದ್ದರಿಂದ ಅವರು ವೇಶ್ಯರಾಗಿದ್ದು ಎಲ್ಲರನ್ನೂ ವೇಶ್ಯರನ್ನಾಗಿ ಬದಲಾಯಿಸುತ್ತಿದ್ದಾರೆ. ಕೊನೆಗೆ ಒಂದೇ ದೇವರನ್ನು ಕುರಿತು ಮೂರು ಮತಗಳಲ್ಲಿ ಹೇಳುತ್ತಾ, ಒಬ್ಬ ದೇವರನ್ನು ಆರಾಧಿಸುವುದೇ ಸರಿಯಾದ ಭಕ್ತಿಯೆಂದು ಹೇಳುತ್ತಿದ್ದೇನೆ. ಇತರ ದೇವತೆಗಳನ್ನು ಒಬ್ಬರನ್ನಾಗಲೀ, ಬಹಳ ಮಂದಿಯನ್ನಾಗಲಿ ಆರಾಧಿಸವುದು ಸರಿಯಾದ ಭಕ್ತಿ ಅಲ್ಲವೆಂದು ಹೇಳುತ್ತಿದ್ದೇವೆ.

**ನಮ್ಮ ಜ್ಞಾನ ಒಳ್ಳೆಯದಲ್ಲ ಎಂದು ಹೇಳಿದ ಧರ್ಮಪೀಠದವರಿಗೆ ನಾನು ಹೇಳಿದ ಜ್ಞಾನ ತಿಳಿದು, ಜೈಲಿನಲ್ಲಿರುವ ಖೈದೀಗಳು ಸಹ ಬದಲಾಗಿ ಹೋಗುತ್ತಿದ್ದಾರೆ. ಹಾಗೆ ಬದಲಾದ ವ್ಯಕ್ತಿ ಬರೆದ ಪತ್ರವನ್ನು ಇಲ್ಲಿ ಪ್ರಕಟಿಸುತ್ತಿದ್ದೇವೆ ನೋಡಿರಿ. ನನ್ನಂತೆ ನೀವೂ ಯಾರನ್ನಾದರೂ ಬದಲಾಯಿಸಿದ್ದೀರಾ ಎಂದು ಸವಾಲು ಹಾಕುತ್ತಿದ್ದೇವೆ.**

## ಶ್ರೀಶ್ರೀಶ್ರೀ ಆಚಾರ್ಯ ಪ್ರಬೋಧಾನಂದ ಯೋಗೀಶ್ವರರ
### ಪಾದ ಪದ್ಮಗಳಿಗೆ ನನ್ನ ಸಾಷ್ಟಾಂಗ ವಂದನೆಗಳು.

ಸಾಕ್ಷ್ಯಾತ್ತೂ ಖುದಾಗೆ (ಸಜ್ದಾ ಕರ್ತಾಹು) ಸಾಷ್ಟಾಂಗ ವಂದನೆಗಳು ಸಮರ್ಪಿಸಿಕೊಳ್ಳುತ್ತಿದ್ದೇನೆ.

ನಾನು ಅಂದರೆ ಜೀವಾತ್ಮನಾಗಿ ಇರುವ ನನ್ನ ಶರೀರ ವೊಂದರ ಹೆಸರು ಸಯ್ಯದ್ ಸಲ್ಮಾನ್‌ಷಾ s/o ಸಯ್ಯದ್ ಮುಸ್ಲೀಮ್‌ಷಾ ನನ್ನ ವಯಸ್ಸು 34 ವರ್ಷಗಳು. ವೃತ್ತಿ ಅಕ್ವೇರಿಯಂ (ಷೋಕೇಸುಗಳಲ್ಲಿ ಮೀನುಗಳು ಬೆಳಸಿ ಮಾರುವುದು) ಮತ ಮುಸ್ಲೀಮ್, ಓದು 9 ನೇ ತರಗತಿ ಇಂಗ್ಲೀಷು ಮೀಡಿಯಂ, ನಿವಾಸ ಬೆಂಗಳೂರು (ವಿವೇಕ್‌ನಗರ್).

ಪ್ರಸ್ತುತ ಸೆಂಟ್ರಲ್ ಜೈಲ್ ಬೆಂಗಳೂರಿನಲ್ಲಿ ಅಂಡರ್ ಟ್ರೈಲ್ ಖೈದೀಯಾಗಿ (UTP) ಇದ್ದೇನೆ. ನನ್ನ ಖೈದೀ ನಂಬರ್:7579/14 ರೂಮ್ ನಂಬರ್ 10ರಲ್ಲಿ ಜೈಲು ಜೀವನವನ್ನು ಅನುಭವಿಸುತ್ತಾ ಇದ್ದೇನೆ. ನನ್ನ ಕುಟುಂಬದ ವಿವರಗಳು ಏನೆಂದರೇ ನಮ್ಮ ಕುಟುಂಬದವರು ಕಳೆದ ಏಳು ತಲೆಮಾರುಗಳಿಂದ ಮುಸ್ಲೀಮ್ ಪಂಡಿತರಾಗಿ (ಅಂದರೆ ಹಾಫಿಜೆ ಖುರಾನ್, ಆಲಿಮೆ ಖುರ್‌ಆನ್) ಇದ್ದಾರೆಂದು ತಿಳಿಸಿದ್ದಾರೆ. ಪ್ರಸ್ತುತ ನಾನು ಹೊರತು ನಮ್ಮ ಕುಟುಂಬದವರು ಎಲ್ಲರೂ ಮುಸ್ಲೀಮ್ ಪಾಂಡಿತ್ಯ ಹೊಂದಿದವರೇ. (ತಮ್ಮ ಗ್ರಂಥಗಳ ಮೂಲಕ ಜ್ಞಾನ ತಿಳಿದ ನಂತರ ಯಾರು ಪಂಡಿತರೋ ಎನ್ನುವ ವಿಷಯ ತಿಳಿದಿದೆ.)

ನಾನು ಸಾಧಾರಣ ಮುಸ್ಲೀಮ್ ಆಗಿ ಇದ್ದೂ, ನಮಾಜ್ ಮಾಡಿಕೊಳ್ಳುತ್ತಾ, ರೋಜಾ ಇರುತ್ತಾ ಜೀವನ ಕಳೆಯುತ್ತಾ ಇರುತ್ತಿದ್ದೆನು. ನನಗೆ ಸಾಧಾರಣವಾಗಿ ಸಹನೆ ಬಹಳ ಕಡಿಮೆ, ಕೋಪ ಹೆಚ್ಚಾಗಿ ಇರುತ್ತಿತ್ತು. ಹೆಚ್ಚು ಅಸಹನೆಯಿಂದ, ಆವೇದನೆಯಿಂದ ಬಹಳ ಒತ್ತಡಕ್ಕೆ ಒಳಗಾಗುತ್ತಾ ಇರುತ್ತಿದ್ದೆನು. ಜ್ಞಾನಕ್ಕೆ ಸಂಬಂಧಿಸಿದ ಆಲೋಚನೆಗಳು ಬರುತ್ತಿದ್ದವು. ಆ ಕ್ರಮದಲ್ಲಿ ನಾನು ನಮ್ಮ ಮನೆಯಿಂದ ಯಾರಿಗೂ ಹೇಳದಂತೆ ಹೊರಟು ಹೋದೆನು.

ಹಿಂದೂ ಪುಣ್ಯ ಸ್ಥಳಗಳಾದ ದ್ವಾರಕಾ (ಗುಜರಾತ್) ನಗರಕ್ಕೆ ಹೋಗಿದ್ದೇನೆ. ಆ ನಂತರ ಗೋಲ್ಡೆನ್ ಟೆಂಪುಲ್ (ಅಮೃತ್‌ಸರ್), ಹರಿದ್ವಾರ್, ಋಷಿಕೇಷ್, ಢಿಲ್ಲೀಯಲ್ಲಿ ಇರುವ ಆಶ್ರಮಗಳು, ಮಂದಿರಗಳು, ದರ್ಗಾಗಳನ್ನು ಸಂದರ್ಶಿಸಿಕೊಳ್ಳುತ್ತಾ, ಹಿಂದೂಗಳ ಜೀವನ ವಿಧಾನಗಳು, ಆಚರಣೆಗಳು, ಪೂಜಾ ವಿಧಾನಗಳು ಮತ್ತು ಮುಸ್ಲೀಮ್‌ರ ಜೀವನ ವಿಧಾನಗಳನ್ನು ಪರಿಶೀಲಿಸಿಕೊಳ್ಳುತ್ತಾ, ತಿಳಿದುಕೊಳ್ಳುತ್ತಾ, 12 ವರ್ಷಗಳು ನಮ್ಮ ಕುಟುಂಬದವ ರೊಂದಿಗೆ ಸಂಬಂಧ ಇಲ್ಲದಂತೆ ಕಳೆದು, ಪುನಃ 2008 ನೇ ವರ್ಷದಲ್ಲಿ ಮನೆಗೆ ಬಂದಿದ್ದೇನೆ. ಮನೆಯಲ್ಲಿ ಇದ್ದೂ ಎರಡು ವರ್ಷಗಳು ಪ್ರೈವೇಟ್ ವರ್ಕ್ ಮಾಡಿಕೊಳ್ಳುತ್ತಾ ಇರುವಾಗ, ಒಬ್ಬ ಮುಸ್ಲೀಮ್ ಹುಡುಗಿಯನ್ನು ಪ್ರೀತಿಸಿ, ನಮ್ಮ ಕುಟುಂಬದವ ರೊಂದಿಗೆ ಆಕೆಯೊಂದಿಗೆ ಮದುವೆ ವಿಷಯವನ್ನು ಕುರಿತು ಚರ್ಚಿಸಿದರೇ ಅವರು ತಿರಸ್ಕರಿಸಿದ್ದಾರೆ. ಹುಡುಗಿಯವರ ತಾಯಿ ತಂದೆ ಸಹ ಒಪ್ಪಿಕೊಳ್ಳಲಿಲ್ಲ. ಆಗ ನಾನು ಹುಡುಗಿಯನ್ನು ಹೈದ್ರಾಬಾದ್‌ಗೆ ಕರೆದುಕೊಂಡು ಹೋಗಿ, ಅಲ್ಲಿ ಮದುವೆ ಮಾಡಿಕೊಂಡು, ಬಾಗ್ ಅಂಬರ್ ಪೇಟ್, ಹೈದ್ರಾಬಾದ್‌ನಲ್ಲಿ ನಾಲ್ಕು ತಿಂಗಳು ಇದ್ದು ಪುನಃ ಬೆಂಗಳೂರ್‌ಗೆ ಬಂದಿದ್ದೇನೆ. ನಾನು ನಮ್ಮ ಮನೆಗೆ ಹೋಗದಂತೆ ಬಾಡಿಗೆ ಮನೆಯಲ್ಲಿ ಇರುತ್ತಿದ್ದೆನು. ಅಲ್ಲಿಯವರೆಗು ನಾನು ಮುಸ್ಲೀಮ್ ಗ್ರಂಥಗಳು ಯಾವುವೂ ಓದಲಿಲ್ಲ. 2013 ನೇ ವರ್ಷದ ವರೆಗು ನಾನು ಸಾಧಾರಣ ಜೀವನ ಕಳೆಯುತ್ತಿರುವಾಗ ಕುಟುಂಬ ಕಲಹಗಳ ಕಾರಣದಿಂದ, ನಮ್ಮ ಚಿಕ್ಕಪ್ಪನನ್ನು ಹತ್ಯೆ ಮಾಡುವುದು ನಡೆದಿದೆ. ಅದು ನಾನು ಮಾಡಿದ್ದೇನೆಂದು ಯಾರಿಗೂ ತಿಳಿದಿಲ್ಲ. ಪುನಃ ಕುಟುಂಬ ಕಲಹಗಳ ಕಾರಣವಾಗಿ 2014 ರಲ್ಲಿ 7 ವರ್ಷಗಳು ಇರುವ ನನ್ನ ತಂಗಿಯ ಮಗಳನ್ನು ಸಹ ನನ್ನ ಹೆಂಡತಿ ಸಹಾಯದಿಂದ ಹತ್ಯೆ ಮಾಡುವುದು ನಡೆದಿದೆ. ಆಗ ಹಳೇ ಹತ್ಯೆ ವಿಷಯವೂ ಸಹ ತಿಳಿದುಹೋಗಿದೆ. ಈ ಎರಡು ಹತ್ಯೆಗಳ ಕಾರಣವಾಗಿ ನಾನು, ನನ್ನ ಹೆಂಡತಿ 2014 ನೇ ವರ್ಷ ಜುಲೈ ತಿಂಗಳು 14ನೇ ತಾರೀಖಿನಂದು ಜೈಲಿಗೆ ಬರುವುದು ನಡೆದಿದೆ. ಅಂದಿನಿಂದ ಅಂದರೆ 14.07.2014 ರಿಂದ ಇಂದಿನವರೆಗು ಅಂದರೆ ನಾಲ್ಕು ವರ್ಷಗಳಿಂದ ಇಬ್ಬರೂ ಸಹ ಜೈಲಿನಲ್ಲೇ ಇದ್ದೇವೆ.

ನಾನು ಜೈಲಿಗೆ ಬಂದ ನಂತರ ಜೈಲಲ್ಲೇ ಇರುವ ಕೆಲವು ಮಂದಿ ಮುಸ್ಲೀಮ್‌ರೊಂದಿಗೆ ಪರಿಚಯವಾಗಿ, 2014 ಜುಲೈ ನಿಂದ 2016 ಡಿಸೆಂಬರ್‌ವರೆಗು ಹದೀಸುಗಳು ಓದಿಕೊಳ್ಳುತ್ತಾ, ನಮಾಜ್ ಮಾಡುತ್ತಾ, ರೋಜಾ ಇದ್ದು ಕಳೆಯುತ್ತಿದ್ದೇನೆ. ನಾನು ಓದಿದ ಹದೀಸುಗಳು 1. ಸಹೀ ಬುಖಾರಿ (9ವಾಲ್ಯೂಮ್‌ಗಳು), 2. ಅಬುದಾವೂದ್ 3. ತಿರ್ಮಿಜಿ 4. ಸಹಿ ಮುಸ್ಲೀಮ್ ಮತ್ತು ಮುಹಮ್ಮದ್ ಪ್ರವಕ್ತ ಜೀವನ ಚರಿತ್ರೆ (ಸರಾತುನ್ನಬಿ), ಅವರ ಶಿಷ್ಯರ ಖಲೀಫಾಗಳ ಚರಿತ್ರೆಗಳನ್ನು ಓದಿದ್ದೇನೆ. ಆದರೇ ಹದೀಸುಗಳು ಕೆಲವು ವಿಷಯಗಳಲ್ಲಿ ಒಂದರಲ್ಲಿ ಹೇಳಿರುವುದಕ್ಕೆ, ಮತ್ತೊಂದಕ್ಕೆ ವಿರುದ್ಧವಾಗಿ ಇರುತ್ತಿದ್ದವು. ನಮಾಜ್ ವಿಧಾನ ಒಂದು ಹದೀಸು ಮತ್ತೊಂದು ಹದೀಸು ಹೇಳುವ ವಿಧಾನಕ್ಕೆ ವಿರುದ್ಧವಾಗಿ ಇತ್ತು. ಜೈಲ್‌ನಲ್ಲಿ ಸಹ ನಾಲ್ಕು, ಐದು (ಫಿರ್ಕೇ) ವರ್ಗದವರು ಇದ್ದಾರೆ. ಒಟ್ಟಾರೆ ಮುಸ್ಲೀಮ್ ಸಮಾಜ 73 ವರ್ಗಗಳಾಗಿ ಇದ್ದಾರೆಂದು, 73ನೇ ವರ್ಗ ಒಂದು ಮಾತ್ರವೇ ಜನ್ನತ್ (ಸ್ವರ್ಗ) ದೊಳಗೆ ಹೋಗುತ್ತದೆಂದು ಹೇಳುತ್ತಿದ್ದರು. 73 ವರ್ಗಗಳಲ್ಲಿ ಆ ಒಂದು ಯಾವುದು ಎಂದರೆ ಎಲ್ಲರೂ ನಮ್ಮದು ನಮ್ಮದು ಮಾತ್ರವೇ ಜನ್ನತ್ ಒಳಗೆ ಹೋಗುತ್ತದೆ. ಉಳಿದ ವರ್ಗದವರು ಹೋಗುವುದಿಲ್ಲ ಎನ್ನುತ್ತಿದ್ದರು. ಯಾವ ವರ್ಗ ಜನ್ನತ್‌ನೊಳಗೆ ಹೋಗುವುದಿಲ್ಲವೆಂದು ನಂಬಿಕೆ, ರುಜು ಏನು ಎಂದರೇ ಪ್ರಳಯ ದಿನ ಅಲ್ಲಾಹ್ ಹತ್ತಿರಕ್ಕೆ ಹೋದ ನಂತರ ತಿಳಿಯುತ್ತದೆ ಆದರೆ ಈಗ ಹೇಳಲಾರೆವು, ಯಾರಿಗೂ ತಿಳಿದಿಲ್ಲ ಎಂದು ಹೇಳುತ್ತಿದ್ದಾರೆ. ನಮಾಜ್ ಮಾಡಿಕೊಳ್ಳುತ್ತಾ, ರೋಜಾ ಇದ್ದೂ, ಬೋಧನೆಗಳು ಕೇಳುತ್ತಾ ಇದ್ದರೇ, ಪಾಪಗಳೆಲ್ಲವೂ ಕ್ಷಮಿಸಲ್ಪಟ್ಟು ಸ್ವರ್ಗದೊಳಗೆ ಹೋಗುತ್ತೇವೆ ಎಂದು ಹೇಳುತ್ತಿದ್ದರು. ಜ್ಞಾನವನ್ನು ಕುರಿತು ಎಷ್ಟು ತಿಳಿದುಕೊಳ್ಳುತ್ತಿದ್ದರೇ, ಹದೀಸುಗಳು ಓದುತ್ತಿರುವಾಗ ಪ್ರಶ್ನೆಗಳು, ಸಂದೇಹಗಳು ಇರುತ್ತಿದ್ದರೇ ಬೆಳೆಯುತ್ತಾ ಇವೆ ಆದರೇ ಸ್ಪಷ್ಟವಾದ ಸಮಾಧಾನ ದೊರಕುತ್ತಿಲ್ಲ. ತಿಳಿದವರೆಂದು ಹಿರಿಯರೆಂದು ಕೇಳಿದರೇ ಅವರು ಹೇಳುವ ಸಮಾಧಾನ ಅಸಂಪೂರ್ತಿಯಾಗಿ ಇರುತ್ತಿತ್ತು. ಒಬ್ಬರು ಹೇಳುವುದಕ್ಕೂ ಮತ್ತೊಬ್ಬರು ಹೇಳುವುದಕ್ಕೂ ಹೊಂದಾಣಿಕೆ ಇಲ್ಲದಂತೆ ಇರುತ್ತಿತ್ತು.

ಹೀಗೆ ನನ್ನ ಜೀವನ ಸಾಗುತ್ತಿರುವಾಗ 2016 ನೇ ವರ್ಷ ಸೆಪ್ಟೆಂಬರ್ ತಿಂಗಳಲ್ಲಿ ನಾನಿರುವ ರೂಮ್ (ಬ್ಯಾರಕ್) ಗೆ ಅಮೀರ್ ಅಲಿ ಎನ್ನುವ ವ್ಯಕ್ತಿ

ಬಂದನು. ಆತನು ಯಾವಾಗಲೂ ಏನೋ ಓದುತ್ತಾ, ಬರೆದುಕೊಳ್ಳುತ್ತಾ ಇರುತ್ತಿದ್ದನು, ಯಾರೊಂದಿಗೂ ಹೆಚ್ಚಾಗಿ ಮಾತನಾಡುತ್ತಿರಲಿಲ್ಲ. ನನಗೆ 2016 ನೇ ವರ್ಷ ನವಂಬರ್ ತಿಂಗಳಲ್ಲಿ ವಿಪರೀತವಾದ ಬ್ಯಾಕ್‌ಪೆಯಿನ್ ಬಂದು ಬಹಳ ಬಾಧೆ ಬೀಳುತ್ತಿದ್ದೆ. ಆಗ ನನಗೆ ಬೇರೆಯವರಿಂದ ಅಮೀರ್ ಅಲಿಗೆ ತೋರಿಸು, ಆತನು ಯಾವುದೋ ಟ್ರೀಟ್‌ಮೆಂಟ್ ಮಾಡುತ್ತಾನಂತೆ ಎಂದು ತಿಳಿದು ಆತನಿಗೆ ನನ್ನ ಪ್ರಾಬ್ಲಮ್ ಕುರಿತು ಹೇಳಿದ್ದೇನೆ. ಆಗ ಆತನು ನನ್ನನ್ನು ಚೆಕ್ ಮಾಡಿ ಯಾವುದೋ ಪಾಯಿಂಟ್‌ಗಳ ಮೇಲೆ ಒತ್ತಿ ಟ್ರೀಟ್‌ಮೆಂಟ್ ಮಾಡಿದ್ದಾನೆ. ಆಗ ಕೂಡಲೇ ನೋವು ಕಡಿಮೆಯಾಗಿ ರಿಲೀಫ್ ಆಯಿತು. ಅದರಿಂದ ಅವರೊಂದಿಗೆ ಪರಿಚಯ ಬೆಳೆದು ಜ್ಞಾನವನ್ನು ಕುರಿತು ಕೇಳುವುದು ನಡೆದಿದೆ. ಆಗ ಆತನು ಜ್ಞಾನವನ್ನು ಕುರಿತು ತಿಳಿದುಕೊಳ್ಳಬೇಕೆಂದು ಇದ್ದರೇ ಬಂದು ಕುಳಿತುಕೊಳ್ಳಿ ಚರ್ಚಿಸಿಕೊಳ್ಳೋಣ ಎಂದು ಹೇಳಿದನು. ಅಂದಿನಿಂದ (2016 ಡಿಸೆಂಬರ್‌ನಿಂದ) ಪ್ರತಿ ದಿನ ಸಂಜೆ ಲಾಕಪ್ ನಂತರ 7 ಗಂಟೆಯಿಂದ 9 ಗಂಟೆಯವರೆಗು, ನನಗಿರುವ ಸಂಶಯಗಳಿಗೆ ಖುರ್‌ಆನ್ ಆಯತ್‌ಗಳ ಮೂಲಕ ತೋರಿಸಿ ವಿವರಿಸುತ್ತಿದ್ದರು. ಒಂದು ತಿಂಗಳಲ್ಲಿ ನನ್ನ ಸಂದೇಹಗಳಿಗೆ ಬಹಳ ಉತ್ತರಗಳು ಸಿಗುತ್ತಿದ್ದವು. ಅಷ್ಟೇ ಅಲ್ಲದೆ ಎಷ್ಟೋ ತಿಳಿಯದ ರಹಸ್ಯಗಳು ಸಹ ತಿಳಿಸುತ್ತಿದ್ದರು. ಖುರ್‌ಆನ್‌ನಲ್ಲಿ ಶರೀರವನ್ನು ಕುರಿತಾದ ಆಯತ್‌ಗಳು ಹೀಗೆ ಇವೆಯೆಂದು, ಅಲ್ಲಾಹ್ ವಿಧಾನ ಹೀಗೆ ಇದೆಯೆಂದು ವಿವರಿಸುತ್ತಿದ್ದರು. ಇಲ್ಲಿಯವರೆಗು ಯಾರೂ ಹೇಳದಿರುವವು, ಯಾರಿಗೂ ತಿಳಿಯದಿರುವವು ಹೇಳುತ್ತಿದ್ದರೇ ಪೂರ್ತಿ ಸತ್ಯ, ನಿಜವಾದುದೆಂದು ಅನಿಸಿತು. ಆಗ ಇನ್ನೂ ಹೆಚ್ಚಿನ ಜ್ಞಾನ ವಿಷಯಗಳು ತಿಳಿದುಕೊಳ್ಳಬೇಕೆಂದು ಹಗಲು ಕೂಡಾ ಜ್ಞಾನವನ್ನು ಕುರಿತು ಹೇಳೆಂದು ಕೇಳಿದ್ದೇನೆ.

ಆಗ ಆತನು ಸುರಾ 3–7 ಆಯತ್‌ನ್ನು ತೋರಿಸಿ ಖುರ್‌ಆನ್‌ನಲ್ಲಿ ಮುಹ್ಕಮಾತ್ ಮತ್ತು ಮುತಷಾಬಿಹಾತ್ (ಸ್ಥೂಲ,ಸೂಕ್ಷ್ಮ) ಆಯತ್‌ಗಳು ಇವೆ, ಇವು ಇಲ್ಲಿಯವರೆಗು ಮುಸ್ಲೀಮ್‌ರಿಗೆ ತಿಳಿಯದೆ ಖುರ್‌ಆನ್ ಪೂರ್ತಿ ಆಯತ್‌ಗಳನ್ನು ಸ್ಥೂಲವಾಗಿ ಬರೆದುಕೊಂಡಿದ್ದಾರೆ. ಅದಕ್ಕೇ ಖುರ್‌ಆನ್ ಯಾರಿಗೂ ಸರಿಯಾಗಿ ಅರ್ಥವಾಗದೆ, ಯಾರಿಗೆ ಅರ್ಥವಾಗಿರುವುದು ಅವರು

ಹದೀಸುಗಳ ರೂಪದಲ್ಲಿ ಬರೆದುಕೊಂಡು, 72 ವರ್ಗಗಳಾಗಿ ಸೀಳಿಹೋಗಿದ್ದಾರೆ. ಈ ಸೂಕ್ಷ್ಮ ಖುರ್‌ಆನ್ ಆಯತ್‌ಗಳನ್ನು ಪ್ರಬೋಧಾನಂದ ಯೋಗೀಶ್ವರರು ಎನ್ನುವ ಒಬ್ಬ ಸ್ವಾಮಿಯವರು ಇವುಗಳ ವಿವರಣೆಯನ್ನು ಕುರಿತು ಗ್ರಂಥದಲ್ಲಿ ಬರೆದಿದ್ದಾರೆ. ಅವರ ಮೂಲಕವೇ ನನಗೆ ಈ ಜ್ಞಾನ ಸಿಕ್ಕಿದೆಯೆಂದು, ಅವರು ಮೂರು ಮತಗಳ ಜ್ಞಾನ ಹೇಳುತ್ತಾರೆ, ಬಹಳ ಗ್ರಂಥಗಳನ್ನು ಬರೆದಿದ್ದಾರೆ. ನಿನಗೆ ಶ್ರದ್ಧೆ ಇದ್ದರೇ ಜ್ಞಾನ ತಿಳಿದುಕೊಳ್ಳಬೇಕೆಂದು ಅನಿಸಿದರೇ, ನಿನಗೆ ಸ್ವಾಮಿಯವರು ಬರೆದ ಗ್ರಂಥಗಳು ನನ್ನ ಹತ್ತಿರ ಇವೆ. ಓದುತ್ತೇನೆಂದರೆ ಕೊಡುತ್ತೇನೆ ಅವು ತೆಲುಗು ಮತ್ತು ಕನ್ನಡ ಭಾಷಗಳಲ್ಲಿಯೇ ಇವೆ. ಕೆಲವು ಉರ್ದೂ ಭಾಷೆಯಲ್ಲೂ ಇವೆ ಎಂದು ಹೇಳಿದ್ದಾರೆ. ಆಗ ನಾನು ನನಗೆ ಕನ್ನಡ ಭಾಷೆ ಬರುತ್ತದೆಂದು ಹೇಳಿದ್ದೇನೆ. ಆಗ ನನಗೆ ಮೊದಲ ಬಾರಿ 2017 ನೇ ವರ್ಷ ಜನವರಿಯಲ್ಲಿ **"ಧರ್ಮಶಾಸ್ತ್ರ ಯಾವುದು"** ಎನ್ನುವ ಗ್ರಂಥವನ್ನು ಕೊಟ್ಟಿದ್ದಾರೆ. ಅಲ್ಲಿಯವರೆಗು ನನಗೆ ಧರ್ಮ ಎಂದರೇ, ಶಾಸ್ತ್ರ ಎಂದರೇ ಕೂಡಾ ಏನೂ ತಿಳಿದಿಲ್ಲ. ಆದರೇ ಈ ಗ್ರಂಥ ಓದಿದ ನಂತರ ಧರ್ಮ, ಶಾಸ್ತ್ರ ಎಂದರೆ ಏನೋ ತಿಳಿದಿದೆ. ಅಷ್ಟೇ ಅಲ್ಲದೆ ಬಹಳ ಜ್ಞಾನ ವಿಷಯಗಳು ತಿಳಿದಿವೆ. ಎಲ್ಲಾ ವಾಸ್ತವಗಳಾಗಿ ಅರ್ಥವಾಗಿವೆ. ಉಳಿದ ಗ್ರಂಥಗಳು ಕೂಡಾ ಓದಬೇಕೆನ್ನುವ ಶ್ರದ್ಧೆ ಬೆಳಿಯಿತು. ನಾನು 2017 ನೇ ವರ್ಷ ಜನವರಿ ಯಿಂದ 2018 ನೇ ವರ್ಷ ಏಪ್ರಿಲ್ ವರೆಗು ಓದಿದ ಒಟ್ಟಾರೆ ಗ್ರಂಥಗಳು 1. ಧರ್ಮಶಾಸ್ತ್ರ ಯಾವುದು? 2. ಪ್ರವಕ್ತರು ಯಾರು? 3. ಕರ್ಮಪತ್ರ 4. ಒಂದು ಮಾತು ಮೂರು ಗ್ರಂಥಗಳು 5. ದೇವರ ತೀರ್ಪು (ಜಡ್ಜಿಮೆಂಟ್ ಆಫ್ ಗಾಡ್) 6. ಮೂರು ಗ್ರಂಥಗಳು ಇಬ್ಬರು ಗುರುಗಳು ಒಬ್ಬ ಬೋಧಕನು 7. ಒಬ್ಬನೇ ಇಬ್ಬರು 8. ದೇವರ ಆಗಮನಕ್ಕೆ ಇದು ಸಮಯವಲ್ಲವೆ? 9. ಏಸು ಮರಣಿಸಿದ್ದಾನಾ ? ಹತವಾಗಿದ್ದಾನಾ? 10. ತ್ರೈತಾಕಾರ ರಹಸ್ಯ 11. ನಿನಗೆ ನನ್ನ ಲೇಖೆ 12. ಗೀತಾ ಪರಿಚಯ 13. ಸಾಯಿಬಾಬಾ ದೇವರಾ ಅಲ್ಲವಾ? 14. ಮಂತ್ರ–ಮಹಿಮೆ 15. ದೇವಾಲಯ ರಹಸ್ಯಗಳು 16. ಇಂದೂ ಸಂಪ್ರದಾಯಗಳು 17. ದೆವ್ವಗಳ–ಭೂತಗಳ ಯದಾರ್ಥ ಸಂಘಟನೆಗಳು 18. 1058 ಆಧ್ಯಾತ್ಮಿಕ ಪ್ರಶ್ನೆ–ಉತ್ತರಗಳು 19. ಭಗವದ್ಗೀತೆ 20. ಸ್ವರ್ಗ

ಇಂದ್ರಲೋಕವಾ! ನರಕ ಯಮರಾಜ್ಯವಾ? 21. ದೇವರ ಚಿಹ್ನೆ 22. ಯಾವುದು ನಿಜವಾದ ಜ್ಞಾನ 23. ಮರಣದ ನಂತರ ಜೀವನ 24. ಜನನ ಮರಣ ಸಿದ್ಧಾಂತ 25. ಪುನರ್ಜನ್ಮ ರಹಸ್ಯ 26. ಸಮಾಧಿ 27. ವಿಶ್ವವಿದ್ಯಾಲಯ 28. ಸುಬೋಧ 29. ಶ್ರೀ ಕೃಷ್ಣನು ದೇವರಾ ಭಗವಂತನಾ? 30. ಹಿಂದೂ ಮತದಲ್ಲಿ ಸಿದ್ಧಾಂತ ಕರ್ತರು 31. ಧ್ಯಾನ–ಪ್ರಾರ್ಥನೆ–ನಮಾಜ್ 32. ಒಗಟುಗಳ ಜ್ಞಾನ 33. ಹೇತುವಾದ ಪ್ರಶ್ನೆಗಳು–ಸತ್ಯವಾದ ಉತ್ತರಗಳು 34. ಹಿಂದೂ ಮತದಲ್ಲಿ ಕುಲವಿವಕ್ಷ 35. ಶಿಲುಬೆ ದೇವರಾ? 36. ವಾರ್ತಕನು – ವರ್ತಕನು 37. ಪ್ರಬೋಧ 38. ನಮ್ಮ ಹಬ್ಬಗಳು 39. ತಾಯಿ ತಂದೆ 40. ತ್ರೈತಾರಾಧನೆ 41. ಭಗವಾನ್ ರಾವಣ ಬ್ರಹ್ಮ 42. ಒಬ್ಬ ವ್ಯಕ್ತಿ ಎರಡು ಕೋನಗಳು 43. ಪ್ರಥಮ ದೈವ ಗ್ರಂಥ ಭಗವದ್ಗೀತೆ 44. ಮತ ಪಥ 45. ಅಂತಿಮ ದೈವ ಗ್ರಂಥದಲ್ಲಿ ಜ್ಞಾನ ವಾಕ್ಯಗಳು, ಎರಡನೆಯದು ವಜ್ರ ವಾಕ್ಯಗಳು ಮತ್ತು 46. ದ್ವಿತೀಯ ಗ್ರಂಥ ಬೈಬಲ್ ಕೂಡಾ ತೆಲುಗು ಭಾಷೆಯಿಂದ ಉರ್ದೂದಲ್ಲಿ ಟ್ರಾನ್ಸ್‌ಲೇಷನ್ ಮಾಡಿ ಪ್ರತಿ ದಿನ ಎರಡು ಗಂಟೆಗಳು ಹೇಳುತ್ತಿದ್ದರು. ಉಳಿದ ಗ್ರಂಥಗಳಲ್ಲಿ ಇರುವ ಡೌಟ್ಸ್ ಸಹ ಅಮೀರ್ ಅಲಿದಿವರನ್ನು ಕೇಳಿ ತಿಳಿದುಕೊಳ್ಳುತ್ತಿದ್ದೆನು.

ಮೇಲೆ ತಿಳಿಸಿದ ಗ್ರಂಥಗಳು ಒಂದೊಂದು ಗ್ರಂಥ ಓದುತ್ತಾ ಇದ್ದರೇ ನನಗೆ ಪ್ರತಿ ಒಂದು ಗ್ರಂಥದಲ್ಲಿ ತಿಳಿಯುವ ಜ್ಞಾನದೊಂದಿಗೆ ಆನಂದದಿಂದ ಹೊಸ ಅನುಭೂತಿಗಳು ಹೊಂದುತ್ತಾ, ನನ್ನ ಹೃದಯ ರೋಮಾಂಚನವಾಗುತ್ತಿತ್ತು. ನನ್ನ ಗತ ಜೀವನದಲ್ಲಿ ಇದ್ದ ಕೋಪ ಕಡಿಮೆಯಾಗಿದೆ, ಸಹನೆ ಬೆಳೆದಿದೆ. ನನ್ನಲ್ಲಿ ಊಹಿಸದ ಬದಲಾವಣೆ ಬಂದಿತು. ನನಗೆ ತಮ್ಮ ಜ್ಞಾನದ ಮೂಲಕ ಹೊಸ ಜನ್ಮ (ಅಂದರೇ ಬಿಂದು ಪುತ್ರನಿಂದ ನಾದ ಪುತ್ರನ ಜನ್ಮ) ಪ್ರಸಾದಿಸಲ್ಪಟ್ಟಿದೆಯೆಂದು ಆನಂದವಾಗಿ ಇದ್ದೇನೆ.

ಸಾಕ್ಷಾತ್ತೂ ಖುದಾ ಹೇಳಿದ ಜ್ಞಾನದ ಮೂಲಕ ತಿಳಿದ ನಿಗೂಢ ರಹಸ್ಯ ನಿಜಗಳು ಏನೆಂದರೆ ಮೂರು ಆತ್ಮಗಳ ಜ್ಞಾನ (ಜೀವಾತ್ಮ, ಆತ್ಮ, ಪರಮಾತ್ಮ) ಮೂರು ಗ್ರಂಥಗಳಲ್ಲಿ ಇದೆಯೆಂದು ಭಗವದ್ಗೀತೆ 14–16, 17

ಶ್ಲೋಕಗಳು ಬೈಬಲ್ ಮತ್ತಾಯ ಸುವಾರ್ತೆ 28–19 ವಾಕ್ಯ, ಖುರ್‌ಆನ್‌ನಲ್ಲಿ 50–21 ಆಯತ್‌ಗಳ ಮೂಲಕ ತಿಳಿದಿದೆ. ಮೂರು ದೈವ ಗ್ರಂಥಗಳಲ್ಲಿ ಹೇಳಲ್ಪಟ್ಟಿರುವ ಜ್ಞಾನ ದೇವರು ಒಬ್ಬನೇ, ದೇವರ ಜ್ಞಾನ ಒಂದೇ, ದೇವರನ್ನು ಸೇರಬೇಕಾದ ಗಮ್ಯ ಕೂಡಾ ಒಂದೇ ಎನ್ನುವ ವಿಷಯ ತಿಳಿದುಹೋಗಿದೆ. ಮತಗಳನ್ನು ಮಾನವರು ತಯಾರು ಮಾಡಿಕೊಂಡಿದ್ದಾರೆಂದು ಅರ್ಥವಾಗಿದೆ.

ನಾನು ಮುಸ್ಲೀಮ್ ಆಗಿ ನನ್ನ ಜವಾಬ್ದಾರಿ ನಮಾಜ್, ರೋಜಾ, ಜಕಾತ್, ಹಜ್ ಮಾಡಿ, ಹದೀಸುಗಳಲ್ಲಿ ತಿಳಿಸಿದ ಪ್ರವಕ್ತ ಆದೇಶಗಳನ್ನು (ಸುನ್ನತ್‌ಗಳನ್ನು) ಆಚರಿಸಿದರೇ ನಾನು ನಿಜವಾದ ಮುಸ್ಲೀಮ್‌ನಂತೆ ಬದಲಾಗಿ ಜನ್ನತ್ (ಸ್ವರ್ಗ) ದಲ್ಲಿ ಸೇರಿ ಹೋಗುತ್ತೇನೆಂದು ನಂಬಿದ್ದೆ. ಆದರೇ ಖುದಾ ಬರೆದ ಗ್ರಂಥಗಳು ಓದಿದ ನಂತರ ನಿಜವಾದ ಜ್ಞಾನ ತಿಳಿದ ನಂತರ, ಅಸಲು ನಿಜವಾದ ಮುಸ್ಲೀಮ್ ಯಾರೋ ತಿಳಿದುಹೋಗಿದೆ. ನಿಜವಾದ ನಮಾಜ್, ಜಕಾತ್, ರೋಜಾ, ಹಜ್, ಅಲ್ಲಾಹ್ ಸೃಷ್ಠಿ ಆದಿಯಲ್ಲಿ ಇದ್ದ ಹೆಸರುಗಳು ಎಂದು, ಅವುಗಳನ್ನು ಕುರಿತು ವಿವರಣೆ ಓದಿದ ನನಗೆ ಯಾವುದೋ ರಹಸ್ಯ ನಿಧಿ (ದೈವನಿಧಿ) ಸಿಕ್ಕಿದಷ್ಟು ಆನಂದ ಉಂಟಾಗಿದೆ. ಜನ್ನತ್ ದೋಜಖ್ (ಸ್ವರ್ಗ, ನರಕ) ಅಂದರೆ ಏನು? ಮೋಕ್ಷ (ಆಖಿರತ್) ಅಂದರೆ ಏನು? ಅವು ಎಲ್ಲಿ ಇವೆ? ಹೇಗೆ ಇವೆ? ಎನ್ನುವ ವಿಷಯ ತಿಳಿದಿದೆ. ನಮ್ಮ ಮುಸ್ಲೀಮ್‌ರಿಗೆ ತಿಳಿಯದ ಮೋಕ್ಷ (ಆಖಿರತ್, ನಜಾತ್) ಕೂಡ ಇದೆಯೆಂದು ಸ್ವಾಮಿಯವರ ಗ್ರಂಥಗಳ ಜ್ಞಾನದ ಮೂಲಕ ತಿಳಿದು ಆನಂದಭರಿತನಾಗಿದ್ದೇನೆ.

ತೌರಾತ್ ಎಂದರೇ ಭಗವದ್ಗೀತೆ ಎಂದು ಪ್ರಪಂಚಕ್ಕೇ ತಿಳಿಯದ ದೊಡ್ಡ ರಹಸ್ಯ ಜ್ಞಾನವನ್ನು ಹೇಳಿದ ಪ್ರಪಂಚದಲ್ಲೇ ಮೊದಲ ವ್ಯಕ್ತಿಯಾಗಿ ಕೀರ್ತಿ ಗಳಿಸಿದ್ದಾರೆ. ಖುರ್‌ಆನ್‌ನಲ್ಲಿ ತೌರಾತ್ ಎಂದರೆ ಏನೋ 5–44, 46, 48, 68 ಮತ್ತು 62–5 ಆಯತ್‌ಗಳ ಮೂಲಕ ರುಜು ಮಾಡಿದ್ದಾರೆ. ಖುರ್‌ಆನ್‌ನಲ್ಲಿ 25–1, 2–53, 8–8 ಪ್ರಕಾರ ಫುರ್‌ಖಾನ್(ಒರೆ ಕಲ್ಲು) ಮುಹಮ್ಮದ್ ಪ್ರವಕ್ತರಿಗೆ ಕೊಟ್ಟಿರುವ ಒರೆ ಕಲ್ಲು, ಮೂಸಾಗೆ ಕೊಟ್ಟಿರುವ ಒರೆಕಲ್ಲು (ಫುರ್‌ಖಾನ್) ಒಂದೇ ಎಂದು, ಆ ಆಯತ್‌ಗಳ ಮೂಲಕ ತೌರಾತ್

(ಭಗವದ್ಗೀತೆ) ನಲ್ಲಿ ಇರುವ ಜ್ಞಾನ, ಖುರ್‌ಆನ್‌ನಲ್ಲಿ ಇರುವ ಜ್ಞಾನ ಒಂದೇಯೆಂದು ಮತ್ತು ತೌರಾತ್ ಖುರ್‌ಆನ್‌ಗೆ ಮಾತೃ ಗ್ರಂಥ (ಉಮ್ಮುಲ್ ಕಿತಾಬ್) ಎಂದು, ಬೈಬಲ್ ಕೂಡಾ ಭಗವದ್ಗೀತೆಯಲ್ಲಿನ ಭಾಗವೇಯೆಂದು ಪರಮ ರಹಸ್ಯ ತಿಳಿದಿದೆ. ಮೂರು ಗ್ರಂಥಗಳು ಒಂದೇ ದೈವವನ್ನು ಕುರಿತು, ಮೂರು ಆತ್ಮಗಳ ಕುರಿತು ಹೇಳಿರುವವೆಂದು ಜೀವಾತ್ಮಗಳಾದ ನಮಗೆ ಮುಕ್ತಿಯನ್ನು ಪ್ರಸಾದಿಸುವವೇ ಮೂರು ಗ್ರಂಥಗಳು ಎಂದು ಸ್ವಾಮಿ ಅವರ ಜ್ಞಾನದ ಮೂಲಕ ತಿಳಿದಿದೆ.

ತೌರಾತ್ (ಭಗವದ್ಗೀತೆ) ನಲ್ಲಿ ಹೇಳಿದ ಪ್ರಕಾರ ಧರ್ಮಗಳು, ಅಧರ್ಮಗಳು ಅಂದರೇ ಏನು, ಧರ್ಮಗಳು (ಬ್ರಹ್ಮ, ಕರ್ಮ, ಭಕ್ತಿ ಯೋಗಗಳು) ಆಚರಿಸಿದರೇ ಮೋಕ್ಷ ಬರುತ್ತದೆಂದು, ಅಧರ್ಮಗಳು (ದಾನ, ವೇದಗಳು, ಯಜ್ಞಗಳು, ತಪಸ್ಸುಗಳು) ಆಚರಿಸಿದರೇ ಪಾಪ, ಪುಣ್ಯ ಕರ್ಮಗಳು ಅಂಟಿಕೊಂಡು ಜನ್ಮಗಳು ಉಂಟಾಗುತ್ತವೆಂದು ತಿಳಿದಿದೆ. ಧರ್ಮಗಳು ತಿಳಿದು ಆಚರಿಸಿದರೇ ಮೋಕ್ಷ ಪ್ರಾಪ್ತಿಸುತ್ತದೆಂದು, ಈ ವಿಷಯವೇ ಖುರಾನ್‌ನಲ್ಲಿ ಇದೆಯೆಂದು ತಿಳಿದಿದೆ.

ಭಗವದ್ಗೀತೆಯೇ ತೌರಾತ್ ಗ್ರಂಥ ಎಂದು, ತೌರಾತ್ ಹೆಸರಿನೊಂದಿಗೆ ಗ್ರಂಥ ಎಲ್ಲೂ ಇಲ್ಲವೆಂದು ಬೈಬಲ್‌ನಲ್ಲಿ ಮೋಷೇಗೆ, ಖುರ್‌ಆನ್‌ನಲ್ಲಿ ಮೂಸಾಗೆ ಕೊಡಲಾಗಿರುವುದೇ ಭಗವದ್ಗೀತೆ ಗ್ರಂಥ ಎಂದು ಖುರಾನ್ 6–91 ಆಯತ್ ಮೂಲಕ ತಿಳಿದಿದೆ. ಸೃಷ್ಠಿ ಆದಿಯಲ್ಲಿ ದೇವರ ಜ್ಞಾನ ಭಗವದ್ಗೀತೆ ಶ್ಲೋಕ 4–1 ಮೂಲಕ ಪರಮಾತ್ಮ ಮೊದಲು ಸೂರ್ಯನಿಗೆ ಹೇಳಿದ್ದಾನೆ ಎಂದು, ಸೂರ್ಯನು ಮನುವಿಗೆ ಹೇಳಿದ್ದಾನೆಂದು, ಮನುವಿನಿಂದ ಇಕ್ಷ್ವಾಕನೆಂಬ ರಾಜನಿಗೆ ತಿಳಿದಿದೆಯೆಂದು, ಅದೇ ಜ್ಞಾನ (ಜಪರ ಜ್ಞಾನ) 5000 ವರ್ಷಗಳ ಕೆಳಗೆ ಅರ್ಜುನನಿಗೆ ಶ್ರೀಕೃಷ್ಣ ಭಗವಾನ್ ಹೇಳಿದ್ದಾರೆಂದು, ಶ್ರೀ ಕೃಷ್ಣ ಭಗವಾನೇ ಮೋಷೇ (ಮೂಸಾ) ಗೆ ಸ್ವಪ್ನದಲ್ಲಿ ಭಗವದ್ಗೀತೆ ಗ್ರಂಥವನ್ನು ತೌರಾತ್ ಹೆಸರಿನಿಂದ ಕೊಟ್ಟಿದ್ದಾರೆಂದು ನಂತರ ಶ್ರೀಕೃಷ್ಣ ಭಗವಾನೇ ಏಸುಪ್ರಭುವಾಗಿ ಬಂದು ಬೈಬಲ್ (ಇಂಜೀಲ್) ಜ್ಞಾನ ಹೇಳಿದ್ದಾರೆಂದು ನಂತರ ಸೂರ್ಯನೇ ಹೆಸರು

ಬದಲಾಯಿಸಿಕೊಂಡು ಜಿಬ್ರಯೇಲ್ ಆಗಿ ತೆರೆ ಹಿಂಬದಿಯಿಂದ ಮಹಮ್ಮದ್ ಪ್ರವಕ್ತಗೆ ಹೇಳಿದ್ದಾರೆ ಎಂದು ತಮ್ಮ ಗ್ರಂಥಗಳ ಮೂಲಕ ತಿಳಿದಿದೆ. ಯಾರಿಗೂ ತಿಳಿಯದ ಪರಮ ರಹಸ್ಯಗಳು ತಿಳಿದು ಆನಂದಭರಿತನಾಗಿದ್ದೇನೆ.

ತೌರಾತ್ (ಭಗವದ್ಗೀತೆ) ಪ್ರಕಾರ ನನಗೆ ತಿಳಿದ ನಿಗೂಢ ಜ್ಞಾನ ಸೃಷ್ಠಿ ಆದಿಯಲ್ಲಿ ಪರಮಾತ್ಮ ನಾಲ್ಕು ಭಾಗಗಳು (ಪ್ರಕೃತಿ, ಜೀವಾತ್ಮ, ಆತ್ಮ, ಪರಮಾತ್ಮ) ಆಗಿ ವಿಭಜಿಸಲ್ಪಟ್ಟಿದ್ದಾನೆ ಎಂದು, ಪ್ರಕೃತಿ ಎನ್ನುವುದು ಚರ, ಅಚರ ಪ್ರಕೃತಿಯಾಗಿ ಎರಡು ಭಾಗಗಳಾಗಿ ಬದಲಾಗಿದೆಯೆಂದು, ಚರ ಪ್ರಕೃತಿಯಾಗಿ 24 ಭಾಗಗಳ ಶರೀರ, ಅದರಲ್ಲಿ ಜೀವಾತ್ಮ, ಆತ್ಮ, ಪರಮಾತ್ಮಗಳು ಸೇರಿ 27 ಭಾಗಗಳು ಎಂದು, ಪ್ರಕೃತಿಯೇ ಮಾಯೆಯಾಗಿ ಗುಣಗಳ ರೂಪದಲ್ಲಿ (ಸೈತಾನ್) ತಲೆಯಲ್ಲಿ ಇದೆಯೆಂದು, ಬ್ರಹ್ಮ, ಕಾಲ, ಕರ್ಮ, ಗುಣ ಚಕ್ರಗಳು ಮನುಷ್ಯ ಕರ್ಮಗಳನ್ನು ಅನುಭವಿಸುವುದಕ್ಕೆ ಮೂಲ ಎಂದು, ಜೀವಾತ್ಮನಾದ ನಾನು ಗುಣಚಕ್ರದಲ್ಲಿ ರವೆಯಷ್ಟಾಗಿ ಇದ್ದೇನೆಂದು, ಆತ್ಮ ಶರೀರವೆಲ್ಲಾ ವ್ಯಾಪಿಸಿ ಇದೆಯೆಂದು, ಪರಮಾತ್ಮ ಶರೀರದ ಒಳಗೆ, ಹೊರಗೆ ಅಣುವಣುವು ವ್ಯಾಪಿಸಿ ಇದೆಯೆಂದು ಖುರಾನ್ 6–95 ಆಯತ್ ಪ್ರಕಾರ ಜೀವಾತ್ಮಗಳ ಜನ್ಮಗಳು ಮೂರು ವಿಧಗಳು ಅಂಡಜ, ಪಿಂಡಜ, ಉದ್ಭಿಜಗಳಾಗಿ ಇವೆಯೆಂದು, ಕರ್ಮಗಳು ಮೂರು ವಿಧಗಳು ಪ್ರಾರಬ್ಧ, ಆಗಾಮಿಕ, ಸಂಚಿತ ಕರ್ಮಗಳೆಂದು, ಮರಣಗಳು ಕೂಡಾ (ಮೂರು+ಒಂದು) ನಾಲ್ಕು ಎಂದು ಕಾಲ, ಅಕಾಲ, ತಾತ್ಕಾಲಿಕ, ಕೊನೆಯ ಮರಣಗಳು ಎಂದು ಅದ್ಭುತವಾದ ಅಗೋಚರ ಜ್ಞಾನ ತಿಳಿದಿದೆ.

ನಾನು ಜೀವಾತ್ಮನೆಂದು, ಪರಮಾತ್ಮ ಅಂಶನೆಂದು, ಕರ್ಮ ಬಂಧದಲ್ಲಿ ಸಿಲುಕಿಕೊಂಡು ಪ್ರಕೃತಿ ಕೈಯ್ಯಲ್ಲಿ ಇದ್ದೇನೆಂದು, ಕರ್ಮಗಳನ್ನು ನಾಶ ಮಾಡಿಕೊಂಡರೇನೇ ಜನ್ಮ, ಕರ್ಮ ಬಂಧನಗಳಿಂದ ಮುಕ್ತಿ ಉಂಟಾಗುತ್ತದೆಂದು, ಮುಕ್ತಿ ಉಂಟಾಗಬೇಕೆಂದರೇ ಭಗವದ್ಗೀತೆಯಲ್ಲಿ ಭಗವಾನನು ಹೇಳಿದ ಧರ್ಮಗಳು ಬ್ರಹ್ಮ, ಕರ್ಮ, ಭಕ್ತಿ ಯೋಗಗಳ ಮೂಲಕವೇ ಮೋಕ್ಷ ಪ್ರಾಪ್ತಿಸುತ್ತದೆ ಎಂದು ತಿಳಿದಿದೆ. 1. ಬ್ರಹ್ಮಯೋಗ ಮನಸ್ಸನ್ನು ನಿಯಂತ್ರಿಸುವುದು ಎಂದು 2. ಕರ್ಮಯೋಗ ಅಹಂ (ಅಹಂಭಾವ) ಇಲ್ಲದಂತೆ, ನಾನೇ ಕಾರ್ಯಗಳನ್ನು

ಮಾಡುತ್ತಿದ್ದೇನೆನ್ನುವ ಭಾವ ಇಲ್ಲದಂತೆ ಕಾರ್ಯಗಳು ಮಾಡುವುದು ಎಂದು 3. ಭಕ್ತಿಯೋಗ ಧರ್ಮಗಳ ಪ್ರಚಾರ, ದೈವಸೇವೆ ಎಂದು ಈ ಮೂರರ ಮೂಲಕವೇ ಕರ್ಮಗಳು ನಾಶ ಮಾಡಿಕೊಂಡು, ಜನ್ಮಗಳು ಇಲ್ಲದಂತೆ ಮಾಡಿಕೊಂಡು ಮೋಕ್ಷ ಹೊಂದಬೇಕೆಂದು ತಿಳಿದಿದೆ.

ಸೂಕ್ಷ್ಮದಲ್ಲಿ ಮೋಕ್ಷ ಎಂದರೇ ಭಗವಂತನನ್ನು ತಿಳಿದು ಸಾಕಾರವನ್ನು ಆರಾಧಿಸುವುದು ಭಗವದ್ಗೀತೆ ಶ್ಲೋಕಗಳು, 4–9, ಮತ್ತು 18–66 ಮೂಲಕ ತಿಳಿದಿವೆ. ಶಿಶು ಜನ್ಮಿಸಿದ ನಂತರ ಮೊದಲ ಶ್ವಾಸದಲ್ಲಿ ಜೀವಾತ್ಮ ಪ್ರವೇಶಿಸಿದ ನಂತರವೇ ಪ್ರಾಣ ಬರುತ್ತದೆಂದು, ಮನುಷ್ಯನಿಗೆ ಸ್ಥೂಲ, ಸೂಕ್ಷ್ಮ ಎರಡು ಶರೀರಗಳು ಇವೆಯೆಂದು ಹಾಗೇ ಸ್ಥೂಲ, ಸೂಕ್ಷ್ಮ ಕರ್ಮಗಳು ಕೂಡಾ ಎರಡು ವಿಧಗಳು ಎಂದು, ದೆವ್ವಗಳು, ಭೂತಗಳ ಕುರಿತು ರಹಸ್ಯಗಳು ತಿಳಿದಿವೆ. ಬ್ರಹ್ಮವಿದ್ಯೆ ಶಾಸ್ತ್ರ ಆಧ್ಯಾತ್ಮಿಕ ಜ್ಞಾನನಿಧಿ ಎಂದು ತಿಳಿದುಹೋಗಿದೆ. ಮನುಷ್ಯನ ಶರೀರದಲ್ಲಿನ ಬ್ರಹ್ಮನಾಡಿಯಲ್ಲಿಯೇ, ವಿಶ್ವ ಅಡಗಿದೆಯೆಂದು, ಷಟ್ ಶಾಸ್ತ್ರಗಳು, ಸರ್ವ ವಿದ್ಯೆಗಳು, ಹೊರಗೆ ಸಮಸ್ತ ಪ್ರಪಂಚ, ಪ್ರಪಂಚವನ್ನು ಸೃಷ್ಟಿಸಿದ ದೇವರು, ಮೋಕ್ಷಪ್ರಾಪ್ತಿ ಕೂಡಾ, ಸರ್ವವು ಬ್ರಹ್ಮನಾಡಿಯಲ್ಲಿ ಅಡಗಿವೆಯೆನ್ನುವ ನಿಜ ತಿಳಿದಿದೆ.

ಖುರ್‌ಆನ್ ಮತ್ತು ಮುಸ್ಲೀಮ್‌ರ ವಿಷಯದಲ್ಲಿ ಅವರು ಅಜ್ಞಾನದಿಂದ, ಅಪೋಹಗಳಿಂದ, ಭ್ರಮೆಗಳಿಂದ ಖುರ್‌ಆನ್ ಗ್ರಂಥದಲ್ಲಿನ ಜ್ಞಾನವನ್ನು ಹೇಗೆ ತಪ್ಪು ಭಾವವನ್ನು ಹೇಳಿಕೊಳ್ಳುತ್ತಿದ್ದಾರೋ, ತಮ್ಮ ಜ್ಞಾನ ಗ್ರಂಥಗಳ ಮೂಲಕ ನಿಜಗಳು ತಿಳಿದು ವಿಸ್ಮಯ, ಆಶ್ಚರ್ಯ ಉಂಟಾಯಿತು. ಖುರಾನ್‌ನಲ್ಲಿ ಅಡಗಿರುವ ರತ್ನಗಳು, ಮುತ್ತುಗಳನ್ನು ಸಾಧಾರಣ ಕಲ್ಲುಗಳಾಗಿ ಭಾವಿಸಿದ ನಮ್ಮ ಮುಸ್ಲೀಮ್‌ರಿಗೆ ಹಂಚಿಕೊಟ್ಟಿರುವ ಜ್ಞಾನ ಪ್ರದಾತನಾಗಿ ನಿಮಗೆ ನನ್ನ ಸಾಷ್ಟಾಂಗ ಸುಮಾಂಜಲಿಯನ್ನು ತಿಳಿಸುತ್ತಿದ್ದೇನೆ.

ಸೂರಾ 3 ಆಯತ್ 7 ರ ಮುಖಾಂತರ ಖುರಾನ್‌ನಲ್ಲಿ ಮುಹ್ಕಮಾತ್ (ಸ್ಥೂಲ), ಮುತಷಾಬಿಹಾತ್ (ಸೂಕ್ಷ್ಮ) ಆಯತ್‌ಗಳು ಇವೆಯೆಂದು, ಶರೀರದಲ್ಲಿ ಅಡಗಿರುವ ಸೂಕ್ಷ್ಮ ಜ್ಞಾನವನ್ನು ಕುರಿತು ತಿಳಿಯದ ಜ್ಞಾನವನ್ನು **ಅಂತಿಮ**

**ಗ್ರಂಥದಲ್ಲಿ, ಜ್ಞಾನ ವಾಕ್ಯಗಳು, ವಜ್ರ ವಾಕ್ಯಗಳು** ಎನ್ನುವ ಎರಡು ಜ್ಞಾನ ಗಣಿಗಳನ್ನು ನಮ್ಮ ಮುಸ್ಲೀಮ್ ಸಮಾಜಕ್ಕೆ ಕೊಟ್ಟಿರುವ ತಮ್ಮ ಋಣ ತೀರಿಸಲು ಸಾಧ್ಯವಿಲ್ಲ. ಒಟ್ಟಾರೆ ಮುಸ್ಲೀಮ್ ಸಮಾಜಕ್ಕೇ ತಿಳಿಯದ ಅಗೋಚರ ಜ್ಞಾನವನ್ನು ತಿಳಿಸಿದ ಖುದಾಗೆ (ಅಲ್ಲಾಹ್ ಜ್ಞಾನ ಅಲ್ಲಾಹ್‌ಗೆ ಹೊರತು ಯಾರಿಗೂ ತಿಳಿದಿಲ್ಲ) ಭಗವಂತನಿಗು, ಆದರಣಕರ್ತಗೂ ನನ್ನ ಸಜ್‌ದಾ ಮಾಡುತ್ತಿದ್ದೇನೆ.

ಏಳು ಆಕಾಶಗಳು, ಭೂಮಿ ಅವುಗಳ ಮಧ್ಯದಲ್ಲಿರುವ ಸಮಸ್ತ ಅಂದರೇ ಶರೀರ ಎಂದು 30–8, 11–123, 74–30,31 ಆಯತ್‌ಗಳ ಮೂಲಕ, ಮುಸ್ಲೀಮ್‌ರಿಗೆ ಇಲ್ಲಿಯವರೆಗು ತಿಳಿಯದ ದೊಡ್ಡ ರಹಸ್ಯ ತಿಳಿಸಿದ್ದೀರ. ಶರೀರದಲ್ಲೇ ಮೂರು ಆತ್ಮಗಳು ಇವೆಯೆಂದು ಖುರಾನ್ ಆಯತ್ 50–21 ಮೂಲಕ **"ನಡೆಸಲ್ಪಡುವವನು ಜೀವಾತ್ಮ, ನಡೆಸುವವನು ಆತ್ಮ, ಸಾಕ್ಷಿಯಾಗಿ ನೋಡುವವನು ಪರಮಾತ್ಮ"** ಎಂದು, ಇವು ಭಗವದ್ಗೀತೆಯಲ್ಲಿ 14–16,17 ಮತ್ತು ಬೈಬಲ್‌ನಲ್ಲಿ ಮತ್ತಾಯ ಸುವಾರ್ತೆಯಲ್ಲಿ 28–19 ರಲ್ಲಿ ಮೂರು ದೈವಗ್ರಂಥಗಳಲ್ಲಿ ಇರುವ ವಿಷಯ ಮುಸ್ಲೀಮ್ ಸಮಾಜಕ್ಕೆ ಒಂದು ಕಣ್ತೆರೆಸುವಂತೆ ಇದೆ. ಮುಸ್ಲೀಮ್‌ರು ಆಚರಿಸುವ ನಮಾಜ್ ತಪಸ್ಸು ಎಂದು, ನಿಜವಾದ ನಮಾಜ್ ಶರೀರದಲ್ಲೇ ಇದೆಯೆಂದು 4–103, 3–191 ಆಯತ್‌ಗಳ ಮೂಲಕ ತಿಳಿದಿದೆ. ಜಕಾತ್ ಎಂದರೇ ನೂರು ರೂಪಾಯಿಗಳಿಗೆ 2.50 ರೂಪಾಯಿಗಳನ್ನು ಬಡವರಿಗೆ ಹಂಚುವುದು ಅಲ್ಲವೆಂದು ದೈವ ಸೇವೆ, ಧರ್ಮಪ್ರಚಾರವೆಂದು (ಭಗವದ್ಗೀತೆಯಲ್ಲಿ ಹೇಳಿದ ಬ್ರಹ್ಮ, ಕರ್ಮ, ಭಕ್ತಿ ಯೋಗಗಳು ಎಂದು) ಖುರಾನ್ 48–15,16,17 ಆಯತ್‌ಗಳೆಂದು, ರೋಜಾ ಎಂದರೇ ಅನ್ನ ತಿನ್ನದೇ ಇರುವುದಲ್ಲವೆಂದು, ಖುರ್‌ಆನ್ 2–187 ಆಯತ್ ಮೂಲಕ ಆತ್ಮನನ್ನು ಹೊಂದುವುದು ಉಪವಾಸವೆಂದು ತಿಳಿದಿದೆ. ಹಜ್‌ನಲ್ಲಿ ಮಾಡುವ ಆಚರಣೆ ಸಫಾ, ಮರ್ವಾ, ಚರ, ಅಚರ ಪ್ರಕೃತಿಗೆ ಗುರುತುಗಳೆಂದು ತಿಳಿಯದ ರಹಸ್ಯ ತಿಳಿದಿದೆ.

ಮುಸ್ಲೀಮ್‌ರಿಗೆ ಖುರ್‌ಆನ್‌ನಲ್ಲಿ ಸೂಕ್ಷ್ಮ ಆಯತ್‌ಗಳು ಅರ್ಥವಾಗದೇ ಸ್ಥೂಲವಾಗಿ ಹೇಳಿಕೊಂಡು ಒಟ್ಟಾರೆ ಮುಸ್ಲೀಮ್ ಸಮಾಜಕ್ಕೆ ಖುರ್‌ಆನ್

ದೂರ ಮಾಡಿ ಆಯತ್ 2–79 ಪ್ರಕಾರ ಮನುಷ್ಯರು ಹದೀಸುಗಳನ್ನು ಬರೆದುಕೊಂಡು ಅವು ಮಾತ್ರವೇ ಬೋಧಿಸುತ್ತಾ ಒಟ್ಟಾರೆ ಮುಸ್ಲೀಮ್ ಸಮಾಜವನ್ನು 72 ವರ್ಗಗಳಾಗಿ ಸೀಳಿಸಿ, ಖುರ್‌ಆನ್‌ಗು, ಅಲ್ಲಾಹ್ ಗು ದೂರ ಮಾಡಿ ಖುರ್‌ಆನ್ ಆಯತ್‌ಗಳು 2–159, 41–40 ಪ್ರಕಾರ ಅಲ್ಲಾಹ್ ಶಾಪಕ್ಕೆ ಗುರಿಯಾಗಿದ್ದಾರೆ. ಸ್ವರ್ಗವೇ ಜೀವಿತ ಲಕ್ಷ್ಯವಾಗಿ ಇಟ್ಟುಕೊಂಡಿದ್ದಾರೆ. ಮುಸ್ಲೀಮ್‌ರಿಗೆ ಸ್ವರ್ಗ, ನರಕ ಹೊರತು, ಪರಲೋಕ (ಮೋಕ್ಷ) ಅಂದರೆ ಏನೋ? ಅವು ಎಲ್ಲಿ ಇರುತ್ತವೋ ತಿಳಿಯದಂತಿದ್ದಾರೆ. ಆಯತ್‌ಗಳು 10–106, 107, 108 ಸ್ವರ್ಗ, ನರಕವನ್ನು ಕುರಿತು, 3–14, 6–127, 13–24, 30–7,8, 40–39, 40 ಪರಲೋಕವನ್ನು ಕುರಿತು ಖುರ್‌ಆನ್‌ನಲ್ಲಿ ಇದ್ದರೂ, ಮುಸ್ಲೀಮ್ ಹಿರಿಯರಿಗೆ ತಿಳಿಯದೆ ಹೋಗಿರುವುದು ದುರದೃಷ್ಟಕರ.

ಮುಸ್ಲೀಮ್‌ರಿಗೆ ಪುನರ್ಜನ್ಮಗಳು ಇವೆಯೆಂದು ಖುರ್‌ಆನ್ ಆಯತ್ ಗಳು 7–29, 22–66, 36–68, 40–11 ಹೇಳುತ್ತಿವೆ. ಗತ ಜನ್ಮದಲ್ಲಿ ಮಾಡಿಕೊಂಡ ಕರ್ಮಗಳು ಅನುಭವಿಸುವುದಕ್ಕೇ ಜನ್ಮಗಳು ಇವೆಯೆಂದು ಆಯತ್ 10–4 ಹೇಳುತ್ತಿದೆ. ಮುಸ್ಲೀಮ್‌ರಿಗೆ ತಬ್ದೀರ್ (ಕರ್ಮ) ಅಂದರೇ ಪೂರ್ತಿಯಾಗಿ ತಿಳಿದಿಲ್ಲ. ಆಯತ್ 9–51, 57–22 ಹುಟ್ಟುವುದಕ್ಕಿಂತ ಮೊದಲೇ ಎಲ್ಲಾ ಬರೆಯಲ್ಪಟ್ಟಿವೆಯೆಂದರೇ ಏನು ಬರೆಯಲ್ಪಟ್ಟಿವೆಯೋ ತಿಳಿಯದೆ ಅಯೋಮಯದಲ್ಲಿ ಇದ್ದಾರೆ. 7–187, 30–56 ಪ್ರಳಯವನ್ನು ಕುರಿತು, 9–5, 5–32 ಜೀಹಾದ್ ಕುರಿತು, 72–6, 3–41 ಜಿನ್ನಾತರನ್ನು ಕುರಿತು, 40–40, 48–5 ಸ್ತ್ರೀಯರಿಗೆ ಸ್ವರ್ಗವನ್ನು ಕುರಿತು ಖುರಾನ್‌ನಲ್ಲಿ ಸ್ಪಷ್ಟವಾಗಿ ಇದ್ದರೂ ತಿಳಿಯದಂತಿದ್ದಾರೆ.

97–1,2,3,4,5 ಖುರ್‌ಆನ್ ಆಯತ್‌ಗಳ ಮೂಲಕ ಸೃಷ್ಠಿ ರಹಸ್ಯ ತಿಳಿದಿದೆ. ಅದಕ್ಕೆ ಭಿನ್ನವಾಗಿ ಮುಸ್ಲೀಮ್‌ರು ಲೈಲ ತುಲ್ ಖದ್ರಿ ಅಂದರೇ ರಂಜಾನ್ ಅವತರಿಸಿದ ದಿನ ಎಂದು ಹೇಳಿಕೊಳ್ಳುತ್ತಾ ಅಧರ್ಮ ಆಚರಣೆ ಮಾಡುತ್ತಿದ್ದಾರೆ. ತಮ್ಮ ಗ್ರಂಥಗಳ ಜ್ಞಾನದ ಮೂಲಕ ನಿಜವಾದ ಮುಸ್ಲೀಮ್‌ಗಿ ಬದಲಾಗಿದ್ದೇನೆ. ತಮಗೆ ಸಾಷ್ಟಾಂಗ ನಮಸ್ಕಾರಗಳು.

# ಮುಸ್ಲೀಮ್ ಸಮಾಜಕ್ಕೆ ನನ್ನ ವಿಜ್ಞಪ್ತಿ ಏನೆಂದರೆ!

ಒಟ್ಟಾರೆ ಮುಸ್ಲೀಮ್ ಸಮಾಜವು ಖುರ್‌ಆನ್‌ನಲ್ಲಿ ಅಲ್ಲಾಹ್ ಹೇಳಿದ ಖುರ್‌ಆನ್‌ನಲ್ಲಿ ಇರುವ ಸುರಾ 3 ಆಯತ್ 7 ರ ಪ್ರಕಾರ ಮುಹ್ಕಮಾತ್, ಮುತಷಾಬಿಹಾತ್ ಅಂದರೇ ಸ್ಥೂಲವಾಕ್ಯಗಳು, ಸೂಕ್ಷ್ಮವಾಕ್ಯಗಳು ಅಂದರೆ ಏನೋ ತಿಳಿಯದೆ ಅಜ್ಞಾನದಿಂದ, ಖುರ್‌ಆನ್ ಪ್ರವಕ್ತರಿಗೇ ಅರ್ಥವಾಗುತ್ತದೆ, ನಮಗೆ ಅರ್ಥವಾಗುವುದಿಲ್ಲವೆಂದು, ಪ್ರವಕ್ತ ಜೀವಿತ ವಿಧಾನವೇ ನಾವು ಆಚರಿಸಬೇಕೆಂದು ಮುಸ್ಲೀಮ್ ಹಿರಿಯರು, ಹದೀಸುಗಳು ಬರೆದು ಅವುಗಳನ್ನು ಮಾತ್ರವೇ ಬೋಧಿಸುತ್ತಾ ಖುರ್‌ಆನ್ ಜ್ಞಾನಕ್ಕೆ, ಅಲ್ಲಾಹ್‌ಗೆ ಒಟ್ಟು ಮುಸ್ಲೀಮ್ ಸಮಾಜವನ್ನು ದೂರ ಮಾಡಿ, ತೀರದ ಅನ್ಯಾಯ ಮಾಡಿ ಅಲ್ಲಾಹ್ ಶಾಪಕ್ಕೆ ಗುರಿಯಾಗಿದ್ದಾರೆ (ಆಯತ್‌ಗಳು 2–159, 41–40). ಖುರ್‌ಆನ್ ಆಯತ್ 6–91 ರಲ್ಲಿ "ನಿಮ್ಮ ಹಿರಿಯರಿಗೆ ತಿಳಿಯದ ವಿಷಯಗಳು ಎಷ್ಟೋ ತೌರಾತ್‌ನಲ್ಲಿ ತಿಳಿಯಲ್ಪಟ್ಟಿವೆಯೆಂದು" ಇದೆ. ಖುರ್‌ಆನ್ ಆಯತ್ 2–79 ಪ್ರಕಾರ ಮನುಷ್ಯರು ಬರೆದ ಹದೀಸುಗಳನ್ನು ಬಿಟ್ಟು, ನಿಜವಾದ ಅಲ್ಲಾಹ್ ಭಕ್ತರಾಗಿ, ಖುರ್‌ಆನ್ ಆಯತ್ 51–56 ಪ್ರಕಾರ ಅಲ್ಲಾಹ್‌ನನ್ನು, ನಿಜಜ್ಞಾನ ತಿಳಿದು ಆರಾಧಿಸೋಣ. ಮುಸ್ಲೀಮ್ ಹಿರಿಯರು ಅವರಿಗೇ ಖುರ್‌ಆನ್ ಪ್ರಕಾರ ನಿಜ ಜ್ಞಾನ ತಿಳಿಯದೆ ತಬ್ದೀರ್ ಕುರಿತು, ಪುನರ್ಜನ್ಮಗಳ ಕುರಿತು, ಪ್ರಳಯ ಕುರಿತು, ಜೀಹಾದ್ ಕುರಿತು ಸ್ವರ್ಗ, ನರಕ, ಮೋಕ್ಷ ಕುರಿತು, ಮುಖ್ಯವಾಗಿ ನಮಾಜ್, ಜಕಾತ್, ರೋಜಾ, ಹಜ್ ಕುರಿತು ಅರ್ಥವಾಗದೆ ತಪ್ಪು ಭಾವದೊಂದಿಗೆ ಹದೀಸುಗಳನ್ನು ಬರೆದು, ಖುರ್‌ಆನ್ ಜ್ಞಾನ ತಪ್ಪು ಭಾವವನ್ನು ಹೇಳಿ, ಮುಸ್ಲೀಮ್ ಸಮಾಜವನ್ನು 72 ವರ್ಗಗಳಾಗಿ ಸೀಳಿಸಿದ್ದಾರೆ. ಸ್ವರ್ಗವನ್ನು ಹೊಂದುವುದೇ ಜೀವಿತ ಲಕ್ಷ್ಯವಾಗಿ ಹದೀಸುಗಳನ್ನು ಬೋಧಿಸುತ್ತಿದ್ದಾರೆ.

ಮುಸ್ಲೀಮ್‌ರೇ! ಇಂದಿಗಾದರೂ ಎಚ್ಚರಗೊಳ್ಳಿರಿ. ಅಲ್ಲಾಹ್ ನಮ ಗೋಸ್ಕರ ಖುರ್‌ಆನ್ ಆಯತ್ 2–186 ಪ್ರಕಾರ ಒಬ್ಬ ವ್ಯಕ್ತಿಯಲ್ಲಿ ದೈವಶಕ್ತಿ ಮೂಲಕ ನಿಜವಾದ ಜ್ಞಾನವನ್ನು ತಿಳಿಸುವುದಕ್ಕೆ ಕಳುಹಿಸಿ ನಮ್ಮನ್ನು ನಿಜವಾದ ಮುಸ್ಲೀಮ್‌ರಾಗಿ, ಸಂಪೂರ್ಣ ಮುಸ್ಲೀಮ್‌ರನ್ನಾಗಿ ಮಾಡುವುದಕ್ಕೆ ಕಳುಹಿಸಿ,

ಯೋಗೀಶ್ವರರ ಮೂಲಕ **"ಅಂತಿಮ ದೈವ ಗ್ರಂಥದಲ್ಲಿ ಜ್ಞಾನ ವಾಕ್ಯಗಳು, ವಜ್ರ ವಾಕ್ಯಗಳು"** ಎಂದು ಮುಸ್ಲೀಮ್ ಸಮಾಜಕ್ಕೆ ತಿಳಿಯದ ಖುರ್‌ಆನ್ ಸೂಕ್ಷ್ಮ ಆಯತ್‌ಗಳ ಜ್ಞಾನವನ್ನು ಅಲ್ಲಾಹ್ ಪ್ರೇರಣೆಯಿಂದ (ಸಂಕಲ್ಪದಿಂದ) ನಮಗೆ ಎರಡು ಗ್ರಂಥಗಳನ್ನು ಅವುಗಳಿಗೆ ಅನುಬಂಧ ಗ್ರಂಥಗಳನ್ನು ಬರೆದು ಕೊಟ್ಟಿದ್ದಾರೆ. ಆದ್ದರಿಂದ ಸ್ವರ್ಗಕ್ಕೆ ತೆಗೆದುಕೊಂಡು ಹೋಗುವ ಹದೀಸುಗಳನ್ನು ಬಿಟ್ಟು, ಮೋಕ್ಷಕ್ಕೆ ತೆಗೆದುಕೊಂಡು ಹೋಗುವ ಖುರ್‌ಆನ್ ಆಯತ್ 40–39, 41 ನ್ನು ತೆಗೆದುಕೊಂಡು ಆಚರಿಸಿ, 72 ವರ್ಗಗಳನ್ನು ಬಿಟ್ಟು ನಿಜವಾದ ಅಲ್ಲಾಹ್ ಮಾರ್ಗದೊಳಗೆ ಬರಬೇಕೆಂದು ಅದಕ್ಕಾಗಿ ಯೋಗೀಶ್ವರರ ಗ್ರಂಥಗಳನ್ನು ಅಸೂಯೆ ಇಲ್ಲದೆ ಓದಿ, ಅರ್ಥ ಮಾಡಿಕೊಂಡು ಆಚರಿಸಿ ನಿಜವಾದ 73 ನೇ ಅಲ್ಲಾಹ್ ವರ್ಗದೊಳಗೆ ಬಂದು ಮೋಕ್ಷ ಹೊಂದೋಣ (ಖುದಾ ಹಫಿಜ್). ಖುದಾಗೆ ನಿಮ್ಮ ಪ್ರಿಯ ಭಕ್ತನ ವಿಜ್ಞಪ್ತಿ. ನನಗೆ ಸಂಪೂರ್ಣ ಜ್ಞಾನ ಪ್ರಸಾದಿಸೆಂದು, ಭಗವದ್ಗೀತೆ ಶ್ಲೋಕ 17–66 ರ ಪ್ರಕಾರ ಶರಣು ಬೇಡಿಕೊಳ್ಳುತ್ತಿದ್ದೇನೆ. ನನ್ನ ಜೀವನ ಧ್ಯೇಯ ದೈವ ಜ್ಞಾನ ತಿಳಿದುಕೊಳ್ಳುತ್ತಾ ದೈವಸೇವೆಯಾಗಿ ಧರ್ಮಪ್ರಚಾರ ಮಾಡಿಕೊಳ್ಳಬೇಕೆಂದು ನಿರ್ಣಯಿಸಿಕೊಂಡಿದ್ದೇನೆ. ಅದಕ್ಕೆ ಬೇಕಾದ ಶಕ್ತಿ ಸಾಮರ್ಥ್ಯಗಳನ್ನು ಅನುಗ್ರಹಿಸಿರೆಂದು, ನಿಮ್ಮ ದರ್ಶನ ಭಾಗ್ಯವನ್ನು ಕಲ್ಪಿಸಬೇಕೆಂದು, ಈ ಜ್ಞಾನ ಹೇಳಿರುವುದು ಸಾಕ್ಷ್ಯಾತ್ತೂ ಖುದಾ, ಭಗವಂತನೇ, ಆದರಣ ಕರ್ತನೇ ಎಂದು ಸಂಪೂರ್ಣವಾಗಿ ವಿಶ್ವಾಸಿಸುತ್ತಾ.... ಸಾಷ್ಟಾಂಗ ನಮಸ್ಕಾರಗಳನ್ನು ಮಾಡುತ್ತಿದ್ದೇನೆ.

ಇಂತಿ ನಿಮ್ಮ ಪ್ರಿಯ ಭಕ್ತನು

**ಸಯ್ಯದ್ ಸಲ್ಮಾನ್‌ಷಾ**

*****

**ಒಂದು ವಿಷಯವನ್ನು ಸಮರ್ಥಿಸುವುದಕ್ಕೆ ಶಾಸ್ತ್ರ ಎಷ್ಟು ಅವಶ್ಯವೋ, ಹಾಗೇ ಒಂದು ವಿಷಯವನ್ನು ಖಂಡಿಸುವುದಕ್ಕೂ ಶಾಸ್ತ್ರ ಅಷ್ಟೇ ಅವಶ್ಯವಾಗುತ್ತದೆ.**

***

**ಅಸತ್ಯವನ್ನು ಸಾವಿರ ಮಂದಿ ಹೇಳಿದರೂ, ಅದು ಸತ್ಯವಲ್ಲ,**
**ಸತ್ಯವನ್ನು ಸಾವಿರ ಮಂದಿ ಅಲ್ಲಗಳೆದರೂ, ಅದು ಅಸತ್ಯವಲ್ಲ.**